# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 02-01-2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), (ಪೂರ್ವ) |
| ಲತಾ. ಕೆ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆ.ಆರ್.ಪುರಂ) (ಹೆಚ್.ಎ.ಎಲ್) |
| ವಿ. ವಾಗಿಶ್ – ಸದಸ್ಯರು | ಸಹಾಯಕ ಕಂದಾಯ ಅದಿಕಾರಿ (ಶಾಂತಿನಗರ) |
| ಮಂಜುನಾಥ – ಸದಸ್ಯರು | |
| ಎಲ್. ನಾಗರತ್ನ – ಸದಸ್ಯರು | |
| ವರಲಕ್ಷ್ಮಿ. ಜೆ – ಸದಸ್ಯರು | |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *01]. ವಿಷಯದ ಸಂಖ್ಯೆ :–ತೆಆಸ್ಥಾಸ/226/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ (ಯೋಜನೆ) ರವರು ಕಡತದ ಕಂಡಿಕೆ ಸಂಖ್ಯೆ 19 ರಲ್ಲಿ ನಮೂದಿಸಿರುವ 6 ಕಾಮಗಾರಿಗಳ ಒಟ್ಟು ಮೊತ್ತ ರೂ.599.41 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಮುಖ್ಯ ಅಭಿಯಂತರರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕಂಡಿಕೆ ಸಂಖ್ಯೆ 24 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ, ಲೆಕ್ಕ ಶೀರ್ಷಿಕೆ ಮೂಲ ಭೂತ ಸೌಕರ್ಯಗಳು ಮುಖ್ಯ ರಸ್ತೆ/ಆರ್ಟಿರಿಯಲ್/ಉಪ ಆರ್ಟಿರಿಯಲ್ ರಸ್ತೆಗಳು ಪಿ.ಸಂಖ್ಯೆ 2019 ರಲ್ಲಿ ಒಟ್ಟು 6 ಕಾಮಗಾರಿಗಳ ಮೊತ್ತ ರೂ.599.41 ಲಕ್ಷಗಳ ಅನುದಾನವನ್ನು ಒದಗಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

### *02]. ವಿಷಯದ ಸಂಖ್ಯೆ :–ತೆಆಸ್ಥಾಸ/236/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ ಹನುಮಂತೇಗೌಡ, ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 72 ಇವರು ಮುದ್ದಯ್ಯನ ಪಾಳ್ಯ ರಿಂಗ್ ರಸ್ತೆಗೆ ಹಾದು ಹೋಗುವ ರಸ್ತೆಯಲ್ಲಿ ಪ್ರತಿ ನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಮೊತ್ತ ರೂ.89.00 ಲಕ್ಷಗಳಿಗೆ ಅನುಮೋದನೆ ನೀಡಲು ಕೋರಿದ್ದು, ಕಾರ್ಯಪಾಲಕ ಅಭಿಯಂತರರು – ರಸ್ತೆ ಮೂಲಭೂತ ಸೌಕರ್ಯ ಇವರು ತುರ್ತು ಕಾಮಗಾರಿಗಳ ಅನುದಾನದಲ್ಲಿ ಜಾಬ್ ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುತ್ತಾರೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿದ್ದು, 2010–11ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಂಡ ಕಾಮಗಾರಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಅಡಿ ಸೂಕ್ತ ಅನುದಾನ ಒದಗಿಸಿಕೊಂಡು ಅನುಷ್ಟಾನಗೊಳಿಸುವುದರ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡುವುದರ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/237/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎನ್. ಎಸ್. ನಂದೀಶರೆಡ್ಡಿ ರವರು ಹೆಚ್.ಎ.ಎಲ್. ಏರ್‌ಪೋರ್ಟ್ ವಾರ್ಡ್ 87ರ ಅನ್ನಸಂದ್ರಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾರ್ವಜನಿಕರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ರೂ.300.00 ಲಕ್ಷಗಳ ಅನುದಾನವನ್ನು ಮತ್ತು ವಾರ್ಡ್ 87ರ ನೆಲ್ಲೂರುಪುರದಿಂದ ರೆಡ್ಡಿಪಾಳ್ಯ ಎಲ್.ಬಿ.ಶಾಸ್ತ್ರಿನಗರ ಮೂಲಕ ವಿಭೂತಿಪುರ ಕೆರೆವರೆಗೆ ರಾಜಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷ ಒಟ್ಟು ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕೆಂದು ಕೋರಿ ಪತ್ರವನ್ನು ಸಲ್ಲಿಸಿರುತ್ತಾರೆ. ಪತ್ರವನ್ನು ಲಗತ್ತಿಸಿದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂದಿಸಿದಂತೆ ಅನುದಾನದ ಮೊತ್ತ ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/305/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 28–09–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160 ರ 07 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ ಶ್ರೀ ಎಂ ಶ್ರೀನಿವಾಸ್, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರು 2011–12 ನೇ ಸಾಲಿನ ಆಯವ್ಯಯದ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಅನುಮೋದನೆ ನೀಡಲು ತಮ್ಮ ಪತ್ರದ ಮುಖಾಂತರ ಕೋರಿರುತ್ತಾರೆ.

2011–12 ನೇ ಸಾಲಿನ ಕರಡು ಆಯವ್ಯಯ ಮಂಡಿಸುವ ಮುನ್ನ ಅಗತ್ಯ ತುರ್ತು ಕಾಮಗಾರಿಗಳಿಗಾಗಿ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡಿರುವ ಮೊತ್ತ ರೂ. 6600.00 ಲಕ್ಷಗಗಳು ಹಾಗೂ ಚಾಲ್ತಿ ಕಾಮಗಾರಿಗಳಿಗೆ ರೂ. 8500.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

( ರೂ. ಲಕ್ಷಗಳಲ್ಲಿ)

| 2011–12 ರ ಕರಡು ಆಯವ್ಯಯದಲ್ಲಿ ಒಟ್ಟಾರೆ ಮೀಸಲಿಟ್ಟ ಅನುದಾನ (6600+8500) | 2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಜಾಬ್ ನಂಬರ್ ನೀಡಿರುವ ಮೊತ್ತ | ಜಾಬ್ ಸಂಖ್ಯೆ ನೀಡಲು ಸ್ಥಾಯಿ ಸಮಿತಿ ಮತ್ತು ಮಾನ್ಯ ಆಯುಕ್ತರವರಿಂದ ಅನುಮೋದಿತ ಮೊತ್ತ | ಜಾಬ್ ನೀಡುವುದರ ಬಗ್ಗೆ ಅನುಮೋದನೆಗೆ ಮಂಡಿಸಿರುವ ಮೊತ್ತ | ರಸ್ತೆ ಗುಂಡಿ ಮುಚ್ಚಲು ಜೆಂಟ್ ಪ್ಯಾಕರ್ ಮಿಸನ್ ಖರೀದಿಸಲು ಮೀಸಲಿಡಲು ಮೌಖಿಕವಾಗಿ ಸೂಚಿಸಿರುವ ಮೊತ್ತ | ಬಾಕಿ ಇರುವ ಮೊತ್ತ |
|---|---|---|---|---|---|
| **8500.000** | **2533.420** | **1383.77** | **485.08** | **2500.00** | **1597.73** |

2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ 7 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *05]. ವಿಷಯದ ಸಂಖ್ಯೆ :–ತೆಆಸ್ಥಾಸ/310/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್ಆರ್(4)45/2011–12, ದಿನಾಂಕ ಃ 30–09–2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ. ರುದ್ರೇಶ್, ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ (ರಿ), ನಂ. 208, ಮಿಲೇನಿಯಂ ಶಾಲೆ ಎದುರು, ಆರ್.ಎಂ.ವಿ. 2ನೇ ಹಂತ, ರಾಜಗೋಪಾಲ ರಸ್ತೆ, ಸಂಜಯನಗರ ಅಂಚೆ, ನಾಗಶೆಟ್ಟಿ ಹಳ್ಳಿ, ಬೆಂಗಳೂರು – 560 094. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಸಾಂಸ್ಕೃತಿಕ ನೆಲೆಗಟ್ಟಿಗಾಗಿ ಸಮಾಜದ ಉನ್ನತಿಗಾಗಿ ಶಿಕ್ಷಣದ ಪ್ರಗತಿಗಾಗಿ ಪರ್ಯಾಯಗಳನ್ನು ಹುಡುಕುವ ಮೂಲಕ ಸಮಾನತೆಯ ಮತ್ತು ಜನಪರಂಪರೆಯ ಸಮಾಜ ನಿರ್ಮಾಣಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾಂಸ್ಕೃತಿಕ ಸಂಸ್ಥೆಯೆಂದು ಹೆಸರು ಮಾಡಿರುವುದಾಗಿ ತಿಳಿಸಿರುತ್ತಾರೆ. ಕಳೆದ 20 ವರ್ಷಗಳಿಂದ ರಂಗಭೂಮಿ, ಪೌರಾಣಿಕ, ಜನಪದ ಸಾಹಿತ್ಯ, ಪರಿಸರ, ಶಿಕ್ಷಣ ಗ್ರಾಮೀಣಾಭಿವೃದ್ಧಿ ಮುಂತಾದ ಎಲ್ಲಾ ರಂಗಗಳಲ್ಲೂ ಕೆಲಸ ಮಾಡುತ್ತಿರುವ ನಾಡಿನ ಸಾಹಿತಿ, ಚಿಂತಕರ, ಕಲಾವಿದರ ಮೆಚ್ಚುಗೆ ಪಡೆದಿರುವುದಾಗಿ ತಿಳಿಸಿರುತ್ತಾರೆ. ಪ್ರತಿ ವರ್ಷದಂತೆ ಈ ವರ್ಷವೂ ತಮ್ಮ ವೇದಿಕೆ ವತಿಯಿಂದ ನಾಟಕೋತ್ಸವ–2011 ಕಾರ್ಯಕ್ರಮವನ್ನು ನಯನ ರಂಗಮಂದಿರ ಮತ್ತು ರವೀಂದ್ರ ಕಲಾ ಕ್ಷೇತ್ರದಲ್ಲಿ ದಿನಾಂಕ 05.09.2011 ಮತ್ತು 06.09.2011 ರಂದು ಎರಡು ದಿನಗಳ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಈ ಎರಡು ದಿನಗಳಲ್ಲಿ ಎರಡು ನಾಟಕ ಮತ್ತು ಒಂದು ರಂಗ ಗೀತೆ ಕಾರ್ಯಕ್ರಮ ಮಾಡುತ್ತಿದ್ದು ಈ ಮೂರು ಕಾರ್ಯಕ್ರಮಗಳಿಗೂ ಪಾಲಿಕೆ ವತಿಯಿದ ಪ್ರಾಯೋಜನೆ/ಧನ ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

ಪೂಜ್ಯ ಮಹಾಪೌರರು ಹಾಗೂ ಶ್ರೀ ಎನ್.ಎಂ. ಕೃಷ್ಣ ಮೂರ್ತಿ ಸದಸ್ಯರು ವಾರ್ಡ್–19 (ಸಂಜಯ್ ನಗರ) ರವರು ಟಿಪ್ಪಣಿ ಬರೆದು ಸದರಿ ಸಂಘಕ್ಕೆ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/312/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್ಆರ್(4)43/2011–12, ದಿನಾಂಕ ಃ 30–09–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಗೀತಾ ಬಾಲಿ, ನೃತ್ಯ ನಿರ್ದೇಶಕಿ ಮತ್ತು ಕಾರ್ಯದರ್ಶಿ, ಗೀತಾ ನೃತ್ಯ ಶಾಲಾ (ರಿ) ನಂ. 140, 4ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜೆ.ಪಿ. ನಗರ, 3ನೇ ಹಂತ, (ವಿಜಯಾ ಬ್ಯಾಂಕ್ ರಸ್ತೆ) ಬೆಂಗಳೂರು – 560 078 ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ತಾವು ಪರಿಶಿಷ್ಟ ವರ್ಗಕ್ಕೆ ಸೇರಿದ ಹೆಸರಾಂತ ನೃತ್ಯ ಕಲಾವಿದೆ. ತಮ್ಮ ನೃತ್ಯ ಶಾಲೆಯು 4ನೇ ಅಕ್ಟೋಬರ್ 1988 ರಲ್ಲಿ ಸ್ಥಾಪನೆಯಾಗಿದ್ದು, ಸುಮಾರು 50 ವರ್ಷಗಳಿಂದ ಅನೇಕ ವಿದ್ಯಾರ್ಥಿಗಳಿಂದ ನೃತ್ಯ ಶಿಕ್ಷಣವನ್ನು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ ರಮಣ ಮಹರ್ಷಿ ಅಂಧರ ಶಾಲೆಯಲ್ಲಿ ಅಂಧ ಮಕ್ಕಳಿಗೆ ನೃತ್ಯ ಶಿಕ್ಷಣವನ್ನು ಸಹಾ ಕೊಟ್ಟಿರುತ್ತೇನೆಂದು, ತರಬೇತಿ ನೀಡಿದ ವಿದ್ಯಾರ್ಥಿಗಳ ಪ್ರದರ್ಶನವನ್ನು ವಿಕ್ಷೀಸಿ ಅನೇಕ ಗಣ್ಯರು ಮತ್ತು ವಿಮರ್ಶಕರು ಮುಕ್ತ ಕಂಠದಿಂದ ಪ್ರಶಂಸಿರುತ್ತಾರೆಂದು ತಿಳಿಸಿರುತ್ತಾರೆ. ತಾನು ಭರತನಾಟ್ಯ ಮತ್ತು ಕೂಚಿಮಡಿ ನೃತ್ಯದಲ್ಲಿ ಪರಿಣಿತಿ ಹೊಂದಿದ್ದು ದೇಶದಾದ್ಯಂತ ಸಾವಿರಕ್ಕೂ ಹೆಚ್ಚು ನೃತ್ಯ ಪ್ರದರ್ಶನಗಳನ್ನಿತ್ತು ಗಣ್ಯರಿಂದ ಪ್ರಶಂಸೆ ಗಳಿಸಿದ್ದು, ತನ್ನ ನೃತ್ಯ ಸೇವೆಗಾಗಿ ಕರ್ನಾಟಕದಿಂದ ರಾಜ್ಯೋತ್ಸವ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ–2009, ವಿಶೇಷ ಶಿಕ್ಷಕರ ಪ್ರಶಸ್ತಿ–2003, ಡಾ॥ ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ–2001, ಹಾಗೂ ಕೆಂಪೇಗೌಡ ಪ್ರಶಸ್ತಿ–2001 ಅನ್ನು ಪಡೆದಿರುವುದಾಗಿ ತಿಳಿಸಿ ತಮ್ಮ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ 2 ದಿನಗಳ "ನಾದ ನೃತ್ಯಾಂಜಲಿ" ನೃತ್ಯ ಕಾರ್ಯಕ್ರಮವನ್ನು ದಿನಾಂಕ 23, 24ರ ಡಿಸೆಂಬರ್ 2011ರಂದು ಆಯೋಜಿಸಿದ್ದು, ಪಾಲಿಕೆಯಿಂದ ರೂ. 6.00 ಲಕ್ಷಗಳ ಧನ ಸಹಾಯವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ನೃತ್ಯ ಶಾಲೆಗೆ **2010–11** ನೇ ಸಾಲಿಗೆ **ರೂ. 25,000/–** (ಇಪ್ಪತ್ತೈದು ಸಾವಿರ) ಗಳ ಅನುದಾನ/ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *07]. ವಿಷಯದ ಸಂಖ್ಯೆ :–ತೆಆಸ್ಥಾಸ/320/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)58/2011–12, ದಿನಾಂಕ : 03–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಹರೀಶ್. ಬಿ.ಇ. ಮಾನ್ಯ ಉಪ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೆಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ, ಸದರಿಯವರು ಚಾನ್ ಕೀ ಕರಾಟೆ ಆರ್ಟ್ ಅಕಾಡೆಮಿ(ರಿ) ಹಾಗೂ ಕಲಾ ಮಂದಿರ ಸಂಸ್ಥೆಯು ಹೆಚ್. ಪಾರ್ವತಮ್ಮ ಹಿರೇಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇಲ್ಲಿ ಸುಮಾರು 20 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಯ ಮುಖಾಂತರ ಅನೇಕ ಬಡ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವುದಾಗಿ ಪ್ರಸ್ತಾಪಿಸಿ, **ಮಾ:ಅನಿಲ್**, ನಂದಿನಿ ಬಡಾವಣೆ ಇವರು ದಿನಾಂಕ 26–06–2011 ರಂದು ನಗರದ ನಾಗರಭಾವಿ ವೃತ್ತದಿಂದ ಡಾ: ರಾಜ್ ಕುಮಾರ್ ಪುಣ್ಯ ಭೂಮಿ ಕಂಠೀರವ ಸ್ಟುಡಿಯೋ, ಇಲ್ಲಿಯವರೆಗೆ 8 ಕಿ.ಮೀ ದೂರದವರೆಗೆ **"ನಾನ್ ಸ್ಟಾಫ್ ಡಬಲ್ ಹ್ಯಾಂಡ್ ಕಾರ್ಟ್ ವೀಲ್"** ನ್ನು ಕೇವಲ 1 ಗಂಟೆ 14 ನಿಮಿಷದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿ ಲಿಮ್ಕಾ ಪುಸ್ತಕದಲ್ಲಿ ದಾಖಲೆ ನಿರ್ಮಿಸಿ, ಈ ಮೂಲಕ ರಾಜ್ಯದ ಗೌರವವನ್ನು ಎತ್ತಿ ಹಿಡಿದಿರುತ್ತಾರೆ. ಇವರು ಬಡ ಕುಟುಂಬದಿಂದ ಬಂದವರಾಗಿರುತ್ತಾರೆ. ಪಾಲಿಕೆ ವತಿಯಿಂದ ಆತನ ಕುಟುಂಬಕ್ಕೆ ಆರ್ಥಿಕ ಸಹಾಯವನ್ನು ಮಹಾನಗರ ಪಾಲಿಕೆ ವತಿಯಿಂದ ಕೊಡಿಸಿ ಕೊಡಲು ಕೋರಿಕೊಂಡಿರುತ್ತಾರೆಂದು ತಿಳಿಸಿ, ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೆಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇವರು ನೀಡಿರುವ ಪತ್ರವನ್ನು ಪರಿಗಣಿಸಿ ಧನ ಸಹಾಯ ಮಾಡಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ–ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/– ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಪ್ರಸಕ್ತ 2011–12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವಿಗೆ ರೂ. 10,000/– ಗಳ (ಹತ್ತು ಸಾವಿರಗಳು) ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/321/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)64/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಶ್ರೀ ಗುರುದೇವ ನಾರಾಯಣ ಕುಮಾರ್, ಅಧ್ಯಕ್ಷರು, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ (ನೋ), ನಂ. 619/620, 13ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560 040. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡ ಚಳವಳಿಯ ಧೀಮಂತ ನಾಯಕರು, ಮಾಜಿ ಶಾಸಕರು ಆಗಿದ್ದ ಜಿ. ನಾರಾಯಣ ಕುಮಾರ್ ಸ್ಥಾಪಿತ ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಆಶ್ರಯದಲ್ಲಿ ನವೆಂಬರ್ 1 2011 ರಿಂದ ಒಂದು ತಿಂಗಳ ಕಾಲ ಅದ್ದೂರಿ "ಕನ್ನಡ ರಾಜ್ಯೋತ್ಸವ" ವನ್ನು ಕೆಂಪೇಗೌಡ ರಸ್ತೆಯಲ್ಲಿರುವ "ಬನ್ನಪ್ಪ ಪಾರ್ಕ್ ಆಟದ ಮೈದಾನ" ದಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತೇವೆಂದು ನವೆಂಬರ್ 1 ರಂದು ನಾಡಿನ ವೈಭವವನ್ನು ಸಾರುವ ಮೆರವಣಿಗೆಯಲ್ಲಿ ಜಾನಪದ ತಂಡಗಳು, ಸ್ಥಬ್ಧ ಚಿತ್ರಗಳು, ಕಲಾವಿದರು ಪಾಲ್ಗೊಳ್ಳುವರು, ನವೆಂಬರ್ 1 ರಿಂದ ಸತತವಾಗಿ ಒಂದು ತಿಂಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆಂದು ತಿಳಿಸುತ್ತಾ, ಪ್ರತಿ ವರ್ಷವು ಮಹಾನಗರ ಪಾಲಿಕೆ ಧನ ಸಹಾಯವನ್ನು ನೀಡುತ್ತಿರುವುದು ಸರಿಯಷ್ಟೆ, ಈ ವರ್ಷವು ರಾಜ್ಯೋತ್ಸವ ಕಾರ್ಯಕಲಾಪಗಳಿಗೆ ಮತ್ತು ಕಾರ್ಯಕ್ರಮದ ವ್ಯವಸ್ಥೆಗೆ ಬಹಳ ಖರ್ಚು ವೆಚ್ಚ ತಗುಲುತ್ತಿರುವುದು ಮಹಾನಗರ ಪಾಲಿಕೆ ವತಿಯಿಂದ ರೂ. 20.00 (ಇಪ್ಪತ್ತು ಲಕ್ಷ) ಧನ ಸಹಾಯವನ್ನು ನೀಡಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿಗೆ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪಾಲಿಕೆ ವತಿಯಿಂದ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *09]. ವಿಷಯದ ಸಂಖ್ಯೆ :–ತೆಆಸ್ಥಾಸ/322/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್ಆರ್(4)88/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಶ್ರೀ ಜಯದುರ್ಗಾ ಮತ್ತು ಮಾರಿಯಮ್ಮ ದೇವಸ್ಥಾನ ಟ್ರಸ್ಟ್ (ರಿ), ನಂ. 1/ಎ, ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನ ರಸ್ತೆ, ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಎದುರು, ಬೆಂಗಳೂರು – 560 047 ರವರು ಮನವಿ ಸಲ್ಲಿಸಿ ಶಾಂತಿ ನಗರ ವಿಧಾನ ಸಭಾ ಕ್ಷೇತ್ರ (ಬಿ.ಬಿ.ಎಂ.ಪಿ. ವಾರ್ಡ್ ನಂ.116 ನೀಲಸಂದ್ರ) ವ್ಯಾಪ್ತಿಯಲ್ಲಿ ಬರುವ ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನಕ್ಕೆ ಕಳೆದ ವರ್ಷ ಅನುದಾನ ಮಂಜೂರು ಮಾಡುವಂತೆ ಅಗತ್ಯವಾದ ಮಾಹಿತಿಗಳೊಂದಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅನುದಾನ ಮಂಜೂರಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಸದರಿ ದೇವಸ್ಥಾನದ ಕಟ್ಟಡ ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ರೂ. 27.00 ಲಕ್ಷಗಳಾಗಿದ್ದು, ಹಣಕಾಸಿನ ಕೊರತೆಯಿಂದಾಗಿ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುತ್ತವೆ. ಈ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ಪಂಗಡದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದು (ಕೊಳಚೆ ಪ್ರದೇಶ) ಆರ್ಥಿಕ ಸಹಾಯವಿಲ್ಲದೆ ದೇವಸ್ಥಾನ ಅಭಿವೃದ್ಧಿಗೆ ಅನಾನುಕೂಲ ಉಂಟಾಗಿರುತ್ತದೆ ತಿಳಿಸಿ, ಪಾಲಿಕೆ ವತಿಯಿಂದ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸದರಿ ದೇವಸ್ಥಾನಕ್ಕೆ ರೂ. 10.00 (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಮಂಜೂರು ಮಾಡುವ ಮೂಲಕ ದೇವಸ್ಥಾನದ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

2010–11 ನೇ ಸಾಲಿನಲ್ಲಿ ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಿರಿಸಲಾಗಿದ್ದ ರೂ. 10.00 ಕೋಟಿಗಳು ಹಂಚಿಕೆಯಾಗಿದ್ದರ ಹಿನ್ನೆಲೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 28–03–2011 ರಂದು ನಡೆದ ಸಭೆಯ ನಡವಳಿಗಳು ವಿಷಯದ ಸಂಖ್ಯೆ : ತೆಆಸ್ಥಾಸ/335/2010–11 ರಲ್ಲಿ ಸದರಿ ಸಂಸ್ಥೆಯ ಪ್ರಸ್ತಾವನೆಯನ್ನು ಕೈಬಿಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *10]. ವಿಷಯದ ಸಂಖ್ಯೆ :-ತೆಆಸ್ಥಾಸ/325/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)66/2011-12, ದಿನಾಂಕ : 10-10-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ನಗರದ ವಿವಿಧ ಸಂಘ ಸಂಸ್ಥೆಗಳಿಗೆ (ಗ್ರಾಂಟ್-ಇನ್-ಏಡ್) ಹಣವನ್ನು ಬಿಡುಗಡೆ ಮಾಡುವಾಗ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರದ ಸಂಖ್ಯೆ: ನಅಇ 108 ಎಂಎನ್‌ಯು 03 ದಿನಾಂಕ: 27.05.2003 ರ ಪತ್ರದಲ್ಲಿ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮೋದನೆಯನ್ನು ಪಡೆದ ನಂತರವೇ ಪಾವತಿಸಲು ಹಾಗೂ ಪ್ರತಿ ವರ್ಷ ಒಂದೇ ಸಂಸ್ಥೆಗೆ ಈ ಅನುದಾನ ನೀಡದಂತೆ ಆದೇಶಿಸಿರುತ್ತದೆ. ಸರ್ಕಾರದ ಪತ್ರದ ಸಂಖ್ಯೆ ನಅಇ 108 ಎಂಎನ್‌ಯು 2003 ದಿನಾಂಕ 01.08.2003 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ವಿವಿಧ ಸಂಘ-ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನ ನೀಡುವ ಬಗ್ಗೆ ಯಾವುದೇ ನಿರ್ದಿಷ್ಟವಾದ ಮಾರ್ಗಸೂಚಿಗಳನ್ನು ರಚಿಸಿರುವುದಿಲ್ಲವಾದ ಕಾರಣ ಸಂಘ-ಸಂಸ್ಥೆಗಳಿಗೆ ಸಹಾಯಾನುದಾನ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗಸೂಚಿಗಳನ್ನು ರಚಿಸಿಕೊಂಡು ವಿವಿಧ ಸಂಘ-ಸಂಸ್ಥೆಗಳಿಗೆ ಪಾಲಿಕೆಯ ಹಂತದಲ್ಲಿಯೇ ಈ ಬಾಬ್ತಿಗೆ ಅನುಮೋದಿತ ಆಯವ್ಯಯ ಮಿತಿಯಲ್ಲಿ ಅನುದಾನವನ್ನು ಮಂಜೂರು ಮಾಡಲು ಸೂಚನೆ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ನಗರದ ಯಾವುದೇ ಸಂಘ ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನವನ್ನು ಬಿಡುಗಡೆ ಮಾಡುವಾಗ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಲಾದ ಸಮಸಂಖ್ಯೆಯ ಟಿಪ್ಪಣಿ ದಿನಾಂಕ: 25.11.2003 ರಂತೆ ಟಿಪ್ಪಣಿಯನ್ನು ಮಂಡಿಸಿದ್ದು, ಸದರಿ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಗಳಲ್ಲಿ "ಈಗಾಗಲೇ ಸಹಾಯ ಧನ ಕೋರಿರುವ ಸಂಘ ಸಂಸ್ಥೆಗಳಿಗೆ ಅನುದಾನವನ್ನು ನೀಡುವುದು ಹಾಗೂ ಟಿಪ್ಪಣಿಯಲ್ಲಿ ಮಂಡಿಸಿರುವ ಮಾರ್ಗಸೂಚಿಗಳನ್ನು 2004-05 ನೇ ಸಾಲಿನಿಂದ ಕಡ್ಡಾಯವಾಗಿ ಪಾಲಿಸುವುದು" ಎಂಬುದಾಗಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ.

ಅದರಂತೆ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಎಸಿ(ಎ)ಪಿಆರ್ 1991/03-04 ದಿನಾಂಕ 18.03.2004 ರ ಆಯುಕ್ತರವರ ಕಛೇರಿ ಆದೇಶದಂತೆ ಸಂಘ ಸಂಸ್ಥೆಗಳಿಗೆ ಗ್ರಾಂಟ್-ಇನ್-ಏಡ್ ಹಣವನ್ನು ಬಿಡುಗಡೆ ಮಾಡಲು ನಗರ ಪಾಲಿಕೆಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

1. ಅನುದಾನಕ್ಕಾಗಿ ಅರ್ಜಿ ಸಲ್ಲಿಸುವ ಯಾವುದೇ ಒಂದು ಸಂಘ/ಸಂಸ್ಥೆಯು ನೊಂದಾಯಿತ ಸಂಸ್ಥೆಯಾಗಿರಬೇಕು ಹಾಗೂ ಸದರಿ ಸಾಲಿನ ಅಥವಾ ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿ ಸಲ್ಲಿಸಬೇಕು.
2. ಕನಿಷ್ಠಪಕ್ಷ ಹಿಂದಿನ ಮೂರು ವರ್ಷಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು/ಸಭೆ ಸಮಾರಂಭಗಳು/ಸಾರ್ವಜನಿಕ ಸೇವೆ ಇತ್ಯಾದಿ ನಡೆಸಿರುವ ಬಗ್ಗೆ ದಾಖಲೆ ಸಲ್ಲಿಸಬೇಕು.
3. ಸದರಿ ಸಂಸ್ಥೆಯ ಇರುವಿಕೆಯ ಬಗ್ಗೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ ಅಥವಾ ಆರೋಗ್ಯ ವೈದ್ಯಾಧಿಕಾರಿಗಳ ವತಿಯಿಂದ ಸ್ಥಳೀಯ ಮಹಜರ್ ಮಾಡಿ ವರದಿಯನ್ನು ಸಲ್ಲಿಸತಕ್ಕದ್ದು.
4. ಸದರಿ ಸಂಸ್ಥೆಯು ಈಗಾಗಲೇ ಪಾಲಿಕೆಯ ವತಿಯಿಂದಾಗಲೀ ಅಥವಾ ಮಹಾಪೌರರ ನಿಧಿಯಿಂದಾಗಲೀ ಅನುದಾನ ಪಡೆದಿದ್ದ ಪಕ್ಷದಲ್ಲಿ ಯಾವ ಸಾಲಿನಲ್ಲಿ ಪಡೆದಿತ್ತೆಂಬ ಬಗ್ಗೆ ಮಾಹಿತಿ ಪಡೆಯತಕ್ಕದ್ದು.
5. ಸಂಘ ಸಂಸ್ಥೆಗಳು ಕೋರಿರುವಂತಹ ಕಾರ್ಯಕ್ರಮಗಳಿಗೆ ತಗುಲುವ ವೆಚ್ಚದ ಬಗ್ಗೆ ಅಂದಾಜು ಸಲ್ಲಿಸುವುದು.
6. ಸಂಸ್ಥೆಯು ಸಭೆ-ಸಮಾರಂಭವನ್ನು ಸೂಚಿತ ದಿನದಂದು ಏರ್ಪಡಿಸಿದ್ದ ಬಗ್ಗೆ ವರದಿ.

7. ಅನುದಾನವನ್ನು ಐದು ವರ್ಷಗಳಿಗೊಮ್ಮೆ ಒಂದು ಸಂಘ/ಸಂಸ್ಥೆಗೆ ಅನುದಾನ ನೀಡಲಾಗುವುದು.
8. ಅನುದಾನ ಕೋರುವ ಸಂಘ/ಸಂಸ್ಥೆಗಳ ಕಾರ್ಯಚಟುವಟಿಕೆಗಳು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರಬೇಕು. ಜಾತ್ಯಾತೀತವಾದ, ಧರ್ಮಾತೀತವಾದ ಹಾಗೂ ರಾಜಕೀಯೇತರ ಕಾರ್ಯಕ್ರಮ ವಾಗಿರಬೇಕು.
9. ಮೇಲಿನಂತೆ ಅರ್ಹತೆಗಳಿರುವ ಸಂಘ/ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 5 ಸಾವಿರಗಳಿಂದ 10 ಸಾವಿರ ರೂ. ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ 10 ಸಾವಿರದಿಂದ 25 ಸಾವಿರ ರೂ. ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸಿದೆ.
10. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ/ಆಸ್ಪತ್ರೆಗಳಿಗೆ ಹಾಗೂ ಕ್ರೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ.
11. ಪಾಲಿಕೆಯಿಂದ ಅನುದಾನವನ್ನು ಪಡೆದ ಸಂಸ್ಥೆಯು ಸದರಿ ಅನುದಾನವನ್ನು ನಿಗಧಿತ ಉದ್ದೇಶಗಳಿಗೆ ಸಕ್ರಮವಾಗಿ ಬಳಸಿರುವ ಬಗ್ಗೆ ನಿರ್ದಿಷ್ಠ ನಮೂನೆಯಲ್ಲಿ ಲೆಕ್ಕ ಪತ್ರ ಹಾಗೂ ಪ್ರಮಾಣಪತ್ರಗಳನ್ನು ಒದಗಿಸಲು ಬದ್ಧರಾಗಿರತಕ್ಕದ್ದು.
12. ಪಾಲಿಕೆಯಿಂದ ಅನುದಾನವನ್ನು ಒಂದು ವಿವೇಚನಾತ್ಮಕ ಸಹಾಯವಾಗಿದ್ದು, ಇದರಿಂದ ಯಾವುದೇ ಸಂಸ್ಥೆಯು ಅಂತಹ ಅನುದಾನ ಪಡೆಯುವ ಹಕ್ಕನ್ನು ಸೃಷ್ಠಿಸಿದಂತಾಗುವುದಿಲ್ಲ. ಯಾವುದೇ ಸಂದರ್ಭದಲ್ಲಿ ಪಾಲಿಕೆಯಿಂದ ನೀಡಲಾದ ಅನುದಾನವನ್ನು ತಡೆಹಿಡಿಯುವ ಅಥವಾ ನಿರ್ದಿಷ್ಠ ಉಪಯೋಗಗಳಿಗೆ ನೀಡಲಾದ ಅನುದಾನವನ್ನು ಸಕಾಲದಲ್ಲಿ ಕ್ರಮಬದ್ಧವಾಗಿ ಉಪಯೋಗಿಸದಿರುವ ಸಂದರ್ಭದಲ್ಲಿ ಅಂತಹ ಅನುದಾನವನ್ನು ಪಾಲಿಕೆಯು ಹಿಂದಕ್ಕೆ ಪಡೆಯಬಹುದಾಗಿರುತ್ತದೆ.
13. ಅನುದಾನ ಕೋರುವ ಸಂಘ/ಸಂಸ್ಥೆಯು ಏಕಮಾತ್ರ ಸದಸ್ಯರನ್ನೊಳಗೊಂಡ ಸಂಸ್ಥೆಯಾಗಿರಬಾರದು.
14. ಪಾಲಿಕೆಯಿಂದ ಅನುದಾನ ಬಿಡುಗಡೆ ಮಾಡುವ ಮುನ್ನ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ನಿರ್ಣಯದಂತೆ ಬಿಡುಗಡೆ ಮಾಡಬಹುದಾಗಿದೆ.

ಮುಂದುವರೆದಂತೆ, 2010–11 ನೇ ಸಾಲಿನಲ್ಲಿ ಕೊಡುಗೆ ಮತ್ತು ಸಹಾಯಾನುಧಾನ ಲೆಕ್ಕ ಶೀರ್ಷಿಕೆಯಡಿ ಪಾಲಿಕೆ ಸಭೆಯ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಒಟ್ಟು 170 ಸಂಘ/ಸಂಸ್ಥೆಗಳು ಹಾಗೂ ವೈಯಕ್ತಿಕವಾಗಿ ಕ್ರೀಡಾಪಟುಗಳಿಗೆ ಸಹಾಯಧನ/ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. **ಈ ಮಂಜೂರಾತಿಗಳು ಮೇಲ್ಕಂಡ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿದಂತಾಗುತ್ತದೆ.**

**2010–11ನೇ ಆರ್ಥಿಕ ವರ್ಷದಲ್ಲಿ ಸಹಾಯಧನ/ಅನುದಾನ ಪಡೆದುಕೊಂಡಂತಹ ಸಂಘ ಸಂಸ್ಥೆಗಳು ಮತ್ತು ಕ್ರೀಡಾಪಟುಗಳು ಅನುದಾನ/ಸಹಾಯಧನ ಕೋರಿ ಪ್ರಸಕ್ತ ಸಾಲಿನಲ್ಲಿಯೂ ಸಹ ಮನವಿಯನ್ನು ಸಲ್ಲಿಸಿರುತ್ತಾರೆ**

ಹಾಲಿ ಅಳವಡಿಸಿಕೊಂಡಿರುವ ಮಾರ್ಗಸೂಚಿಗಳಲ್ಲಿ ಕ್ರೀಡಾಪಟುಗಳು ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದಂತವರಿಗೆ ವ್ಯಕ್ತಿಗತವಾಗಿ ಅನುದಾನ/ಸಹಾಯಧನ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಪ್ರಸಕ್ತ ಸಾಲಿನಲ್ಲಿಯೂ ಸಹ ಇದೇ ರೀತಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಿದಲ್ಲಿ, ಲೆಕ್ಕ ಪರಿಶೋಧನ ಕೈಗೊಂಡ ಸಂದರ್ಭದಲ್ಲಿ ಅಧಿಕಾರಿ ವರ್ಗದವರು ಸಮಸ್ಯೆಗೆ ಒಳಗಾಗುವುದರ ಜೊತೆಗೆ ಸಾರ್ವಜನಿಕ ಚರ್ಚೆಗೆ ಗ್ರಾಸ ಮಾಡಿ ಕೊಟ್ಟಂತಾಗುತ್ತದೆ.

ಆದ್ದರಿಂದ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಕಟ್ಟುನಿಟ್ಟಾಗಿ ಮಾರ್ಗಸೂಚಿಗಳ ಅನ್ವಯವೇ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ, ಅಥವಾ ಮೇಲ್ಕಂಡ ಹಿನ್ನೆಲೆಯಲ್ಲಿ ಸಂಘ–ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗತವಾಗಿ (ಕ್ರೀಡಾಪಟು, ನೃತ್ಯ ಕಲಾವಿದರು, ರಂಗಭೂಮಿ ಕಲಾವಿದರು, ವಿದ್ಯಾಭ್ಯಾಸ, ಇನ್ನಿತರೇ) ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಲು ಮಾರ್ಗ ಸೂಚಿಗಳನ್ನು ಮಾರ್ಪಡಿಸಬೇಕಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಹಾಗೂ ಪಾಲಿಕೆ ಸಭೆಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *11]. ವಿಷಯದ ಸಂಖ್ಯೆ :–ತೆಆಸ್ಥಾಸ/331/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)60/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಮಾನ್ಯ ಉಪಮಹಾಪೌರರು ಟಿಪ್ಪಣಿ ಬರೆದು ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು, ಬೆಂಗಳೂರು – 560 001. ಇವರು ನೀಡಿರುವ ಬೀದಿ ದೀಪದ ಬಗ್ಗೆ ಸಂಶೋಧನಾ ವರದಿ ಮತ್ತು ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ಸಂಶೋಧನೆಯನ್ನು ನಡೆಸುತ್ತಿದ್ದು, ಇದಕ್ಕೆ ಆರ್ಥಿಕ ಸಹಾಯವನ್ನು ಕೇಳಿರುತ್ತಾರೆಂದು ತಿಳಿಸುತ್ತಾ, ಇದನ್ನು ಮಹಾನಗರ ಪಾಲಿಕೆ ವತಿಯಿಂದ ನೀಡಲು ಸಾಧ್ಯವಿದ್ದಲ್ಲಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು ರವರು ಉಪ ಮಹಾಪೌರರಿಗೆ ಮನವಿ ಸಲ್ಲಿಸಿ, ತಾನು 10 ವರ್ಷಗಳಿಂದ ಬೆಂಗಳೂರು ನಗರ ಪರಿಸರ ವಿಜ್ಞಾನದ ಅಧ್ಯಯನ ಮಾಡಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದು ಈಗ ತನ್ನ ಮಾರ್ಗದರ್ಶನದಲ್ಲಿ ಶ್ರೀಮತಿ ಪೂರ್ಣಿಮ ಡಿ.ಎಸ್. ಹಾಗೂ ಶ್ರೀಮತಿ ಬಿ. ನೇತ್ರಾವತಿ ಇವರುಗಳು ಬೆಂಗಳೂರು ನಗರದ ಸೌರಶಕ್ತಿ ಬೀದಿ ದೀಪಗಳ ಕುರಿತು ಅಧ್ಯಯನ ಸಂಶೋಧನೆ ಮಾಡುತ್ತಿದ್ದು, ರಾಯಲಸೀಮಾ ವಿಶ್ವವಿದ್ಯಾನಿಲಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸೌರಶಕ್ತಿ ಬೀದಿ ದೀಪಗಳ ಬಗ್ಗೆ ಪಿ.ಹೆಚ್.ಡಿ. ಪದವಿಗೆ ನೊಂದಾಯಿಸಿದ್ದು ಎರಡು ವರ್ಷಗಳಿಂದ ಇದರ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸೌರಶಕ್ತಿ ಬೀದಿ ದೀಪಗಳ ಕುರಿತು ಸಂಶೋಧನ ಅಧ್ಯಯನ ನಡೆಸಲು ರೂ. 5.00 (ಐದು ಲಕ್ಷ ರೂಪಾಯಿಗಳು) ಅನುದಾನವನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ, ಅಧ್ಯಯನ ಪೀಠಗಳಿಗೆ ಅನುದಾನ ನೀಡಲು ನಿರ್ದೇಶನವಿರುತ್ತದೆ. **ಸಂಶೋಧನ ಅಧ್ಯಯನಕ್ಕೆ ಅನುದಾನ ನೀಡುವ ಕುರಿತು ಯಾವುದೇ ನಿರ್ದೇಶನವಿರುವುದಿಲ್ಲ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/334/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)84/2011–12, ದಿನಾಂಕ : 13–10–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಚಂದ್ರ, ಸದಸ್ಯರು ವಾರ್ಡ್ ಸಂಖ್ಯೆ 62, ರಾಮಸ್ವಾಮಿಪಾಳ್ಯ, ಹಾಗೂ ಶ್ರೀ ಬಾಬು, ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್ ದಂಡು ಪ್ರದೇಶ ರವರುಗಳ ಪತ್ರಗಳನ್ನು ಇದರೊಂದಿಗೆ ಲಗತ್ತಿಸುತ್ತಾ, ಮುನಿರೆಡ್ಡಿ ಪಾಳ್ಯದ ಪೌರಕಾರ್ಮಿಕರು ವಾಸವಾಗಿರುವ ಪ್ರದೇಶದಲ್ಲಿ ಗಂಗಮ್ಮ ದೇವಸ್ಥಾನವಿದ್ದು, ದೇವಸ್ಥಾನದ ವತಿಯಿಂದ ಸುಮಾರು 30 ವರ್ಷಗಳಿಂದ ದಸರಾ ಮಹೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವು ದಸರಾ ಮಹೋತ್ಸವವನ್ನು ಆಚರಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಸುಮಾರು 10.00 ಲಕ್ಷಗಳವರೆಗೆ ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ. 6.00 ಲಕ್ಷಗಳ ಅನುದಾನವನ್ನು ಒದಗಿಸುವಂತೆ ಕೋರಿರುತ್ತಾರೆ. ಈ ಸಂಬಂಧ ರೂ. 4.00 ಲಕ್ಷಗಳ ಅನುದಾನವನ್ನು ಮೇಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ಪೂಜ್ಯ ಮಹಾಪೌರರ ಟಿಪ್ಪಣಿಯೊಂದಿಗೆ ಮಾನ್ಯ ನಗರ ಪಾಲಿಕೆ ಸದಸ್ಯರ ಪತ್ರ ಹಾಗೂ ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಶನ್ ದಂಡು ಪ್ರದೇಶ ರವರ ಪತ್ರಗಳು ಮತ್ತು ಕಾರ್ಯಕ್ರಮಗಳ ವಿವರಗಳ ಪಟ್ಟಿ ಮಾತ್ರ ಲಗತ್ತಾಗಿರುತ್ತದೆ.

ಕಳೆದ ಸಾಲಿನ ದಸರಾ ಮಹೋತ್ಸವ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ಸದರಿ ಪಾಲಿಕೆ ಸದಸ್ಯರ ಹೆಸರಿಗೆ (**2010–11** ನೇ ಸಾಲಿಗೆ) **ರೂ. 2.00 ಲಕ್ಷಗಳ** ಅನುದಾನ/ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ. ಪ್ರಸಕ್ತ 2011–12ನೇ ಸಾಲಿನ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ಆಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *13]. ವಿಷಯದ ಸಂಖ್ಯೆ :–ತೆಆಸ್ಥಾಸ/337/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)56/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಯಮುನಾ ಗೋಪಿನಾಥ್, ಗೌರವ ಕಾರ್ಯದರ್ಶಿ, ಕಿಂಕಿಣಿ, 308, 10ನೇ ಮುಖ್ಯರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011. ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆ ನಡೆಸುವ ರಾಷ್ಟ್ರ ಮಟ್ಟದ ವಾರ್ಷಿಕ ನೃತ್ಯೋತ್ಸವ ರಾಜ್ಯದ/ರಾಷ್ಟ್ರದ ಪ್ರತಿಷ್ಠಿತ ಸಾಂಸ್ಕೃತಿ ಘಟನೆಗಳಲ್ಲೊಂದಾಗಿದ್ದು, ಈ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದ 28ನೇ ಕಿಂಕಿಣಿ ನೃತ್ಯೋತ್ಸವವನ್ನು ಜನವರಿ 2012 ರಲ್ಲಿ ಆಯೋಜಿಸಲಾಗಿದ್ದು, ಬೆಂಗಳೂರು ಮಹಾನಗರದಲ್ಲಿ ನಡೆಸುತ್ತಾ ಬಂದಿರುವ ಈ ವಾರ್ಷಿಕ ನೃತ್ಯೋತ್ಸವಕ್ಕೆ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಾರ್ಷಿಕವಾಗಿ ಹಲವಾರು ವರ್ಷಗಳಿಂದ ಅನುದಾನ ನೀಡುತ್ತಾ ಬಂದಿದ್ದು, ಈ ಉತ್ಸವ ಸತತವಾಗಿ 28 ವರ್ಷಗಳಿಂದ ನಡೆಸುತ್ತಾ ಬಂದಿರುವುದಾಗಿ ತಿಳಿಸಿರುತ್ತಾರೆ. 28ನೆಯ ಕಿಂಕಿಣಿ ನೃತ್ಯೋತ್ಸವನ್ನು 2012 ರ ಜನವರಿ ತಿಂಗಳಿನಲ್ಲಿ 14 ಕಾರ್ಯಕ್ರಮಗಳನ್ನೊಳಗೊಂಡ 7 ದಿನಗಳ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, ಈ ಉತ್ಸವದ ಅಂದಾಜು ವೆಚ್ಚ ಸುಮಾರು ರೂ. 9.00 ಲಕ್ಷಕ್ಕಿಂತ ಅಧಿಕವಾಗಿರುವುದಾಗಿ ತಿಳಿಸಿ ಪಾಲಿಕೆ ಕಳೆದ ವರ್ಷದ 27ನೇ ಕಿಂಕಿಣಿ ನೃತ್ಯೋತ್ಸವಕ್ಕೆ ರೂ. 20,000/– ಅನುದಾನ ನೀಡಿದ್ದು, ಉತ್ಸವವನ್ನು ವಿಜೃಂಭಣೆಯಿಂದ ನಡೆಸಲು ಅನುವಾಗಿರುವುದಾಗಿ ತಿಳಿಸಿ, ವರ್ಷೇ ವರ್ಷೇ ಹೆಚ್ಚಾಗಿರುವ ವೆಚ್ಚ ಗಮನಿಸಿ ಜನವರಿ 2012 ರಲ್ಲಿ ಬೆಂಗಳೂರು ನಗರದಲ್ಲಿ ನಡೆಸುವ 28ನೇ ಕಿಂಕಿಣಿ ನೃತ್ಯೋತ್ಸವಕ್ಕೆ ರೂ. 50,000/– ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ **2010–11** ನೇ ಸಾಲಿಗೆ **ರೂ. 20,000/– ಗಳ** ಅನುದಾನ / ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ:354:ಎಂಎನ್‌ವೈ:96 ದಿನಾಂಕ 14–10–1996 ರಲ್ಲಿ ಸದರಿ ಸಂಸ್ಥೆಗೆ ಪಾಲಿಕೆ ವತಿಯಿಂದ ವಾರ್ಷಿಕ ರೂ. 10,000/– ಗಳ ವಾರ್ಷಿಕ ಅನುದಾನ ಮಂಜೂರು ಮಾಡಲು ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *14]. ವಿಷಯದ ಸಂಖ್ಯೆ :–ತೆಆಸ್ಥಾಸ/348/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)76/2011–12, ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಶಶಿಕಲಾ ಕೃಷ್ಣೇಗೌಡ, ಸದಸ್ಯರು ವಾರ್ಡ್ ನಂ. 66 (ಸುಬ್ರಮಣ್ಯ ನಗರ) ರವರು ಪತ್ರ ಬರೆದು ತನ್ನ ವಾರ್ಡ್ ನಂ. 66, ಸುಬ್ರಮಣ್ಯ ನಗರದಲ್ಲಿ ದೀಪಾ ಅಕಾಡೆಮಿ ಫಾರ್ ದಿ ಡಿಫರೆಂಟ್ಲಿ ಏಬಲ್ಡ್ ಸಂಸ್ಥೆ (ದೀಪ ಅಂಧ ಮಕ್ಕಳ ಪ್ರೌಢಶಾಲೆ), ನಂ. 226/ಎ/3, ಟ್ಯಾಂಕ್ ಬಂಡ್ ರಸ್ತೆ, ಸುಬ್ರಮಣ್ಯ ನಗರ, ಬೆಂಗಳೂರು – 560 021. ರವರ ಮನವಿ ಮತ್ತು ದಾಖಲೆಗಳನ್ನು

ಸಲ್ಲಿಸಿ, ಸದರಿ ಸಂಸ್ಥೆಯು ಅಂಥ ಮಕ್ಕಳ ವಿದ್ಯಾಭ್ಯಾಸಕ್ಕೆ ಉಚಿತವಾಗಿ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡುತ್ತಿದೆ. ಆದ್ದರಿಂದ ಈ ಸಂಸ್ಥೆಗೆ ಬಿ.ಬಿ.ಎಂ.ಪಿ. ಕಲ್ಯಾಣ ನಿಧಿಯಿಂದ ಧನ ಸಹಾಯವನ್ನು ನೀಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***-ಮುಂದೂಡಿದೆ-***

## ***15]. ವಿಷಯದ ಸಂಖ್ಯೆ :-ತೆಆಸ್ಥಾಸ/349/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)95/2011-12, ದಿನಾಂಕ : 27-10-2011ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ಆರ್. ಪಾರ್ಥಸಾರಥಿ, ಕಾರ್ಯದರ್ಶಿ, ಕರ್ನಾಟಕ ರಾಜ್ಯೋತ್ಸವ ಸಮಿತಿ, ನೃಪತುಂಗ ಮಂಟಪ, ನಂ. 229, 4ನೇ ಮುಖ್ಯರಸ್ತೆ, ಎಸ್.ಬಿ.ಎಂ. ಬ್ಯಾಂಕ್ ಎದುರು, ಚಾಮರಾಜಪೇಟೆ, ಬೆಂಗಳೂರು – 560 018 ರವರು ಮನವಿ ಸಲ್ಲಿಸಿ, ಪ್ರತಿ ವರ್ಷದಂತೆ ಈ ವರ್ಷವೂ "ಕರ್ನಾಟಕ ರಾಜ್ಯೋತ್ಸವ"ವನ್ನು ನವೆಂಬರ್ 1 ರಂದು ಮೈಸೂರು ಬ್ಯಾಂಕ್ ಹತ್ತಿರ ಇರುವ ನೃಪತುಂಗ ಮಂಟಪದಲ್ಲಿ ಆಚರಿಸುತ್ತಿದ್ದು, ಪ್ರತೀ ವರ್ಷವೂ ಕರ್ನಾಟಕ ರಾಜ್ಯೋತ್ಸವಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಾಯಧನವನ್ನಾಗಿ ನೀಡುತ್ತಿದ್ದೀರೆಂದು ಕಳೆದ ವರ್ಷವೂ ಸೇರಿದಂತೆ, ಈ ವರ್ಷವೂ ಕರ್ನಾಟಕ ರಾಜ್ಯೋತ್ಸವವನ್ನು ವೈಭವವಾಗಿ ಆಚರಿಸುವುದರಿಂದ ಪಾಲಿಕೆಯಿಂದ ರೂ. 25.00 ಲಕ್ಷಗಳನ್ನು ಸಹಾಯ ಧನವಾಗಿ ನೀಡಬೇಕಾಗಿ ಕೋರಿರುತ್ತಾರೆ.

ಸದರಿಯವರಿಗೆ 2008-09 ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***-ಮುಂದೂಡಿದೆ-***

## ***16]. ವಿಷಯದ ಸಂಖ್ಯೆ :-ತೆಆಸ್ಥಾಸ/351/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 27-10-2011ರಲ್ಲಿ ವಿವರಿಸಿರುವಂತೆ, ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.109.00 ಲಕ್ಷಗಳಿಗೆ ಮಾನ್ಯ ಆಯುಕ್ತರವರ ಕಂಡಿಕೆ (25). ಕಮಿಷನರ್ ಆರ್ಡರ್ ನಂ. PSR(G)/4231/10-11, Dt : 11-10-2010. ರಲ್ಲಿ ಮಂಜೂರು ನೀಡಿದ್ದು, ಸದರಿ ಕಾಮಗಾರಿ ಸಂಕೇತ 095-11-N-J-N-D-FO-001. ಅನ್ನು ನೀಡಿರುತ್ತಾರೆ. ಮುಂದುವರೆದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ದಿನಾಂಕ : 27-09-2011 ರಂದು ಮಾನ್ಯ ಆಯುಕ್ತರವರನ್ನು ಈ ಕೆಲಸವನ್ನು ಜರೂರಾಗಿ ತೆಗೆದುಕೊಳ್ಳಲು ಕೋರಿರುತ್ತಾರೆ. ಈ ಪತ್ರದ ಮೇಲೆ ಮಾನ್ಯ ಆಯುಕ್ತರು ಸದಸ್ಯರ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುತ್ತಾರೆ. ಶ್ರೀ.ಚಂದ್ರಶೇಖರ್ ಸೋಪನಹಳ್ಳಿರವರು ಅಂದಾಜು ಪಟ್ಟಿಗಿಂತ ಶೇ.7.00% ರಷ್ಟು

ಕಡಿಮೆ ನಮೂದಿಸಿದ್ದು, ಉಳಿದವರಿಗಿಂತ ಕಡಿಮೆ ಬಿಡ್‌ದಾರರಾಗಿರುತ್ತಾರೆ. ಈ ಕಾಮಗಾರಿಯು ತುಂಬಾ ಅತಿಅವಶ್ಯಕವಾಗಿರುತ್ತದೆ, ಮೇಲಿಂದ ಹರಿದು ಬರುವ ಕೊಳಚೆ ನೀರು ತೆರೆದ ಪ್ರದೇಶದಲ್ಲಿ ಹರಿಯುವುದನ್ನು ತಡೆಯಲು ಆರ್.ಸಿ.ಸಿ ಕಟ್ಟಡವನ್ನು ಹೊಸದಾಗಿ ನಿರ್ಮಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ. ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಲಾಗಿರುತ್ತದೆ. ಎರಡು ಇಕ್ಕೆಲೆಗಳಲ್ಲೂ ಆಸರೆ ಗೋಡೆಯು ಕಲ್ಲು ಕಟ್ಟಡದಿಂದ ಕೂಡಿರುತ್ತದೆ. ಸದರಿ ಕಟ್ಟಡ ತುಂಬಾ ಹಳೆಯದಾಗಿದ್ದು ಶಿಥಿಲಾಗಿರುತ್ತದೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ತಾಂತ್ರಿಕ ಮಂಜೂರಾತಿ ಸಂಖ್ಯೆ : CE/SWD/TS/15/2010-11, dt:25-11-2010. ಹಾಗೂ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ : CE/SWD/ADMN/15/2010-11, dt:25-11-2010. ಅನುಮೋದನೆ ದೊರೆತಿರುತ್ತದೆ. ಮುಂದುವರೆದಂತೆ ಸದರಿ ಕಾಮಗಾರಿಗೆ ರೂ.109.00 ಲಕ್ಷಗಳಿಗೆ ಸೂಕ್ತ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿದೆ.

***–ಮುಂದೂಡಿದೆ–***

## ***17]. ವಿಷಯದ ಸಂಖ್ಯೆ :–ತೆಆಸ್ಥಾಸ/353/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)101/2011–12, ದಿನಾಂಕ : 02–11–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಭಾರತ ವಿಕಾಸ ಪರಿಷದ್, ನಂ. 172, ಕವಿ ಲಕ್ಷ್ಮೀಶ ರಸ್ತೆ, ವಿ.ವಿ.ಪುರಂ, ಬೆಂಗಳೂರು – 4 ರವರು ಸಲ್ಲಿಸಿರುವ ಮನವಿಯನ್ನು ಲಗತ್ತಿಸುತ್ತಾ, ಸದರಿ ಸಂಘವು ಸಾಮಾಜಿಕ, ಸಾಂಸ್ಕೃತಿಕ ಸೇವಾ ಸಂಸ್ಥೆಯಾಗಿದ್ದು, ಜನರಲ್ಲಿ ದೇಶ ಪ್ರೇಮ, ಭಾರತೀಯತೆ ಮತ್ತು ಸ್ವಾಭಿಮಾನವನ್ನು ಉದ್ದೀಪಿಸುವುದು ಹಾಗೂ ರಾಷ್ಟ್ರೀಯ ಸಮೂಹ ಗಾಯನ, ರಸಪ್ರಶ್ನೆ ಕಾರ್ಯಕ್ರಮ, ಗುರುವಂದನಾ ಛಾತ್ರಾ, ವಿಕಾಲಾಂಗಿಗೆ ಸಹಾಯ ಹಾಗೂ ಪುನರ್ ವಸತಿ ಯೋಜನೆ, ಗ್ರಾಮ ವಿಕಾಸ ಯೋಜನೆ, ಉಚಿತ ಕಣ್ಣಿನ ತಪಾಸಣೆ/ಚಿಕಿತ್ಸಾ ಶಿಬಿರ ಇತ್ಯಾದಿಗಳನ್ನು ನಡೆಸಿಕೊಂಡು ಬರುತ್ತಿದ್ದು, ಸುಮಾರು 25 ವರ್ಷಗಳನ್ನು ಕಳೆದಿದ್ದು ರಜತ ಮಹೋತ್ಸವ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಿದ್ದು ಇದಕ್ಕೆ ಲಕ್ಷಾಂತರ ರೂಪಾಯಿಗಳ ವೆಚ್ಚವಾಗಲಿದ್ದು, ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಧನ ಸಹಾಯ ಕೋರಿರುತ್ತಾರೆಂದು ತಿಳಿಸಿ, ಸದರಿ ಭಾರತ ವಿಕಾಸ ಪರಿಷದ್ ಕರ್ನಾಟಕ ಇದಕ್ಕೆ ಧನ ಸಹಾಯ ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ**, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## ***18]. ವಿಷಯದ ಸಂಖ್ಯೆ :–ತೆಆಸ್ಥಾಸ/370/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, Improvement to Roads and Drains in Swathntra nagara of K.R.Pura Sub div.in 47 (Est. Rs.100.00 lakhs). 2009–10ನೇ ಸಾಲಿನಲ್ಲಿ ಶೇ.22.75 ಅನುದಾನದಡಿ ನೀಡಲಾಗುತ್ತಿದ್ದ 047-10-N-W-E-R-IM-001. ಕಾಮಗಾರಿ ಸಂಕೇತವನ್ನು ರದ್ದುಪಡಿಸಿ 2010–11ನೇ ಸಾಲಿನಲ್ಲಿ 3 ಬದಲಿ ಕಾಮಗಾರಿಗಳನ್ನು ಕೈಗೊಳ್ಳುವುದರ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ

ಮಂಡಿಸಲಾಗಿದ್ದು, ಸಮಿತಿಯು ವಿಷಯದ ಸಂಖ್ಯೆ 258/2010–11 ದಿನಾಂಕ 14–03–2011 ರ ನಡವಳಿಯಲ್ಲಿ 2009–10ರ ಹಳೆ ಕಾಮಗಾರಿಯನ್ನು ನಿರ್ವಹಿಸಲು ತೀರ್ಮಾನಿಸಿದೆ.

ಪ್ರಸ್ತುತ ಶ್ರೀಮತಿ.ಕೆ.ಪೂರ್ಣಿಮ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 53 ಇವರು ಪತ್ರ ನೀಡಿ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮರು ಮಂಡಿಸಲು ಕೋರಿರುತ್ತಾರೆ.

ಸದರಿ ಪ್ರಸ್ತವನೆಯನ್ನು 2011–12ನೇ ಸಾಲಿನ ಕರಡು ಆಯವ್ಯಯದ ಪುಟ ಸಂಖ್ಯೆ (171) ರಲ್ಲಿ ಪಿ1878 "ಶೇ.22.75% ಕಾಮಗಾರಿಗಳು ಪಿ1878" ಲೆಕ್ಕಶೀರ್ಷಿಕೆಯಡಿ ಮುಂದುವರೆದ ಕಾಮಗಾರಿಗಳು ಅಡಿ ಮೀಸಲಿರಿಸಿರುವ ರೂ.15030.00 ಲಕ್ಷಗಳಲ್ಲಿ 3 ಬದಲಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.100.00 ಲಕ್ಷಗಳಿಗೆ ಅನುಮೋದನೆ ಹಾಗೂ ಜಾಬ್ ನಂಬರ್ ನೀಡುವ ಬಗ್ಗೆ ಮರು ಪರಿಶೀಲಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

| Sl No | Name of Work | Est. Amount |
|---|---|---|
| 1 | Construction of CC Drain & Road at Chikkadevasandra in Basavanapura in W.N.53. | Rs.50.00 lakhs |
| 2 | Construction of CC Drain & Road at Rajivnagar in Basavanapura in W.N.53. | Rs.25.00 lakhs |
| 3 | Construction of CC Drain & Road at Priyankanagra in Basavanapura in W.N.53. | Rs.50.00 lakhs |

***–ಮುಂದೂಡಿದೆ–***

## *19]. ವಿಷಯದ ಸಂಖ್ಯೆ :–ತೆಆಸ್ಥಾಸ/373/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)98/2011–12, ದಿನಾಂಕ 05–11–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಎ. ಎಚ್. ಬಸವರಾಜು, ವಾರ್ಡ್ ನಂ. 180 ರ ನಗರ ಪಾಲಿಕೆ ಸದಸ್ಯರು ಹಾಗೂ ಅಧ್ಯಕ್ಷರು ಶ್ರೀ ಬನಶಂಕರಿ ದೇವಸ್ಥಾನ ಅಭಿವೃದ್ಧಿ ಸಮಿತಿ ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ನಂ. 294, ಶ್ರೀ ಬನಶಂಕರಿ ನಿಲಯ, 7ನೇ ಮುಖ್ಯ ರಸ್ತೆ, ಭವಾನಿ ನಗರ, ಬನಶಂಕರಿ 2ನೇ ಹಂತ, ಬೆಂಗಳೂರು – 560 070. ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ಶ್ರೀ ಬನಶಂಕರಿ ದೇವಸ್ಥಾನದ ಆವರಣದಲ್ಲಿ 12 ವರ್ಷಗಳಿಂದ ಉಚಿತ ಸಾಮೂಹಿಕ ವಿವಾಹವನ್ನು ನಡೆಸುತ್ತಾ ಬರುತ್ತಿದ್ದು, ದಿನಾಂಕ : 02–02–2012 ರಂದು 13ನೇ ವರ್ಷದ ಉಚಿತ ಸಾಮೂಹಿಕ ವಿವಾಹವನ್ನು ನಡೆಸಲಿದ್ದು, ವಿವಾಹ ಸಮಯದಲ್ಲಿ ವಧು–ವರರಿಗೆ ಮಾಂಗಲ್ಯ, ಬಟ್ಟೆ, ಊಟದ ವ್ಯವಸ್ಥೆ ಇತ್ಯಾದಿಗಳನ್ನು ಸಂಬಂಧಪಟ್ಟ ವೇದಿಕೆ ಭರಿಸಲಿದ್ದು, ಇದಕ್ಕೆ ಸುಮಾರು ರೂ. 15.00 ಲಕ್ಷಗಳ ವೆಚ್ಚವಾಗಲಿದ್ದು, ಈ ಕಾರ್ಯಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2011–12 ನೇ ಸಾಲಿನ ಆಯವ್ಯಯದ ಸಂಘ ಸಂಸ್ಥೆಗೆ ನೀಡುವ ಅನುದಾನದಲ್ಲಿ ರೂ. 10.00 ಲಕ್ಷಗಳನ್ನು ಧನ ಸಹಾಯ ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ಧನ ಸಹಾಯ ಮಂಜೂರಾತಿ ಬಗ್ಗೆ ಸೂಕ್ತ ಪ್ರಸ್ತಾವನೆ ಮಂಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## *20]. ವಿಷಯದ ಸಂಖ್ಯೆ :–ತೆಆಸ್ಥಾಸ/376/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)103/2011–12, ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಮಂಜುನಾಥ್ ರಾಜು, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮನವಿ ಸಲ್ಲಿಸಿ, ಮಾನ್ಯ ಉಪ ಮಹಾಪೌರರ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ಶ್ರೀಮತಿ ರೂಪಾ ಐಯ್ಯರ್, ವ್ಯವಸ್ಥಾಪಕರ

ನಿರ್ದೇಶಕರು, ಇಂಡಿಯಾ ಕ್ಲಾಸಿಕ್ ಆರ್ಟ್ಸ್, ನಂ. 11, 1ನೇ ಕ್ರಾಸ್, 7ನೇ ಮುಖ್ಯರಸ್ತೆ, 7ನೇ ಬ್ಲಾಕ್, 4ನೇ ಹಂತ, ಬನಶಂಕರಿ 3ನೇ ಹಂತ, ಬೆಂಗಳೂರು – 560085. ವತಿಯಿಂದ ಯೂರೋಪ್ ದೇಶದಲ್ಲಿ ಪ್ರಪ್ರಥವಾಗಿ ವಿಶ್ವ ಕನ್ನಡ ಸಮ್ಮೇಳನ ಯೂರೋಪ್ 2011 ಎಂಬ ಕಾರ್ಯಕ್ರಮವನ್ನು 2011 ಅಕ್ಟೋಬರ್ 22 ಮತ್ತು 23 ರಂದು ನಡೆಸಲು ಉದ್ದೇಶಿಸಿರುವ ಮೇರೆಗೆ ಸದರಿ ಕನ್ನಡ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರು. 10.00 ಲಕ್ಷ ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, ಇಂಡಿಯಾ ಕ್ಲಾಸಿಕ್ ಆರ್ಟ್ಸ್ ರವರಿಗೆ ತುರ್ತಾಗಿ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 5.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸಮಿತಿಯ ಮುಂದೆ ಸೂಕ್ತ ಟಿಪ್ಪಣಿಯನ್ನು ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## *21]. ವಿಷಯದ ಸಂಖ್ಯೆ :–ತೆಆಸ್ಥಾಸ/378/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)105/2011–12, ದಿನಾಂಕ : 08–11–2011ರಲ್ಲಿ ವಿವರಿಸಿರುವಂತೆ, ಶ್ರೀ ಜನಾರ್ಧನ್ ರಾಜೇ ಅರಸ್, ಕಾರ್ಯದರ್ಶಿ ಸಹನಾ ಅಂಗವಿಕಲರ ಸೇವಾ ಪ್ರತಿಷ್ಠಾನ (ರಿ), ನಂ. 278, 4ನೇ 'ಬಿ' ಕ್ರಾಸ್, 10ನೇ ಮುಖ್ಯರಸ್ತೆ, ಹಂಪಿನಗರ (ಆರ್.ಪಿ.ಸಿ. ಲೇಔಟ್) ವಿಜಯನಗರ, 2ನೇ ಹಂತ, ಬೆಂಗಳೂರು – 560 104. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕಳೆದ ಸಾಲಿನಲ್ಲಿ ತಮ್ಮ ಸಂಸ್ಥೆಗೆ ಧನ ಸಹಾಯ ನೀಡಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ನೆರವು ನೀಡಿ ಸಹಕರಿಸಿದ್ದಕ್ಕಾಗಿ ಪಾಲಿಕೆಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಸಹನಾ ಅಂಗವಿಕಲರ ಸೇವಾ ಪ್ರತಿಷ್ಠಾನವು ಎಲ್ಲಾ ರೀತಿಯ ಅಂಗವಿಕಲರಿಗೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಪುನಶ್ಚೇತನ ಇತ್ಯಾದಿ ಕ್ಷೇತ್ರಗಳಲ್ಲಿ ಶ್ರಮಿಸುತ್ತಾ ಬಂದಿದೆ. ಅಂಧರಿಗೆ ಬ್ರೈಲ್ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಪೂರ್ವ, ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಅಂಧ ವಿದ್ಯಾರ್ಥಿ ವೃಂಧದವರಿಗೆ ಉಚಿತವಾಗಿ ಬ್ರೈಲ್ ಪಠ್ಯ ಪುಸ್ತಕವನ್ನು ಒದಗಿಸುತ್ತಿದೆ ಎಂದು ಕಾಲೇಜು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಉಚಿತ ವಸತಿ ನಿಲಯ ಸೌಕರ್ಯ ಹಾಗೂ ಶೈಕ್ಷಣಿಕವಾಗಿ ಸಹಾಯ ಹಾಗೂ ನೆರವು ನೀಡುವುದು ತಮ್ಮ ಧ್ಯೇಯೋದ್ದೇಶಗಳಲ್ಲಿ ಒಂದಾಗಿರುತ್ತದೆ. ಅಲ್ಲದೆ ತಮ್ಮ ಶಾಖೆಗಳನ್ನು ಧಾರವಾಡ, ಚಿಕ್ಕಮಗಳೂರು, ಹಾಗೂ ಮೈಸೂರು ಜಿಲ್ಲೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಬ್ರೈಲ್ ಮುದ್ರಣಾಲಯ, ವಸತಿ ನಿಲಯ ಹಾಗೂ ಗಣಕಯಂತ್ರ ತರಬೇತಿ ಇತ್ಯಾದಿ ಸೇವೆಗಳನ್ನು ಸಲ್ಲಿಸುತ್ತಿರುತ್ತೇವೆಚಿದು ತಮ್ಮೆಲ್ಲ ಚಟುವಟಿಕೆ ಕಾರ್ಯಗಳಿಗೆ ಸಾರ್ವಜನಿಕರ ದೇಣಿಗೆಯನ್ನೇ ಆವಲಂಬಿಸಬೇಕಾಗಿರುತ್ತದೆ. ಏಕೆಂದರೆ ತಮ್ಮ ಸಂಸ್ಥೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಯಾವುದೇ ರೀತಿಯ ಧನ ಸಹಾಯ ದೊರೆಯುತ್ತಿಲ್ಲವೆಂದು, ವಾರ್ಷಿಕವಾಗಿ ತಮ್ಮ ಸಂಸ್ಥೆಗೆ ಕನಿಷ್ಠ 30,06,265 (ಮೂವತ್ತು ಲಕ್ಷದ ಆರು ಸಾವಿರದ ಇನ್ನೂರ ಅರವತ್ತೈದು) ರೂ.ಗಳಷ್ಟು ಅವಶ್ಯಕವಿರುವುದರಿಂದ ತಮ್ಮ ಪಾಲಿಕೆಯ ವತಿಯಿಂದ ಕನಿಷ್ಠ 20,000,00 ರೂ.ಗಳನ್ನಾದರೂ ಧನ ಸಹಾಯ ನೀಡಿ ಅಂಗವಿಕಲರ ಶ್ರೇಯೋಭಿವೃದ್ಧಿಗೆ ಹಾಗೂ ಅವರ ಉತ್ತಮ ಭವಿಷ್ಯಕ್ಕೆ ಪಾಲಿಕೆಯು ನಾಂದಿಯಾಗಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ **2010–11** ನೇ ಸಾಲಿನಲ್ಲಿ **ರೂ. 1.00 ಲಕ್ಷ**ಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,

**ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## 22]. ವಿಷಯದ ಸಂಖ್ಯೆ :–ತೆಆಸ್ಥಾಸ/379/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)100/2011–12, ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, ಶ್ರೀ ಎನ್. ದಯಾನಂದ್, ಮಾಜಿ ಉಪ ಮಹಾಪೌರರು ಮನವಿ ಸಲ್ಲಿಸಿ, ಲಾಲ್ ಬಹದ್ದೂರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ನಂ. 56, ಮಾನಸ ನಿಲಯ, 3ನೇ 'ಎ' ಕ್ರಾಸ್, ಲಾಲ್ ಬಹದ್ದೂರ ನಗರ, ಬೆಂಗಳೂರು – 43 ಸಂಘವು ಸರ್ಕಾರದಲ್ಲಿ ನೊಂದಣಿಯಾಗಿರುತ್ತದೆ ಮತ್ತು ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಅವರುಗಳಿಗೆ ಖರ್ಚಾಗಿರುವುದು ಸಹ ನನಗೆ ದೃಢವಾಗಿರುತ್ತದೆ. ಆದುದರಿಂದ ತಾವುಗಳು ಮೇಲ್ಕಾಣಿಸಿದ ಸಂಘಕ್ಕೆ ಅನುದಾನದ ಅಡಿಯಲ್ಲಿ ಈ ಹಣವನ್ನು ಮಂಜೂರು ಮಾಡಬಹುದು ಈ ಹಣದಿಂದ ಇನ್ನೂ ಹೆಚ್ಚಿನ ಉತ್ಸಾಹದಿಂದ ಕಾರ್ಯಕ್ರಮ ಸಾಮಾಜಿಕ ಕಾರ್ಯಕ್ರಮಗಳನ್ನು ಮತ್ತೆ ನಮ್ಮ ಲಾಲ್ ಬಹದ್ದೂರ ನಗರದ ನಿವಾಸಿಗಳಿಗೆ ಅನುಕೂಲ ಆಗುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆಂದು ಆದುದರಿಂದ ಪಾಲಿಕೆಯು ಇಂತಹ ಸ್ವಯಂ ಪ್ರೇರಿತ ಸಂಘ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡಬೇಕು ಹಾಗೂ ಸಹಾಯ ಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪ್ರಧಾನ ಕಾರ್ಯದರ್ಶಿ, ಲಾಲ್ ಬಹದ್ದೂರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ರವರು ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ದಿ: 15.08.2011 ರಂದು 750 ಬಡವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ, ಪ್ರೋತ್ಸಾಹಧನ, ಹಾಗೂ ಕಿಡ್ನಿ ವೈಪಲ್ಯದಿಂದ ಬಳಲುತ್ತಿರುವ ವಿದ್ಯಾರ್ಥಿಗೆ ರೂ. 10,000/– ಸಹಾಯಧನ ಹಾಗೂ ಗಾಂಧಿ ಜಯಂತಿ ಅಂಗವಾಗಿ ಕ್ರೀಡಾ ಸ್ಪರ್ಧೆಗಳನ್ನು ನಡೆಸಿರುವುದಾಗಿ ತಿಳಿಸಿ ಪಾಲಿಕೆ ವತಿಯಿಂದ ರೂ. 4.00 ಲಕ್ಷಗಳ ಧನ ಸಹಾಯ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## 23]. ವಿಷಯದ ಸಂಖ್ಯೆ :–ತೆಆಸ್ಥಾಸ/382/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)ಪಿಆರ್/26/11–12, ದಿನಾಂಕ: 10–06–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ : 08.03.1977ರ ಸರ್ಕಾರಿ ಆದೇಶದಂತೆ ಪೂರ್ವ ವಲಯದಲ್ಲಿ ಬರುವ ಅಕ್ಕಿ ತಿಮ್ಮನಹಳ್ಳಿ, ಟ್ಯಾಂಕ್ ಬಂಡ್‌ನ 5–7.2 ಎಕರೆ ಪ್ರದೇಶವನ್ನು ಕರ್ನಾಟಕ ಹಾಕಿ ಅಸೋಸಿಯೇಷನ್ ಸಂಸ್ಥೆಗೆ ಈ ಕೆಳಕಂಡ ಷರತ್ತಿನ ಮೇಲೆ ವಾರ್ಷಿಕ ಗುತ್ತಿಗೆ ರೂ.100/– ಗಳನ್ನು ವಿಧಿಸಿ ಕರಾರು ನೊಂದಾಯಿಸಿದ ದಿನಾಂಕದಿಂದ 99 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ದಿನಾಂಕ:22–06–1977ರಲ್ಲಿ ಕರಾರನ್ನು ನೊಂದಾಯಿಸಲಾಗಿರುತ್ತದೆ.

**ಷರತ್ತುಗಳ ವಿವರ**

1. ಗುತ್ತಿಗೆದಾರರು ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಉಪಯೋಗಿಸುವುದು ಹೊರತು ಬೇರೆ ಯಾವ ಉದ್ದೇಶಕ್ಕೂ ಉಪಯೋಗಿಸಬಾರದು ಹಾಗೂ ಯಾವುದೇ ರೀತಿಯಲ್ಲಿ ಪರಬಾರೆಯೂ ಸಹ ಮಾಡಬಾರದು.

2. ಪ್ರಸ್ತುತ ಜಾಗದಲ್ಲಿ ಹಾಕಿ ಕ್ರೀಡಾಂಗಣ ನಿರ್ವಹಿಸದೇ ಇದ್ದ ಪಕ್ಷದಲ್ಲಿ ಸದರಿ ಸ್ವತ್ತನ್ನು ಯಾವುದೇ ಪರಿಹಾರ ಕೋರದೆ ಪಾಲಿಕೆಗೆ ಹಿಂದಿರುಗಿಸತಕ್ಕದ್ದು.

3. ಅತ್ಯಾಧುನಿಕ ಕ್ರೀಡಾಂಗಣ ನಿರ್ಮಿಸುವ ಉದ್ದೇಶಕ್ಕಾಗಿ ಆಗಾಗ್ಗೆ ನಿರ್ಮಿಸುವ ಕಟ್ಟಡಗಳ ಹೊರತು ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು.

4. ಪ್ರಸ್ತುತ ಜಾಗದ ಯಾವುದೇ ಭಾಗ ಯಾವುದೇ ಅವಧಿಯಲ್ಲಿ ಅವಶ್ಯವಿಲ್ಲವೆನಿಸಿದಲ್ಲಿ ಆ ಭಾಗವನ್ನು ಪರಿಹಾರವಿಲ್ಲದೆ ಪಾಲಿಕೆಗೆ ಹಿಂದಿರುಗಿಸುವುದು.

5. ಗುತ್ತಿಗೆದಾರರು ಪ್ರತಿ ವರ್ಷ ಜೂನ್–30ರ ಒಳಗಾಗಿ ವಾರ್ಷಿಕ ಗುತ್ತಿಗೆ ರೂಪಾಯಿ 100/– ಸಂದಾಯ ಮಾಡುವುದು.

6. ಗುತ್ತಿಗೆದಾರರು ಕರಾರಿನ ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯು ನೋಟಿಸು ನೀಡಿ ಆಸ್ತಿ ಕಟ್ಟಡಗಳ ಸಮೇತ ಯಾವುದೇ ಪರಿಹಾರ ನೀಡದೆ ವಶಕ್ಕೆ ಪಡೆಯಬಹುದು.

7. ಗುತ್ತಿಗೆದಾರರಿಂದ ಬಾಕಿ ಇರುವ ಮೊತ್ತವನ್ನು ಭೂ–ಕಂದಾಯದ ಬಾಕಿ ಎಂಬುದಾಗಿ ವಸೂಲಿ ಮಾಡಬಹುದು.

8. ಗುತ್ತಿಗೆ ಅವಧಿ ಮುಗಿದ ತರುವಾಯ ಗುತ್ತಿಗೆದಾರನು ಸ್ವತ್ತನ್ನು ಕಟ್ಟಡಗಳ ಸಮೇತ ಪಾಲಿಕೆಯ ವಶಕ್ಕೆ ನೀಡುವುದು. ವಿಫಲವಾದಲ್ಲಿ ಪಾಲಿಕೆಯು ಯಾವುದೇ ನ್ಯಾಯಾಲಯಕ್ಕೆ ಮೊರೆ ಹೋಗದೆ ಪರಿಹಾರವೂ ನೀಡದೆ ಸ್ವತ್ತನ್ನು ವಾಪಸ್ಸು ಪಡೆಯಬಹುದು.

ಕರ್ನಾಟಕ ವಿಧಾನ ಪರಿಷತ್ತು ಅರ್ಜಿ ಸಮಿತಿಗೆ ಶ್ರೀ.ನಾರಾಯಣಸ್ವಾಮಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಮುಖಾಂತರ ದೂರು ಸಲ್ಲಿಸಲಾಗಿದ್ದು, ಇದರಲ್ಲಿ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯಲ್ಲಿ ಗುತ್ತಿಗೆಗೆ ನೀಡಲಾಗಿರುವ ಷರತ್ತನ್ನು ಉಲ್ಲಂಘಿಸಿರುವುದರಿಂದ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಅರ್ಜಿ ಸಮಿತಿಯ ಸಭೆಗಳಲ್ಲಿ ಚರ್ಚಿಸಿದ ತರುವಾಯ ದಿನಾಂಕ 26–04–2011ರಂದು ಉಪ ಆಯುಕ್ತರು (ಆಸ್ತಿಗಳು) ಜಂಟಿ ಆಯುಕ್ತರು (ಪೂರ್ವ) ರವರು ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್‌ಗೆ ಭೇಟಿ ನೀಡಿ ಸ್ಥಳ ಪರೀಶೀಲನೆ ನಡೆಸಿ ಪರಿಶೀಲನಾ ವರದಿ ನೀಡಲಾಗಿರುವ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇವೆ.

ಗುತ್ತಿಗೆಗೆ ನೀಡಿದ ಒಟ್ಟು ವಿಸ್ತೀರ್ಣ 2,49,163 ಚದರ ಅಡಿ ಪೈಕಿ ಕರ್ನಾಟಕ ರಾಜ್ಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯವರು 1997ರಲ್ಲಿ 4ನೇ ರಾಷ್ಟ್ರೀಯ ಕ್ರೀಡಾಕೂಟ ನಡೆದ ಸಂದರ್ಭದಲ್ಲಿ 2 ಸಿಂಥೆಟಿಕ್ ಹಾಕಿ ಪಿಚ್‌ಗಳನ್ನು ನಿರ್ಮಿಸಿ ಇಲಾಖೆಯ 1 ಕಛೇರಿ ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರ ನಿರ್ವಹಿಸುವ ವಸತಿ ನಿಲಯ ನಿರ್ಮಿಸಿ 1,62,894 ಚದರ ಅಡಿ ಪ್ರದೇಶ ರಾಜ್ಯ ಸರ್ಕಾರದ ಇಲಾಖೆಯ ನಿಯಂತ್ರಣದಲ್ಲಿ ಈವರೆವಿಗೂ ಇರುತ್ತದೆ.

ಹಾಕಿ ಅಸೋಸಿಯೇಷನ್ ಮತ್ತು ಕ್ರೀಡಾ ಇಲಾಖೆಯ ಮಧ್ಯ ಬೈಲಾಟ್ರಲ್ ಎಂಒಯು ತಯಾರಿಸಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಗೆ ಸಲ್ಲಿಸಿದ್ದು, ಈವರೆವಿಗೂ ಅನುಮೋದನೆ ದೊರಕಿರುವುದಿಲ್ಲ. ಹಾಕಿ ಅಸೋಸಿಯೇಷನ್‌ರವರು ರಾಜ್ಯ ಸರ್ಕಾರದ ಮಟ್ಟದಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದೆ.

1996ರಿಂದ ಸಂಘವು ಕ್ಲಬ್ ಹೌಸ್ ಕಾರ್ಯಚಟುವಟಿಕೆಗಳು ಪ್ರಾರಂಭಿಸಿದ್ದು, ಸದಸ್ಯರುಗಳ ಉಪಯೋಗಕ್ಕಾಗಿ ಈಜುಕೊಳ, ಉಪಹಾರ ಮಂದಿರ, ಬಿಲಿಯರ್ಡ್ಸ್, ಮತ್ತು ಸ್ನೂಕರ್ ಆಟದ ಕೊಣೆ, ಕಾರ್ಡ್ಸ್ ಆಟದ ಕೊಣೆ, ವ್ಯಾಯಾಮ ಶಾಲೆ, ಮದ್ಯಪಾನದ ಬಾರ್, ಮತ್ತು ಪಾರ್ಟಿಹಾಲ್‌ಗಳೊಂದಿಗೆ ಕಛೇರಿಗಳ ಕಟ್ಟಡವನ್ನು ಹೊಂದಿದ್ದು, ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಪ್ರದೇಶ ಹೊರತುಪಡಿಸಿ ಉಳಿದ ಪ್ರದೇಶ 86,869 ಚದರ ಅಡಿ ಸಂಘದ ಉಪಯೋಗದಲ್ಲಿರುತ್ತದೆ. ಈ ಪ್ರದೇಶಕ್ಕೆ ಪ್ರತ್ಯೇಕ ಖಾತೆಯು ಹೊಂದಿದ್ದು, ಕಟ್ಟಡ ನಿರ್ಮಾಣಕ್ಕಾಗಿ 2004ರಲ್ಲಿ ನಕ್ಷೆ ಮಂಜುರಾತಿ ಪಡೆದಿರುತ್ತಾರೆ. ಹಾಗೂ ಈವರೆವಿಗೂ ಕರ ಇತ್ಯಾದಿಗಳನ್ನು ಪಾಲಿಕೆಗೆ ಸಂದಾಯ ಮಾಡಿರುತ್ತಾರೆ. 2010–11ನೇ ಸಾಲಿನಲ್ಲಿ ಸಂಘದ ಒಟ್ಟು ವಾರ್ಷಿಕ ಆದಾಯ 72,45,100/– ಗಳಿದ್ದು, ರೂ.66,55,451ರೂ ಗಳು ಖರ್ಚಾಗಿವೆ ಎಂಬುದನ್ನು ದಾಖಲಿಸಿದೆ.

ಗುತ್ತಿಗೆ ಕರಾರಿನ ಷರತ್ತಿನ ಅನ್ವಯ ಸಂಘವು ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಮಾತ್ರ ಉಪಯೋಗಿಸಬೇಕು ಬೇರೆ ಯಾವ ಉದ್ದೇಶಕ್ಕು ಉಪಯೋಗಿಸಬಾರದು ಎಂಬುದಾಗಿದೆ. ಈ ರೀತಿ ನಿರ್ವಹಿಸದೆ ಇದ್ದ ಪಕ್ಷದಲ್ಲಿ

ಸ್ವತ್ತನ್ನು ಯಾವುದೇ ಪರಿಹಾರ ಕೊಡದೆ ಪಾಲಿಕೆಗೆ ಹಿಂದುರಿಸತಕ್ಕದ್ದು, ಎಂಬುದಾಗಿರುತ್ತದೆ. ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯು ನೋಟಿಸ ನೀಡಿ ಆಸ್ತಿ ಕಟ್ಟಡಗಳ ಸಮೇತ ವಶಕ್ಕೆ ಪಡೆಯಬಹುದಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ:27–04–2011 ರಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್‌ಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಮಾಡಿ ಉಲ್ಲಂಘನೆ ನಿಮಿತ್ತ ಗುತ್ತಿಗೆ ಕರಾರು ರದ್ದುಪಡಿಸಿ ಕಟ್ಟಡ ಸಮೇತ ಯಾವುದೇ ಪರಿಹಾರವಿಲ್ಲದೇ ಏಕೆ ವಾಪಸ್ಸು ಪಡೆಯಬಾರದು ಎಂಬುದಾಗಿ ವಿವರಣೆ ನೀಡಲು ಕೇಳಲಾಯಿತ್ತು.

ದಿನಾಂಕ:11–05–2011 ರಂದು ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್ ಸಂಸ್ಥೆಯ ಗೌರವ ಕಾರ್ಯದರ್ಶಿಯವರ ಈ ಕಾರಣ ಕೇಳಿ ನೀಡಿರುವ ನೋಟೀಸ್‌ಗೆ ಈ ಕೆಳಕಂಡಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

1. ಕಾರ್ಡ್ಸ್ ಆಟಕ್ಕೆ ಸಂಬಂಧಿಸಿದಂತೆ ವಿವರಿಸುತ್ತಾ ಈ ಆಟವು ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ "Leisure Sport", ಎಂಬುದಾಗಿ ಪರಿಗಣಿಸಲಾಗಿರುತ್ತದೆ. ಸಂಸ್ಥೆಯ ಬೈಲಾ ಅನುಸಾರ ಈ ಆಟವನ್ನು ಆಡಲು ಅವಕಾಶ ಕಲ್ಪಿಸಲಾಗಿದೆಯೇ ಹೊರತು ಜೂಜು ಅಥವಾ ವಾಣಿಜ್ಯ ಹಿತದೃಷ್ಟಿಯಿಂದಲ್ಲ ಎಂಬುದಾಗಿ ತಿಳಿಸಿರುತ್ತಾರೆ.
2. ಈ ಸಂಸ್ಥೆಯಲ್ಲಿ ಕ್ಲಬ್ ಹೌಸಿನ ಸೌಕರ್ಯಗಳು ಅಂದರೆ, ಸಾಮಾಜಿಕ ಚಟುವಟಿಕೆಗಳಿಗಾಗಿ ಸಭಾ ಭವನಗಳು ಅತಿಥಿಗಳಿಗೆ ಮತ್ತು ಸಂಸ್ಥೆಯ ಸದಸ್ಯರುಗಳಿಗೆ ಕೊಠಡಿಗಳನ್ನು ಹಾಕಿ ಪಂದ್ಯಾವಳಿ ಮತ್ತು ಕ್ಯಾಂಪ್ ನಡೆಯುವ ಸಮಯದಲ್ಲಿ ಕ್ರೀಡಾಪಟುಗಳ ಅವಶ್ಯಕತೆಗಳಿಗಾಗಿ ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಸಾಂಸ್ಕೃತಿಕ ಇಲಾಖೆಯ ಮಾರ್ಗಸೂಚಿಯನುಸಾರ ನಿರ್ಮಿಸಿ ನಿರ್ವಹಿಸಲಾಗುತ್ತಿದೆ. ಇದಕ್ಕೆ ಪ್ರತಿ ವರ್ಷ ನೊಂದಾಯಿತ ಕೋಡ್ ಪಡೆದು ಲಕ್ಸರಿ ಟ್ಯಾಕ್ಸ್‌ನ್ನು ಸಹಾ ಪಾವತಿಸಲಾಗುತ್ತಿದೆಯೆಂದು ತಿಳಿಸಿರುತ್ತಾರೆ.
3. 15 ವರ್ಷಗಳ ಹಿಂದೆಯೇ ಅಬಕಾರಿ ಇಲಾಖೆಯ ಪರವಾನಿಗೆ ಪಡೆದು ಆ ಇಲಾಖೆಗೆ ಗುತ್ತಿಗೆ ಕರಾರನ್ನು ಸಹ ನೀಡಿ ಸಂಸ್ಥೆಯ ಸದಸ್ಯರುಗಳ ಉಪಯೋಗಕ್ಕಾಗಿ ಸಾಮಾಜಿಕ ಮತ್ತು "Leisure", ಚಟುವಟಿಕೆಯ ಭಾನವೆಯಿಂದ ಯಾವುದೇ ವಾಣಿಜ್ಯ ಹಿತದೃಷ್ಟಿಯಿಲ್ಲದೇ ಈ ಸೌಲಭ್ಯ ಉಪಯೋಗಿಸಲಾಗುತ್ತಿದೆ.
4. ಈ ಚಟುವಟಿಕೆಗಳು ಕ್ರೀಡಾ ಪೂರಕವಾಗಿದ್ದು, ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮೋದನೆಗಳನ್ನು ಪಡೆದು ಗುತ್ತಿಗೆಗೆ ನೀಡಲಾಗಿರುವ ಪ್ರದೇಶದ ಅಲ್ಪ ಪ್ರದೇಶವನ್ನು ಉಪಯೋಗಿಸಲಾಗುತ್ತಿದೆ. ಇದು ಗುತ್ತಿಗೆ ಕರಾರಿನ ಉಲ್ಲಂಘನೆಯಾಗುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಹಾಗೂ ಈ ಕಾರ್ಯಗಳು ಉದ್ದೇಶ ಪೂರ್ವಕವಾಗಿ ಮಾಡದೇ ಇರುವುದರಿಂದ ಇದನ್ನು ಹಾಕಿ ಆಟದ ಬೆಳವಣಿಗೆಯ ದೃಷ್ಠಿಯಿಂದ ಮಾಡಲಾಗಿರುವುದರಿಂದ ವಿಶಾಲ ಮನೋಭಾವನೆಯಿಂದ ಈ ವಿವರಣೆಯನ್ನು ಪರಿಗಣಿಸಿ ಕರ್ನಾಟಕದಲ್ಲಿ ಹಾಕಿ ಆಟಕ್ಕೆ ಪ್ರೋತ್ಸಾಹ ನೀಡುವಲ್ಲಿ ಸಹಕಾರ ನೀಡಲು ಕೋರಿರುತ್ತಾರೆ.

ಮೇಲಿನ ವಿವರಣೆ ಪರಾಮರ್ಶಿಸಲಾಗಿ ಗುತ್ತಿಗೆ ಕರಾರು ಪತ್ರದಲ್ಲಿರುವ ನಿಬಂಧನೆಗಳಲ್ಲಿ ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಉಪಯೋಗಿಸಬೇಕೇ ಹೊರತು ಬೇರೆ ಯಾವ ಉದ್ದೇಶಕ್ಕೂ ಬಳಸಬಾರದಾಗಿದ್ದು, ಹಾಕಿ ಸಂಸ್ಥೆಯು ನೀಡಿರುವ ವಿರಣೆಯು ಮನವರಿಕೆಯಾಗುವಂತಹದು ಇರುವುದಿಲ್ಲ.

ಆದುದರಿಂದ ಗುತ್ತಿಗೆ ರದ್ದು ಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಅವಶ್ಯಕವಾಗಿರುತ್ತದೆ. ಗುತ್ತಿಗೆಯ ಪಾಲಿಕೆಯ ಠರಾವಿನ ನಂತರ ಸರ್ಕಾರಿ ಆದೇಶದಂತೆ ಮಂಜೂರಾತಿ ನೀಡಿರುವುದರಿಂದ ಸಂಬಂಧಪಟ್ಟ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ನಿರ್ಣಯದೊಂದಿಗೆ ಗುತ್ತಿಗೆ ರದ್ದು ಪಡಿಸಲು ಸರ್ಕಾರಕ್ಕೆ ಪ್ರಸ್ತಾಪಿಸಬಹುದೆಂದು ಮಂಡಿಸಿರುವ ಆಯುಕ್ತರ ಟಿಪ್ಪಣಿ ಮೇರೆಗೆ ಸ್ಥಳ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರು ಲಾಭದಾಯಕವಾದ ಚಟುವಟಿಕೆಗಳನ್ನು ನಡೆಸುತ್ತಿದ್ದು, ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ದಿನಾಂಕ : 10–06–2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ಗುತ್ತಿಗೆ ದರವನ್ನು ವಾರ್ಷಿಕ ಕನಿಷ್ಠ 18 ಲಕ್ಷ ರೂ.ಗಳಿಗೆ ಹೆಚ್ಚಿಸುವ ಷರತ್ತಿಗೊಳಪಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18.10.2011ರ ನಿರ್ಣಯ.

***<u>ನಿರ್ಣಯ :–</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ ; 18–10–2011 ನಿರ್ಣಯವನ್ನು ಪುನರ್ ಪರಿಶೀಲಿಸಲು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಹಿಂತಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***24]. ವಿಷಯದ ಸಂಖ್ಯೆ :–ತೆಆಸ್ಥಾಸ/386/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ/ಆ)ಪಿಎಸ್ಆರ್(4)20/11–12, ದಿನಾಂಕ : 19–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎನ್. ವೀರಣ್ಣ ಕೆ.ಆರ್. ಪುರಂ, ವಾರ್ಡ್ ಸಂಖ್ಯೆ–52 ರ ಸದಸ್ಯರು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು ಆದ ಇವರು ತಮ್ಮ ಪತ್ರದಲ್ಲಿ ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್, ಬೆಂಗಳೂರು ರವರು ತಮ್ಮ ಪತ್ರದಲ್ಲಿ ಕೋರಿರುವಂತೆ ದೇವಸ್ಥಾನದ ವಾರ್ಷಿಕ ಕಾರ್ಯಕ್ರಮಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ. 2.00 ಲಕ್ಷಗಳ ಸಹಾಯಧ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ "ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್" ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 1.00 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## ***25]. ವಿಷಯದ ಸಂಖ್ಯೆ :–ತೆಆಸ್ಥಾಸ/387/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)23/11–12, ದಿನಾಂಕ : 16–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಲೋಕೇಶ್ವರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಡಾಡ್ಜ್ ಬಾಲ್ ಸಂಸ್ಥೆ (ರಿ), ನಂ. ಎಂ54, 9ನೇ 'ಬಿ' ಮುಖ್ಯರಸ್ತೆ, ಎಲ್.ಐ.ಸಿ. ಕಾಲೋನಿ, ಜೀವನ್ ಭೀಮಾನಗರ, ಬೆಂಗಳೂರು – 560 075 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಕರ್ನಾಟಕ ರಾಜ್ಯ ಡಾಡ್ಜ್‌ಬಾಲ್ ಸಂಸ್ಥೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ದಿನಾಂಕ 28–04–2011 ರಿಂದ 30–04–2011 ರವರೆಗೆ ಐದನೇ ರಾಷ್ಟ್ರೀಯ ಕಿರಿಯರ ಡಾಡ್ಜ್‌ಬಾಲ್ ಪಂದ್ಯಾವಳಿಗಳನ್ನು ಸಹಕಾರ ನಗರದ ಕೊಡಿಗೇಹಳ್ಳಿಯಲ್ಲಿರುವ ಬಿ.ಬಿ.ಎಂ.ಪಿ. ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದು ಪಂದ್ಯಾವಳಿಗಳಲ್ಲಿ ಭಾರತದ ಇತರೆ ರಾಜ್ಯಗಳಿಂದ 19 ಬಾಲಕರ ಮತ್ತು 18 ಬಾಲಕಿಯರ ತಂಡಗಳು ಒಟ್ಟು 37 ತಂಡಗಳು ಭಾಗವಹಿಸಿದ್ದವು. ಈ ಪಂದ್ಯಾವಳಿಗಳನ್ನು ಆಯೋಜಿಸಲು ರೂ. 9,35,000/– ಗಳು ವೆಚ್ಚವಾಗಿದ್ದು, ಈ ಪಂದ್ಯಾವಳಿಗಳಿಗೆ ವಸತಿ ವ್ಯವಸ್ಥೆ ಊಟದ ವ್ಯವಸ್ಥೆ ಪ್ರೇಕ್ಷಕರು ಕುಳಿತುಕೊಳ್ಳಲು ಆಸನದ ವ್ಯವಸ್ಥೆ, ಧ್ವನಿ ವರ್ಧಕ ಮತ್ತು ಇತರೆ ವೆಚ್ಚಗಳು ರೂ. 5,00,000/– ಭರಿಸಬೇಕಾಗಿರುವುದರಿಂದ ತಮ್ಮ ಸಂಸ್ಥೆಯ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲವಾದ್ದರಿಂದ ಪಾಲಿಕೆಯ ವತಿಯಿಂದ ಐದು ಲಕ್ಷ ರೂ.ಗಳ ಆರ್ಥಿಕ ನೆರವನ್ನು ಕೋರಿ ಈ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಆದುದರಿಂದ ಪಾಲಿಕೆಯ ವತಿಯಿಂದ ಆರ್ಥಿಕ ಧನ ಸಹಾಯವನ್ನು ಶೀಘ್ರವಾಗಿ ಬಿಡುಗಡೆ ಮಾಡಬೇಕಾಗಿ ಕೋರಿರುತ್ತಾರೆ.

ಶ್ರೀ ಎಸ್. ಆರ್. ವಿಶ್ವನಾಥ್, ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ, ಬೆಂಗಳೂರು ನಗರ ಜಿಲ್ಲೆ ರವರು ಹಾಗೂ ಶ್ರೀ ಅಶ್ವತ್ಥ ನಾರಾಯಣ ಗೌಡ, ಮಾನ್ಯ ಸದಸ್ಯರು, ವಾರ್ಡ್–8 (ಕೊಡಿಗೇಹಳ್ಳಿ) ರವರು ಪತ್ರ ಬರೆದು ಸದರಿಯವರಿಗೆ ರೂ. 5.00 ಲಕ್ಷಗಳನ್ನು ಪಾಲಿಕೆಯ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನೀಡಲು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ **ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**<u>–ಮುಂದೂಡಿದೆ–</u>**

## <u>*26]. ವಿಷಯದ ಸಂಖ್ಯೆ :–ತೆಆಸ್ಥಾಸ/391/2011–12*</u>

ಆಯುಕ್ತರ ಟಿಪ್ಪಣಿ ದಿನಾಂಕ : 23.11.2011. ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160ರ ವ್ಯಾಪ್ತಿಯಲ್ಲಿ ಗಟ್ಟಿಗೆರೆ ಸ್ಮಶಾನಕ್ಕೆ ಆರ್.ಸಿ.ಸಿ ತಡೆಗೋಡೆ ಮತ್ತು ಸ್ಮಶಾನದ ರಸ್ತೆಗೆ ಚರಂಡಿ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 13.80 ಲಕ್ಷಗಳಿಗೆ 2011–12 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0486" ಅಡಿ ಅನುಮೋದನೆ ನೀಡಲು ಹಾಗೂ ಜಾಬ್ ಸಂಖ್ಯೆ ನೀಡಲು ಮಂಡಿಸಲಾಗಿದೆ.

2011–12 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 100 ರಲ್ಲಿ ಲೆಕ್ಕಶೀರ್ಷಿಕೆ ಪಿ0486 ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ವಹಣೆ ಮತ್ತು ದುರಸ್ಥಿ ( ಪ್ರತಿ ವಲಯ ರೂ. 25.00 ಲಕ್ಷದಂತೆ) ರೂ. 200.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಪ್ರತಿ ವಲಯಕ್ಕೆ ರೂ. 25.00 ಲಕ್ಷದಂತೆ ಅನುದಾನ ಮೀಸಲಿರಿಸಲಾಗಿದೆ.

ಮೇಲ್ಕಂಡ ಲೆಕ್ಕಶೀರ್ಷಿಕೆಯಡಿ ರಾಜರಾಜೇಶ್ವರಿನಗರ ವಲಯಕ್ಕೆ ಲಭ್ಯವಾಗುವ ಅನುದಾನ ರೂ. 25.00 ಲಕ್ಷಗಳಲ್ಲಿ ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ. 13.80 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ0486 ರ ಕಾರ್ಯಕ್ರಮ ಪಟ್ಟಿಗೆ ಸೇರಿಸಿಕೊಂಡು ಅನುಷ್ಟಾನಗೊಳಿಸುವ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**<u>–ಮುಂದೂಡಿದೆ–</u>**

## <u>*27]. ವಿಷಯದ ಸಂಖ್ಯೆ :–ತೆಆಸ್ಥಾಸ/392/2011–12*</u>

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)71/11–12, ದಿನಾಂಕ : 22–11–2011. ರಲ್ಲಿ ವಿವರಿಸಿರುವಂತೆ, ಶ್ರೀಮತಿ ಶಾರದಮ್ಮ, ಪೂಜ್ಯ ಮಹಾಪೌರರು, ಟಿಪ್ಪಣಿ ಬರೆದು ಕಣಗಾಲ್ ನೃತ್ಯಾಲಯ ಟ್ರಸ್ಟ್ (ರಿ), ನಂ. 4043, 21ನೇ ಮುಖ್ಯರಸ್ತೆ, 30ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು – 70 ರವರ ಮನವಿ ಪತ್ರ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ, ದಿವಂಗತ ಎಸ್.ಆರ್. ಪುಟ್ಟಣ್ಣ ಕಣಗಾಲ್ ರವರ 78ನೇ ಹುಟ್ಟು ಹಬ್ಬದ ಸವಿನೆನಪಿಗಾಗಿ ಸಂಗೀತ ಮತ್ತು ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಕಾರ್ಯಕ್ರಮಕ್ಕೆ ದಕ್ಷಿಣ ಭಾರತ ಹೆಸರಾಂತ ಚಲನಚಿತ್ರ ನಿರ್ದೇಶಕರುಗಳು, ಹಿನ್ನೆಲೆ ಗಾಯಕರುಗಳು ಹಾಗೂ ರಾಜಕೀಯ ಗಣ್ಯ ವ್ಯಕ್ತಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಆ ಸಂದರ್ಭದಲ್ಲಿ ನೆನಪಿನ ಸಂಚಿಕೆ ಹೊರ ತರಲಾಗುತ್ತಿದೆ ಎಂದು, ಹೆಸರಾಂತ ಗಾಯಕಿಯರು, ಕಲಾವಿದರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದು ಸುಮಾರು ರೂ. 12.50 ಲಕ್ಷಗಳ ವೆಚ್ಚವಾಗಲಿದೆ ಎಂದು ತಿಳಿಸುತ್ತಾ, ಪಾಲಿಕೆ ವತಿಯಿಂದ ಅನುದಾನ ಮಂಜೂರು ಮಾಡಿ ಕಾರ್ಯಕ್ರಮವನ್ನು ಪ್ರೋತ್ಸಾಯಿಸುವಂತೆ ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಪ್ರಸ್ತಾವನೆ ಮಂಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10

ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

| | |
|---|---|
| ***ನಿರ್ಣಯ :–*** | **ದಿನಾಂಕ : 22–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10.00 ಲಕ್ಷ (ಹತ್ತು ಲಕ್ಷ) ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.** |

## *28]. ವಿಷಯದ ಸಂಖ್ಯೆ :–ತೆಆಸ್ಥಾಸ/393/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)72/11–12, ದಿನಾಂಕ : 19.11.2011. ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಕೆ. ಹೆಚ್. ರಾಮಲಿಂಗಾ ರೆಡ್ಡಿ, ಅಧ್ಯಕ್ಷರು, ಕರ್ನಾಟಕ ಭ್ರಷ್ಠಾಚಾರ ನಿರ್ಮೂಲನಾ ವೇದಿಕೆ (ರಿ), ಕೆ.ಎಸ್. ಹಳ್ಳಿ, ಕನ್ನಮಂಗಲ ಅಂಚೆ, ಬೆಂಗಳೂರು – 560 067. ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ ಸದರಿಯವರು ದಿನಾಂಕ 22–09–2011 ರಂದು ನಗರದ ಗಾಂಧಿ ಭವನದಲ್ಲಿ ಚುನಾವಣಾ ಸಮಗ್ರ ಸುಧಾರಣೆಗಳು ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದು, ಈ ವಿಚಾರಣಾ ಸಂಕಿರಣದಲ್ಲಿ ಚರ್ಚಿಸಲು ಕಾನೂನು ತಜ್ಞರು, ನ್ಯಾಯಾಧೀಶರು, ಬುದ್ಧಿ ಜೀವಿಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಸುಮಾರು ರೂ. 3,33,000/– ಗಳ ವೆಚ್ಚವಾಗಲಿದೆ ಎಂದು ಅಂದಾಜು ವಿವರಗಳನ್ನು ತಿಳಿಸಿ, ಮಹಾನಗರ ಪಾಲಿಕೆಯಿಂದ ಸಹಾಯ ಅನುದಾನ ನೀಡುವಂತೆ ಕೋರಿರುತ್ತಾರೆಂದು ತಿಳಿಸಿ, ಸಾಮಾಜಿಕ ಪರಿವರ್ತನೆಯ ಹಿತದೃಷ್ಠಿಯಿಂದ ಇಂತಹ ವಿಚಾರ ಸಂಕಿರಣಗಳು ಇವತ್ತಿನ ದಿವಸಗಳಲ್ಲಿ ಅವಶ್ಯಕವೆನಿಸುತ್ತದೆ, ಮೇಲ್ಕಂಡ ಕಾರ್ಯಕ್ರಮಕ್ಕೆ ಅತಿಥಿಗಳ ಗೌರವ ಧನಕ್ಕೆ ತಗಲುವ ವೆಚ್ಚ ರೂ. 39,000/– ಗಳನ್ನು ಪಾಲಿಕೆ ವತಿಯಿಂದ ಭರಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ**, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *29]. ವಿಷಯದ ಸಂಖ್ಯೆ :–ತೆಆಸ್ಥಾಸ/394/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)53/11–12, 22–11–2011 ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ವಿಶ್ವಶಾಂತಿ ಸಾರ್ವಜನಿಕ ಸಂಸ್ಥೆ, ನಂ. 471, 16ನೇ ಕ್ರಾಸ್, ಬಾಗಲಗುಂಟೆ, ನಾಗಸಂದ್ರ (ಪೋಸ್ಟ್) ಬೆಂಗಳೂರು – 560 073. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ಕಳೆದ 10 ವರ್ಷಗಳಿಂದ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 30 ಕೊಳೆಗೇರಿ ಪ್ರದೇಶಗಳಲ್ಲಿ ಮಹಿಳೆಯರ, ಮಕ್ಕಳ ಮತ್ತು ವೃದ್ಧರ ಸರ್ವತೋಮುಖ ಏಳಿಗೆಗಾಗಿ ಕಾರ್ಯನಿರ್ವಹಿಸುತ್ತಿದ್ದೇವೆ. ಅಂದರೆ (ಕೌಟುಂಬಿಕ ಸಲಹೆ ಮತ್ತು ಮಾರ್ಗದರ್ಶನ, ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು, ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವುದು. ವಿವಿಧ ರೀತಿಯ ವೃತ್ತಿ ತರಬೇತಿಗಳನ್ನು ಏರ್ಪಡಿಸುವುದು. ವೃದ್ಧರ ಪುನರ್ವಸತಿ, ಬಾಲಕಾರ್ಮಿಕರ ನಿಮೂಲನೆ, ಕಾನೂನಿನ ಬಗ್ಗೆ ತಿಳುವಳಿಕೆ, ಹೆಚ್.ಐ.ವಿ./ಏಡ್ಸ್ ರೋಗದ ಬಗ್ಗೆ ಮಾಹಿತಿ ಸ್ವ–ಸಹಾಯ ಸಂಘಗಳ ರಚನೆ ಮತ್ತು ತರಬೇತಿ, ಸಣ್ಣ ಉಳಿತಾಯ ಮತ್ತು ಸಾಲದ ಯೋಜನೆ ಇತ್ಯಾದಿ) ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೊಳಗೇರಿ ನಿವಾಸಿಗಳ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದಾಗಿ ತಿಳಿಸಿ,

ಇಂತಹ ಕಾರ್ಯಕ್ರಮಗಳ ಅನುಷ್ಠಾನದ ಸಲುವಾಗಿ ಬೆಂಗಳೂರು ಮಹಾನಗರ ಪಾಲಿಕೆಯಿಂದ 5 ವರ್ಷಗಳಿಗೊಮ್ಮೆ ನೀಡುವ ಅನುದಾನವನ್ನು ಬಿಡುಗಡೆ ಮಾಡಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

ಸದರಿಯವರಿಗೆ 2006–07 ನೇ ಸಾಲಿನಲ್ಲಿ ರೂ. 1.00 ಲಕ್ಷ (ಒಂದು ಲಕ್ಷ) ಸಹಾಯಧನ ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ**,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50′ ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## ***301. ವಿಷಯದ ಸಂಖ್ಯೆ :–ತೆಆಸ್ಥಾಸ/395/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಬಿಬಿಎಂಪಿ(ಆಕ)ಸಂಖ್ಯೆ ಃ 734/ಕ.ಅ.ಸೇ/11–12, ದಿನಾಂಕ ಃ 22–11–2011ರಲ್ಲಿ ವಿವರಿಸಿರುವಂತೆ, ಶ್ರೀ. ಟಿ.ಎನ್.ಜಗನ್ನಾಥ್ ರಾವ್ # 164, 16ನೇ ಕ್ರಾಸ್, 5ನೇ ಹಂತ, ಜೆ.ಪಿ.ನಗರ, ಬೆಂ–78. ರವರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಮನವಿ ಸಲ್ಲಿಸಿ, ಸದರಿಯವರು ನನ್ನ ಮಗಳಾದ ಕು॥ ಟಿ.ಜೆ.ನಿವೇದಿತಾ ಹುಟ್ಟಿನಿಂದಲೆ ಅಂಗವಿಕಲತೆ, ಅವಳಿಗೆ ಕಿವಿ ಕೇಳುವುದಿಲ್ಲ, ಮಾತು ಬರುವುದಿಲ್ಲ, ಬುದ್ದಿ ಮಾಂದ್ಯತೆ ಮತ್ತು ಸ್ಪಾಷ್ಟಿಕ್ (Spastic-Left side) ಎಡ ಭಾಗ. ಈ ಎಲ್ಲಾಅಂಗವಿಕಲತೆ ಇದ್ದರೂ ಸಹ ನಿವೇದಿತ ಭರತನಾಟ್ಯವನ್ನು ಕಲಿತಿದ್ದಾಳೆ. ಅವಳ ವಿದ್ಯಾಭ್ಯಾಸ 4ನೇ ತರಗತಿಯವರೆಗೆ, ಅವಲು ಇನ್ನೊಬ್ಬರ ಸಹಾಯವಿಲ್ಲದೆ ಎಲ್ಲೂ ಹೋಗುವ ಹಾಗಿಲ್ಲ.

ನನ್ನ ಸಹೋದರಿ ಸುಭದ್ರ ಪ್ರಭು, ಭರತನಾಟ್ಯ ಕಲಿಸುವ ಶಾಲೆಯನ್ನು ನಡೆಸುತ್ತಿರುತ್ತಾರೆ. ನನ್ನ ಹೆಂಡತಿ ರಮಾ ಜನಗನ್ನಾಥ್, ಪ್ರಖ್ಯಾತ ಗಾಯಕಿ ಹಾಗೂ ಭರತನಾಟ್ಯ ಕಲಾವಿದೆ. ಇವರು ಕೂಚಿಪುಡಿ, ಆಂಧ್ರ ನಾಟ್ಯ ಹಾಗೂ ಭರತನಾಟ್ಯಗಳಿಗೆ ಹಿನ್ನೆಲೆ ಸಂಗೀತ ಸಹಕಾರ ನೀಡುತ್ತಿರುತ್ತಾರೆ. ಇವರುಗಳ ಮಾರ್ಗದರ್ಶನದಲ್ಲಿ ನಿವೇದಿತಾ ಭರತನಾಟ್ಯ ಅಭ್ಯಾಸ ಮಾಡುತ್ತಿರುತ್ತಾಳೆ.

ನಿವೇದಿತಾಳಿಗೆ ಈ ಎಲ್ಲಾ ಅಂಗವೈಕಲ್ಯತೆಗಳಿದ್ದರೂ, ಭರತನಾಟ್ಯ ಕಲಿತಿದ್ದಾಲೆ. ನಿವೇದಿತಾ ತನ್ನ 8ನೇ ವಯಸ್ಸಿನಿಂದ ನೃತ್ಯ ಕಾರ್ಯಕ್ರಮ ನೀಡುತ್ತಿದ್ದಾಳೆ. ಇಲ್ಲಿಯವರೆಗೆ ಸುಮಾರು 60ಕ್ಕೂ ಹೆಚು ನೃತ್ಯ ಕಾರ್ಯಕ್ರಮವನ್ನು ನೀಡಿದ್ದಾಳೆ. ನಿವೇದಿತಾಳ ಭರತನಾಟ್ಯ ರಂಗ ಪ್ರವೇಶ ದಿನಾಂಕ : 07–04–2007 ರಂದು ಎ.ಡಿ.ಎ.ರಂಗಮಂದಿರದಲ್ಲಿ ನೆರವೇರಿತು.

ಇವಳ ಸಾಧನೆಯನ್ನು ಪರಿಗಣಿಸಿ ಭಾರತ ಸರ್ಕಾರ ಇವಳಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ದಿನಾಂಕ : 03–12–2007ರ ವಿಶ್ವ ಅಂಗವಿಕಲ ದಿನದಂದು ನೀಡಿ ಗೌರವಿಸಿದೆ. ಅದೇ ದಿನ ಅಂದರೆ ನಮ್ಮ ಘನ ಕರ್ನಾಟಕ ಸರ್ಕಾರ ಸಹ ನಿವೇದಿತಾಳಿಗೆ ದಿನಾಂಕ : 03–12–2007 ರಂದು ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕರ್ನಾಟಕ ಸಕಾರವು ನಿವೇದಿತಾಳಿಗೆ 2009ನೇ ಸಲಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಮೇಲಿನ ಪ್ರಶಸ್ತಿಯನ್ನಲ್ಲದೇ ನಿವೇದಿತಾ ಹತ್ತು ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ನಿವೇದಿತಾಳ ಈ ಎಲ್ಲಾ ಸಾಧನೆಯನ್ನು ಪರಿಗಣಿಸಿ ತಮ್ಮ ಘನ ಇಲಾಖೆಯ ವತಿಯಿಂದ ನೃತ್ಯ ಕಾರ್ಯಕ್ರಮಕ್ಕೆ ಅವಕಾಶ ನೀಡಬೇಕೆಂದು ಹಾಗೂ ಇದಕ್ಕಾಗಿ ರೂ.50,000– ಗಳ ಅನುದಾನವನ್ನು ನೀಡಲು ಕೋರಿರುತ್ತಾರೆ.

ಅಭ್ಯರ್ಥಿಯು ಹುಟ್ಟಿನಿದಲೂ ಅಂಗವಿಕಲತೆಯಾಗಿದ್ದು, ಇವರು ಸಾಧನೆ ಮಾಡಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂದಿಸಿದಂತೆ, ಕಲ್ಯಾನ ಕಾರ್ಯಕ್ರಮದ ಮಾರ್ಗಸೂಚಿಯ ಪ್ರಕಾರ ಅಂಗವಿಕಲರಿಗೆ ಉಪಕರಣಗಳನ್ನು ಒದಗಿಸುವುದು ಹಾಗೂ ಅಂಗವಿಕಲರ ಸೇವಾಕೇಂದ್ರಗಳಿಗೆ ಮತ್ತು ಬುದ್ದಿಮಾಂಧ್ಯ ಮಕ್ಕಳಿಗೆ ಪ್ರೋತ್ಸಾಹಧನ ಮಾತ್ರ ನೀಡಬಹುದಾಗಿರುತ್ತದೆ, ಆದರೆ ನೃತ್ಯ ಕಾರ್ಯಕ್ರಮ ಹಾಗೂ ನೃತ್ಯ ಕಾರ್ಯಕ್ರಮಕ್ಕೆ ಸಹಾಯಧನದ ಅವಕಾಶ ನೀಡುವ ಕಾರ್ಯಕ್ರಮವಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *31]. ವಿಷಯದ ಸಂಖ್ಯೆ :–ತೆಆಸ್ಥಾಸ/404/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)115/11–12, ದಿನಾಂಕ : 26–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಆರ್. ಎಸ್. ಸತ್ಯ ನಾರಾಯಣ, ಮಾನ್ಯ ಸದಸ್ಯರು, ವಾರ್ಡ್ –77 (ದತ್ತಾತ್ರೇಯ ದೇವಸ್ಥಾನ) ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕನ್ನಡ ಕಲಾ ಜ್ಯೋತಿ ಯುವಕರ ಸಂಘ (ರಿ), ನಂ. 60, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು– 20 ರವರು ಬಿಬಿಎಂಪಿ ಯಿಂದ ಧನ ಸಹಾಯ ನೀಡಲು ಕೋರಿ ಮನವಿ ಪತ್ರ ಸಲ್ಲಿಸಿದ್ದು, ಸದರಿ ಪತ್ರವನ್ನು ತಮ್ಮ ಪರಿಶೀಲನೆಗೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸ್ಮತ್ತಾ, ಸದರಿಯವರ ಕೋರಿಕೆಯ ಬಗ್ಗೆ ತಮ್ಮಗಳ ಗಮನಕ್ಕೆ ತಂದು ಕೋರುವುದೇನೆಂದರೆ, ಸಂಘದ ಆಶ್ರಯದಲ್ಲಿ ರಾಜ್ಯ ಮಟ್ಟದ ಶ್ರೀ ಕೆಂಪೇಗೌಡ ಪ್ರಶಸ್ತಿ ಹೊನಲು ಬೆಳಕಿನ ಕುಸ್ತಿ ಪಂದ್ಯಗಳನ್ನು ನಡೆಸಿ, ಯುವಶಕ್ತಿಗೆ ಚೈತನ್ಯ ನೀಡುವುದು, ನಾಗರೀಕರಿಗೆ ಮನೋಲ್ಲಾಸ ಪಡಿಸುವುದು ಹಾಗೂ ಈ ಕ್ರೀಡೆಯ ಉನ್ನತಿಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುತ್ತಾರೆಂದು, ಮೈಸೂರು ಮಹಾರಾಜರ ಕಾಲಾವಧಿಯಲ್ಲಿ ಕುಸ್ತಿ ಪಂದ್ಯಾವಳಿಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಈ ಕ್ರೀಡೆಯನ್ನು ಪ್ರೋತ್ಸಾಯಿಸುತ್ತಿದ್ದುದನ್ನು ನಾವುಗಳು ಕಂಡು ಕೇಳಿರುತ್ತೇವೆ. ಪ್ರಸ್ತುತ ದಸರಾ ಸಂದರ್ಭದಲ್ಲಿ ಮಾತ್ರ ಆದ್ಯತೆ ನೀಡುತ್ತಿದ್ದು, ಉಳಿದ ಸಂದರ್ಭಗಳಲ್ಲಿ ಆದ್ಯತೆ ನೀಡದಿರುವುದರಿಂದ, ಈ ಕ್ರೀಡೆಯೇ ನಶಿಸಿ ಹೋಗುತ್ತಿರುವುದನ್ನು ಗುರುತಿಸಬಹುದಾಗಿದೆ. ಆದರೆ ಸದರಿ ಸಂಘದ ಆಶ್ರಯದಲ್ಲಿ ರಾಜ್ಯ ಮಟ್ಟದ ಶ್ರೀ ಕೆಂಪೇಗೌಡ ಪ್ರಶಸ್ತಿ ಹೊನಲು ಬೆಳಕಿನ ಕುಸ್ತಿ ಪಂದ್ಯಗಳನ್ನು ನಡೆಸಿ ಕೊಡುತ್ತಿರುವುದನ್ನು ಗಮನಿಸಿ ಹೆಚ್ಚಿನ ಪ್ರೋತ್ಸಾಹ ನೀಡುವುದು ಸಮಂಜಸವೆಂದು ಭಾವಿಸುತ್ತೇನೆಂದು ತಿಳಿಸಿರುತ್ತಾರೆ. ಆದುದರಿಂದ ಕನ್ನಡ ಕಲಾ ಜ್ಯೋತಿ ಯುವಕರ ಸಂಘ (ರಿ) ರವರ ಕೋರಿಕೆಯನ್ನು ಪರಿಗಣಿಸಿ, ಪ್ರಸ್ತುತ ಸದರಿ ಸಂಸ್ಥೆಯವರು ನಡೆಸಿಕೊಡುತ್ತಿರುವ ಕಾರ್ಯಕ್ರಮಕ್ಕೆ ಹಣಕಾಸಿನ ನೆರವು ಅಗತ್ಯವಾಗಿದ್ದು, ಅವರ ಕಾರ್ಯವನ್ನು ಪ್ರೋತ್ಸಾಹಿಸಲು ಬಿಬಿಎಂಪಿಯಿಂದ ಧನ ಸಹಾಯದ ಅವಶ್ಯಕತೆ ಇರುವುದರಿಂದ 2011–12 ನೇ ಸಾಲಿನಲ್ಲಿ ಸೂಕ್ತ ಧನ ಸಹಾಯ ಮಾಡಲು ಕೋರುತ್ತೇನೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು **ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *32]. ವಿಷಯದ ಸಂಖ್ಯೆ :–ತೆಆಸ್ಥಾಸ/407/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 12–12–2011ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 39 ಎಸ್‌ಆರ್‌ಪಿ 2011, ಬೆಂಗಳೂರು, ದಿನಾಂಕ : 18–11–2011. ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಶೀಲಿಸಲು ದಿನಾಂಕ : 18–11–2011 ರ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 39 ಎಸ್‌ಆರ್‌ಪಿ 2011ರಲ್ಲಿ ಸರ್ಕಾರವು ಅಧಿಕಾರಿ ವೇತನ ಸಮಿತಿಯನ್ನು ರಚಿಸಿದೆ. ಅಧಿಕಾರಿ ವೇತನ ಸಮಿತಿಯು ವರದಿಯನ್ನು ಸಲ್ಲಿಸುವುದನ್ನು ಕಾಯ್ದಿರಿಸಿ, ಮೂಲ ವೇತನದ ಶೇಕಡ 15ರಷ್ಟು ಮಧ್ಯಾಂತರ ಪರಿಹಾರವನ್ನು ಪೂರ್ಣಕಾಲಾವಧಿಯ ಕಾಲಿಕ ನಿಯತ ವೇತನ ಶ್ರೇಣಿಯಲ್ಲಿರುವ ರಾಜ್ಯ ಸರ್ಕಾರಿ ನೌಕರರಿಗೆ, ಸ್ಥಳೀಯ ಸಂಸ್ಥೆಗಳ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಹಾಗೂ ವಿಶ್ವವಿದ್ಯಾನಿಲಯಗಳ ಬೋಧಕೇತರ ಸಿಬ್ಬಂದಿಗೆ

ದಿನಾಂಕ : 01-11-2011 ರಿಂದ ಮಂಜೂರು ಮಾಡಲು ಸರ್ಕಾರವು ನಿರ್ಧರಿಸಿದೆ. (ಸರ್ಕಾರಿ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ)

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂಧಿ ವರ್ಗದವರಿಗೆ ಅನುಕೂಲವಾಗುವಂತೆ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 39 ಎಸ್‌ಆರ್‌ಪಿ 2011, ಬೆಂಗಳೂರು, ದಿನಾಂಕ : 18-11-2011ರ ಸರ್ಕಾರಿ ಆದೇಶವನ್ನು ನಗರ ಪಾಲಿಕೆಯಲ್ಲಿ 12104 ಅಧಿಕಾರಿ/ನೌಕರರುಗಳಿಗೆ ಮಾಹೆಯಾನ ರೂ.1,45,19,752-00 ಗಳನ್ನು ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ ಇತರೆ ಭತ್ಯೆಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿ ರವರ ವರದಿ ದಿನಾಂಕ : 07-12-2011ರಂತೆ ಈ ಕೆಳಕಂಡಂತೆ ಅಭಿಪ್ರಾಯ ವರದಿ ನೀಡಿರುತ್ತಾರೆ.

"ಈ ಶೇಕಡ 15ರಷ್ಟು ಮಧ್ಯಾಂತರ ಪರಿಹಾರವನ್ನು ಪಾಲಿಕೆಗೆ ರೂ. 1,45,19,752-00ಗಳು ಆರ್ಥಿಕ ಹೊಣೆಗಾರಿಕೆ (Financial Implications) ಬೀಳಲಿದೆ ಎಂದು ಮುಖ್ಯ ಲೆಕ್ಕಾಧಿಕಾರಿಗಳು ಅಭಿಪ್ರಾಯ ನಿಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮುಖ್ಯ ಲೆಕ್ಕಾಧಿಕಾರಿ ರವರು ದಿನಾಂಕ : 07-12-2011 ರ ಅಭಿಪ್ರಾಯದನ್ವಯ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 39 ಎಸ್‌ಆರ್‌ಪಿ 2011, ಬೆಂಗಳೂರು, ದಿನಾಂಕ : 18-11-2011ರ ಸರ್ಕಾರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**_ನಿರ್ಣಯ :-_ ದಿನಾಂಕ : 12-12-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## _33]. ವಿಷಯದ ಸಂಖ್ಯೆ :-ತೆಆಸ್ಥಾಸ/408/2011-12_

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್‌ಆರ್(4)123/11-12, ದಿನಾಂಕ ಃ 14-12-2011ರಲ್ಲಿ ವಿವರಿಸಿರುವಂತೆ ಶ್ರೀ ಎಸ್. ಹರೀಶ್, ಅಧ್ಯಕ್ಷರು ರಾಜಾಜಿನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ), ನಂ. 425/ಎ, 12ನೇ ಅಡ್ಡರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್, ಮಹಾಲಕ್ಷ್ಮೀ ಪುರಂ, ಬೆಂಗಳೂರು -560 086. ರವರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರ ಹೆಸರಿನಲ್ಲಿ ನಡೆಸುತ್ತಿರುವ ರಾಜ್ಯ ಮಟ್ಟದ ಪುರುಷರ ಹಾಗೂ ಮಹಿಳೆಯರ ವಾಲಿಬಾಲ್ ಪಂದ್ಯಾವಳಿಯನ್ನು ಡಿಸೆಂಬರ್ 21 ರಿಂದ 25 ರವರೆಗೆ ವಾರ್ಡ್ ಸಂಖ್ಯೆ 67 ರಲ್ಲಿರುವ ಸ್ವಾಮಿ ವಿವೇಕಾನಂದ ಉದ್ಯಾನವನ, ಶಂಕರಮಠದಲ್ಲಿ ನಡೆಸಲಾಗುತ್ತದೆ ಎಂದು ಈ ಕಾರ್ಯಕ್ರಮಕ್ಕೆ ಕರ್ನಾಟಕ ಸರ್ಕಾರದ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸದಾನದಂದಗೌಡ ರವರು, ಉಸ್ತುವಾರಿ ಸಚಿವರಾದ ಶ್ರೀ ಆರ್. ಅಶೋಕ್ ರವರು ನಗರಾಭಿವೃದ್ಧಿ ಸಚಿವರಾದ ಶ್ರೀ ಎಸ್. ಸುರೇಶ್ ಕುಮಾರ್ ರವರು ಸನ್ಮಾನ್ಯ ಲೋಕಸಭಾ ಹಾಗೂ ವಿಧಾನ ಸಭಾ ಸದಸ್ಯರುಗಳು ಅತಿಥಿಗಳಾಗಿ ಆಗಮಿಸುತ್ತಿದ್ದಾರೆಂದು ತಿಳಿಸಿ, ಈ ಸಂಬಂಧ ಹಲವಾರು ಕಾರ್ಯಕ್ರಮಗಳಜನ್ನು ಹಮ್ಮಿಕೊಳ್ಳಬೇಕಾಗಿರುವುದರಿಂದ ಪಾಲಿಕೆಯ 2011-12 ರ ಆಯವ್ಯಯದಲ್ಲಿ ತಮ್ಮ ಸಂಘಕ್ಕಾಗಿ ನಿಗಧಿಪಡಿಸಿರುವ ಅನುದಾನ ರೂ. 25.00 ಲಕ್ಷಗಳನ್ನು ಕೂಡಲೇ ಬಿಡುಗಡೆ ಮಾಡಲು ಸಂಬಂಧಿಸಿದವರಿಗೆ ಆದೇಶಿಸಿ, ನಮ್ಮ ಮೇಲಿನ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಸಹಕರಿಸಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ **2010-11 ನೇ** ಸಾಲಿನಲ್ಲಿ **ರೂ. 5.00 ಲಕ್ಷಗಳ** ಅನುದಾನ ಬಿಡುಗಡೆ ಮಾಡಲಾಗಿರುತ್ತದೆ

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (18) ರಲ್ಲಿ "ರಾಜಾಜಿನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ)"** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 25.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಿರುವುದು ಸರಿಯಷ್ಟೆ. ಆದರೆ ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ

ಇರುವುದರಿಂದ ಪ್ರಸ್ತಾವಿತ ಸಂಸ್ಥೆಗೆ ಅನುದಾನ ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :-*** **ದಿನಾಂಕ : 14-12-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ 2011-12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ರೂ.25.00 (ಇಪ್ಪತ್ತೈದು) ಲಕ್ಷಗಳನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *34]. ವಿಷಯದ ಸಂಖ್ಯೆ :-ತೆಆಸ್ಥಾಸ/409/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಮುಲೆಅ/ಪಿಜಿ(5)/ಪಿಆರ್/16/11-12, ದಿನಾಂಕ : 21-12-2011ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ : ಆಇ(ವಿಶೇಷ) 265 ಪಿಇಎನ್ 2011 ಬೆಂಗಳೂರು ದಿನಾಂಕ : 22.11.2011 ರಂತೆ ದಿನಾಂಕ : 01.11.2011 ರಿಂದ ರಾಜ್ಯ ಸರ್ಕಾರ ನಿವೃತ್ತಿ ವೇತನದಾರರಿಗೆ ಹೆಚ್ಚುವರಿ ಮಧ್ಯಂತರ ಪರಿಹಾರ ಶೇ.15% ರಷ್ಟು ಮಂಜೂರು ಮಾಡಲಾಗಿರುತ್ತದೆ. ಅದರಂತೆ ಈಗಾಗಲೇ ಮಂಜೂರಾಗಿರುವ ಶೇ.69.5% ರ ಜೊತೆಗೆ ಶೇ.15% ಸೇರಿ ಶೇ.84.5% ರಂತೆ ಪಾವತಿಸಬೇಕಾಗಿರುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ನಿವೃತ್ತಿ ವೇತನದ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಬೇಕಾಗಿದ್ದು, ಸದರಿ ಸರ್ಕಾರಿ ಆದೇಶವನ್ನು ಪಾಲಿಕೆಗೆ ಅಳವಡಿಸಿಕೊಂಡು ದಿನಾಂಕ : 01.11.2011 ರಿಂದ ಅನ್ವಯಿಸುವಂತೆ ಶೇ.15% ಹೆಚ್ಚುವರಿ ಮ್ರಧ್ಯಂತರ ಪರಿಹಾರ ಪಾವತಿಸಬೇಕಾಗಿರುತ್ತದೆ.

ಸದರಿ ಹೆಚ್ಚುವರಿ ರೂ 51,91,779.00 ಗಳ ಮಧ್ಯಂತರ ಪರಿಹಾರ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕ ಶೀರ್ಷಿಕೆ 02-ಸಾಮಾನ್ಯ ಆಡಳಿತ /ಆಡಳಿತ ವೆಚ್ಚಗಳು/ನೌಕರರ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಈಗಾಗಲೇ ಅನುವು ಮಾಡಿಕೊಳ್ಳಲಾಗಿದೆ. ಈ ಮಧ್ಯಂತರ ಪರಿಹಾರ ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-*** **ದಿನಾಂಕ : 21-12-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## *35]. ವಿಷಯದ ಸಂಖ್ಯೆ :-ತೆಆಸ್ಥಾಸ/410/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 27-10-2011ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 09, ವಿದ್ಯಾರಣ್ಯಪುರದಲ್ಲಿ ಹಾಪ್‌ಕಾಮ್ಸ್ ಪಕ್ಕದಲ್ಲಿ ಖಾಲಿ ಇರುವ ಸ್ಥಳದಲ್ಲಿ ನಂದಿನಿ ಪಾರ್ಲರ್ ತೆರೆಯಲು ಸ್ಥಳವನ್ನು ಮಂಜೂರು ಮಾಡುವಂತೆ ಮದರ್ ಡೈರಿ ಪರವಾಗಿ ನಿರ್ದೇಶಕರು ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ನಕ್ಷೆ ತಯಾರಿಸಿ ಜಾಗ ಖಾಲಿ ಇರುವ ಬಗ್ಗೆ ದೃಡಿಕರಿಸಿಕೊಂಡು, ಈ ಜಾಗವನ್ನು ಸಹಕಾರಿ ಸಂಸ್ಥೆಯಾಗಿರುವ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಗಾರರಾಗಿರುವ ಮದರ್ ಡೈರಿ, ಬೆಂಗಳೂರು ರವರಿಗೆ ಅನುಮತಿ ನೀಡಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಈ ಪ್ರಸ್ಥಾಪಿತ ಸ್ಥಳದಲ್ಲಿ ಶ್ರೀ ಕೃಷ್ಣಪ್ಪ, ಅಂಗವಿಕಲರಿಗೆ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಪಾರ್ಲರ್ ತೆರೆಯಲು ಅವಕಾಶ ಕಲ್ಪಿಸಿಕೊಡಲು ಮದರ್ ಡೈರಿ (ಕೆ.ಎಮ್.ಎಫ್) ಯಲಹಂಕ ರವರು 10x10 ಅಡಿ ಜಾಗವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ಪ್ರಸ್ಥಾಪಿತ ಪ್ರಕರಣದಲ್ಲಿ ವಾರ್ಡ್ ನಂ 09 ವಿದ್ಯಾರಣ್ಯಪುರದ ಹಾಫ್ ಕಾಮ್ಸ್ ಪಕ್ಕದಲ್ಲಿ ನಂದಿನಿ ಉತ್ಪಾದನೆಗಳ ಮಾರಾಟ ಮಳಿಗೆಯನ್ನು ತೆರೆಯಲು ಸಾರ್ವಜನಿಕರ ಬೇಡಿಕೆ ಇದ್ದು, ಈ 10x10 ಜಾಗವನ್ನು ಗುತ್ತಿಗೆಗೆ ನೀಡಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 27-10-2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22.11.2011 ರ ನಿರ್ಣಯ.

***ನಿರ್ಣಯ :-*** **ದಿನಾಂಕ 22-11-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, 3 (ಮೂರು) ವರ್ಷಗಳ ಅವಧಿಗೆ ಮಾಸಿಕ ರೂ.500/- (ಐದು ನೂರು) ಗಳಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## 36]. ವಿಷಯದ ಸಂಖ್ಯೆ :–ತೆಆಸ್ಥಾಸ/411/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/118/11–12, ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ: 94ರ ಕೆಂಪೇಗೌಡ ರಸ್ತೆ (ವೃತ್ತ)ದಲ್ಲಿರುವ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ ಮತ್ತು ಈ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಪೂರ್ಣ ಪ್ರದೇಶದಲ್ಲಿ ವಿವಿಧ ದೇವರುಗಳ ಪೂಜಾಕಾರ್ಯ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ ಟ್ರಸ್ಟ್‌ರವರು ಸಮಿತಿಯನ್ನು ಮಾಡಿಕೊಂಡು ನಿರ್ವಹಿಸುತ್ತಿರುವುದಾಗಿಯೂ ಸದರಿ ಸಮಿತಿಯಿಂದ ನಿರ್ವಹಣೆ ಮಾಡುತ್ತಿರುವ ದೇವಸ್ಥಾನಗಳಿರುವ ಈ ಪ್ರದೇಶವನ್ನು ಭೋಗ್ಯದ ಆಧಾರದ ಮೇಲೆ ಖಾತೆ ನೊಂದಾಯಿಸಿ ಕೊಡಲು ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರಿಗೆ ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಸಂಸ್ಥೆಯ ಅಧ್ಯಕ್ಷರು ನೀಡಿರುವ ಮನವಿ ಕುರಿತು ಪರಿಶೀಲಿಸಿ, ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲು ಮಾನ್ಯ ಮುಖ್ಯಮಂತ್ರಿಗಳ ಉಪ ಕಾರ್ಯದರ್ಶಿ ಇವರು ಪತ್ರ ಬರೆದಿರುತ್ತಾರೆ.

ದಿನಾಂಕ: :21–09–2011 ರಂದು ಸ್ಥಳೀಯ ಅಧಿಕಾರಿಗಳೊಂದಿಗೆ ಸಹಾಯಕ ಆಯುಕ್ತರು (ಆಸ್ತಿಗಳು) ರವರು ಸ್ಥಳ ಪರಿಶೀಲಿಸಲಾಗಿದೆ. ಕೆ.ಜಿ.ರಸ್ತೆ, ಕೆಂಪೇಗೌಡ ವೃತ್ತದ ಪ್ರದೇಶವಾಗಿದ್ದು, ಚಕ್ಕುಬಂದಿ ಈ ರೀತಿ ಇರುತ್ತದೆ. ಪೂರ್ವಕ್ಕೆ–ರಸ್ತೆ ಮತ್ತು ಡಾ॥ರಾಜ್‌ಕುಮಾರ್‌ರವರ ಪ್ರತಿಮೆ ಇರುವ ಸ್ಥಳ, ಪಶ್ಚಿಮಕ್ಕೆ–ರಸ್ತೆ ಮತ್ತು ಗೀತಾ ಕಾಂಪ್ಲೆಕ್ಸ್, ಉತ್ತರಕ್ಕೆ–ರಸ್ತೆ ಮತ್ತು ಪಾಲಿಕೆ ದ್ವಿಚಕ್ರ ವಾಹನ ನಿಲುಗಡೆ ಸ್ಥಳ ಹಾಗೂ ದಕ್ಷಿಣಕ್ಕೆ–ರಸ್ತೆ ಮತ್ತು ಸಂತೋಷ್ ಟಾಕೀಸ್ ಕಾಂಪ್ಲೆಕ್ಸ್ ಈ ಮಧ್ಯೆ ಇರುವ ಈ ಪ್ರದೇಶದ ವಿಸ್ತೀರ್ಣ ಪೂರ್ವ ಪಶ್ಚಿಮ=26+57/2X67+56/2 = 2552 ಚದರ ಅಡಿ ವಿಸ್ತೀರ್ಣವುಳ್ಳದ್ದಾಗಿರುತ್ತದೆ.

ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನದ ಹಿಂಭಾಗದಲ್ಲಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ 6'X20' ಅಡಿ ವಿಸ್ತೀರ್ಣದ ಜಾಗದಲ್ಲಿ ಸಂಘದ ಕಾರ್ಯಚಟುವಟಿಕೆಗಳಿಗಾಗಿ ಒಂದು ಕೊಠಡಿ ನಿರ್ಮಿಸಿಕೊಂಡಿರುತ್ತಾರೆ. ಈ ಪ್ರದೇಶದಲ್ಲಿರುವ ಎಲ್ಲಾ ದೇವಸ್ಥಾನಗಳ ಪ್ರತಿನಿತ್ಯದ ಪೂಜಾ ಕಾರ್ಯಗಳಿಗೆ ಸಾರ್ವಜನಿಕರು ಬರುತ್ತಿದ್ದು, ಈ ಪ್ರದೇಶವನ್ನು ಟ್ರಸ್ಟ್‌ನ ಹೆಸರಿಗೆ ನೊಂದಾವಣಿ ಮಾಡಿಕೊಡಲು ನೂರಾರು ಭಕ್ತರು 16–ಪುಟಗಳಲ್ಲಿ ಸಹಿ ಸಂಗ್ರಹಿಸಿ ಅರ್ಜಿಯೊಂದಿಗೆ ಲಗತ್ತಿಸಿರುತ್ತಾರೆ. ಈ ಸ್ವತ್ತಿನ ಸುತ್ತಲೂ 4–ಭಾಗಗಳಲ್ಲಿ ವಾಹನಗಳ ಓಡಾಟಕ್ಕೆ ಸುರಕ್ಷಿತ ರಸ್ತೆಗಳಿರುವುದರಿಂದ, ಸದರಿ ಸಂಸ್ಥೆಗೆ ರಸ್ತೆ ಅಗಲೀಕರಣಕ್ಕೆ ಸ್ಥಳದ ಅವಶ್ಯಕತೆ ಬಂದಾಗ ತೆರವುಗೊಳಿಸುವ ಷರತ್ತಿಗೊಳಪಡಿಸಿ ಗುತ್ತಿಗೆಗೆ ನೀಡಬಹುದೆಂದು ತಮ್ಮ ಸ್ಥಳ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 26+57/2X67+56/2 = 2552 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.13000/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 13000X2552=3,31,76,000/– ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.33,17,600/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.2,76,466/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು, ಶ್ರೀ.ಸಂಕಷ್ಟಹರ ಗಣಪತಿ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್, ರವರಿಗೆ ಗುತ್ತಿಗೆಗೆ ನೀಡುವ ಬಗ್ಗೆ ಮಾನ್ಯ ಆಯುಕ್ತರ ದಿನಾಂಕ: 27–10–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22.11.2011 ರ ನಿರ್ಣಯ.

***ನಿರ್ಣಯ :–*** **ದಿನಾಂಕ 22–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಸದರಿ ಸ್ಥಳವು ರಸ್ತೆ ಅಗಲೀಕರಣಕ್ಕೆ ಅವಶ್ಯಕತೆ ಬಂದಾಗ ತೆರವುಗೊಳಿಸುವ ಷರತ್ತಿಗೆ ಒಳಪಡಿಸಿ, 3 (ಮೂರು) ವರ್ಷಗಳ ಅವಧಿಗೆ ವಾರ್ಷಿಕ ರೂ.2000/– (ಎರಡು ಸಾವಿರ) ಗಳಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## 37]. ವಿಷಯದ ಸಂಖ್ಯೆ :–ತೆಆಸ್ಥಾಸ/412/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/82/11–12, ದಿನಾಂಕ : 16–09–2011ರಲ್ಲಿ ವಿವರಿಸಿರುವಂತೆ, ಚಾಮರಾಜಪೇಟೆ, ವಲಯದ ಹಳೆ ಪೆಟ್ರೋಲ್‌ಪೇಟೆ, ಕಾರ್ಟ್‌ಸ್ಟ್ರಾಂಡ್ ರಸ್ತೆಯಲ್ಲಿ 20X25 ಅಡಿ ಅಳತೆಯ ನಿವೇಶನವನ್ನು ಶ್ರೀ.ಶೇಕ್ ಮಾಹಿದ್ದೀನ್

ರವರಿಗೆ ವಾರ್ಷಿಕ ಗುತ್ತಿಗೆ ರೂ.30/– ರಂತೆ ದಿನಾಂಕ:10–01–1981 ರಲ್ಲಿ ಒಂದು ವರ್ಷದ ಅವಧಿಗೆ ವ್ಯಾಪಾರದ ಉದ್ದೇಶಕ್ಕಾಗಿ ಗುತ್ತಿಗೆ ನೀಡಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕರ ಇತ್ಯಾದಿಯನ್ನು 2004ನೇ ಸಾಲಿಗೆ ರೂ.6360/– ಪುಟಸಂಖ್ಯೆ:06 ರಲ್ಲಿ ಸಂದಾಯ ಮಾಡಿರುವುದಕ್ಕೆ ದಾಖಲೆ ಇರುತ್ತದೆ. ಅರ್ಜಿದಾರರು ಅನೇಕ ಸಲ ಗುತ್ತಿಗೆ ನವೀಕರಿಸಲು ಅರ್ಜಿ ಸಲ್ಲಿಸಿರುತ್ತಾರೆ. ಜಂಟಿ ಆಯುಕ್ತರು (ಪಶ್ಚಿಮ) ರವರು ಕೆಪಿಪಿ ಕಾಯ್ದೆ ಅನ್ವಯ ನೋಟೀಸ್ ನೀಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 500 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:17–04–2007ರ ಸರ್ಕಾರದ ಮಾರ್ಗಸೂಚಿ ದರದಂತೆ, ಚದರ ಅಡಿ ಒಂದಕ್ಕೆ ರೂ.3000/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, ರೂ.3000x500=15,00,000/–ಗಳಾಗುತ್ತದೆ. ಶೇ:10% ವಾರ್ಷಿಕ ಗುತ್ತಿಗೆ ಮೊತ್ತ ರೂ.1,50,000/–ಗಳಾಗುತ್ತದೆ. ಮಾಸಿಕ ಗುತ್ತಿಗೆ ದರ ರೂ.12,500/– ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳಿಗೆ ಮೇಲ್ಕಂಡಂತೆ ದರ ನಿಗದಿಪಡಿಸಿ ಗುತ್ತಿಗೆ ಅವಧಿಯನ್ನು ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ: 16–09–2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22.11.2011 ರ ನಿರ್ಣಯ.

***ನಿರ್ಣಯ :–*** **ದಿನಾಂಕ 22–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.2000/– (ಎರಡು ಸಾವಿರ) ಗಳಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *381. ವಿಷಯದ ಸಂಖ್ಯೆ :–ತೆಆಸ್ಥಾಸ/413/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/157/11–12, ದಿನಾಂಕ : 28–10–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 168, 30ನೇ ಅಡ್ಡರಸ್ತೆ, ಜೈನ್ ದೇವಾಲಯದ ಎದುರು. ಜಯನಗರ 4ನೇ ಬ್ಲಾಕ್ ಪಾದಚಾರಿ ಮಾರ್ಗದಲ್ಲಿ ಹಾಲಿನ ಬೂತ್ ತೆರೆಯಲು ಸ್ಥಳವನ್ನು ಗುತ್ತಿಗೆ ನೀಡಲು ಶ್ರೀಮತಿ ವರಲಕ್ಷ್ಮಿ ರವರು ಕೋರಿರುತ್ತಾರೆ.

ಸ್ಥಳೀಯ ವಲಯಾಧಿಕಾರಿಗಳ ಸ್ಥಳ ಪರಿಶೀಲಿಸಿ, ನಕ್ಷೆಯೊಂದಿಗೆ ವರದಿಯಲ್ಲಿ ಅರ್ಜಿದಾರರು ಕೋರಿರುವ ಸ್ಥಳವು ಪಾದಚಾರಿ ಮಾರ್ಗದಲ್ಲಿದ್ದು, ಭಾಗಶ: ಈ ಪಾದಚಾರಿ ರಸ್ತೆಯಲ್ಲಿ 8*14 ಅಡಿಗಳ ಜಾಗವನ್ನು ಹಾಲಿನ ಬೂತ್‌ಗಾಗಿ ಕೋರುತ್ತಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆ ಆಗುವುದಿಲ್ಲವೆಂದು ನಿಯಮಾನುಸಾರ ಅವಕಾಶವಿದ್ದಲ್ಲಿ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಕ್ರಮಕ್ಕಾಗಿ ಕಡತ ಕಳುಹಿಸಿರುತ್ತಾರೆ.

ಸದರಿ ವಿಷಯದಲ್ಲಿ ದಿನಾಂಕ: 01–03–2002ರ ಆಯುಕ್ತರ ಸುತ್ತೋಲೆಯಲ್ಲಿ ಪಾಲಿಕೆ ಸ್ಥಳಗಳನ್ನು ಗುತ್ತಿಗೆಗೆ ನೀಡುವ ಬಗ್ಗೆ ಮಾರ್ಗಸೂಚಿಯಲ್ಲಿ ರಸ್ತೆ ಬದಿಯಲ್ಲಿ ಪಾದಚಾರಿ ರಸ್ತೆಯಲ್ಲಿ, ಉದ್ಯಾನವನಗಳಲ್ಲಿ ಹಾಗೂ ಆಟದ ಮೈದಾನಗಳಲ್ಲಿ ಗುತ್ತಿಗೆ ನೀಡುವುದು ಸಮಂಜಸವಾಗಿರುವುದಿಲ್ಲವೆಂದು ಸೂಚಿಸಿರುತ್ತಾರೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)ಪಿಆರ್/115/01–02, ದಿನಾಂಕ: 01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಠ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು,

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21–09–2011 ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ.4900/– ಗಳಿದ್ದು, ಅರ್ಜಿದಾರರುಗಳು ಕೋರಿರುವ 8*14 ಅಡಿಗಳ ಜಾಗವು 112 ಚ.ಅಡಿಗಳಾಗುತ್ತದೆ. ಇದರಂತೆ 4999*112=5,48,800/– ರೂ. ಗಳಾಗುತ್ತದೆ. ಶೇ: 10% ರಷ್ಟು ವಾರ್ಷಿಕ ಗುತ್ತಿಗೆ ಹಣ 54,880/– ರೂ. ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 4575/– ರೂ. ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆಯನ್ವಯ–1976 ಕಲಂ–176ರ (6) ಹಾಗೂ (ಬಿ)II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ..ಎಂ.ಡಿ/2002, ದಿನಾಂಕ: 02–06–2003 ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀಮತಿ. ವರಲಕ್ಷ್ಮಿರವರಿಗೆ ತಾತ್ಕಾಲಿಕವಾಗಿ ಹಾಲಿನ ಬೂತ್ ತೆರೆಯಲು ಗುತ್ತಿಗೆಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ: 28.10.2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22.11.2011 ರ ನಿರ್ಣಯ.

***<u>ನಿರ್ಣಯ:-</u>*** **ದಿನಾಂಕ 22-11-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, 3 (ಮೂರು) ವರ್ಷಗಳ ಅವಧಿಗೆ ಮಾಸಿಕ ರೂ.500/- (ಐದು ನೂರು) ಗಳಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***39]. ವಿಷಯದ ಸಂಖ್ಯೆ :-ತೆಆಸ್ಥಾಸ/414/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/116/11-12, ದಿನಾಂಕ : 28-10-2011ರಲ್ಲಿ ವಿವರಿಸಿರುವಂತೆ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ ಚಾಮರಾಜಪೇಟೆ ರವರಿಗೆ 13.6X92.96(1263.44) ಚ. ಅಡಿ ನಗರ ಪಾಲಿಕೆಯ ಕನ್ಸರ್‌ವೆನ್ಸಿ ಜಾಗವನ್ನು ದಿನಾಂಕ:01-06-1988 ರಲ್ಲಿ ಗುತ್ತಿಗೆಗೆ ನೀಡಿದ್ದು, ವಾರ್ಷಿಕ ರೂ.400/- ರಂತೆ ಗುತ್ತಿಗೆ ಮೊತ್ತವಾಗಿರುತ್ತದೆ. ಈ ಗುತ್ತಿಗೆ ಅವಧಿಯು ದಿನಾಂಕ:31-05-1993ಕ್ಕೆ ಮುಕ್ತಾಯಗೊಂಡಿರುತ್ತದೆ.

ಪ್ರಸ್ತುತ ಸ್ವತ್ತನ್ನು ನಗರ ಪಾಲಿಕೆಗೆ ವಾಪಸ್ಸು ಪಡೆಯಲು ಕೆಪಿಪಿ ಕಾಯ್ದೆಯ 4(1)ರ ಅಡಿಯಲ್ಲಿ ಗುತ್ತಿಗೆದಾರರಿಗೆ ದಿನಾಂಕ:19-07-2010ರಲ್ಲಿ ನೋಟೀಸ್ ನೀಡಲಾಗಿರುತ್ತದೆ. ಗುತ್ತಿಗೆದಾರಾದ ಅಪೆಕ್ಸ್ ಬ್ಯಾಂಕ್‌ನ ಕಾರ್ಯದರ್ಶಿಗಳು ತಾವು ಗುತ್ತಿಗೆ ಹಣ ಪಾವತಿಸಿದ್ದು, ಪ್ರಸ್ತುತ ಜಾಗವನ್ನು ವಾಹನ ನಿಲ್ದಾಣಕ್ಕಾಗಿ ಉಪಯೋಗಿಸುತ್ತಿದ್ದು, ಈ ಜಾಗವನ್ನು 99 ವರ್ಷಗಳ ಗುತ್ತಿಗೆಗೆ ಅವಧಿಯನ್ನು ವಿಸ್ತರಿಸಲು ಅಥವಾ ಮಾರಾಟ ಮಾಡಲು ಕೋರಿರುತ್ತಾರೆ.

ಗುತ್ತಿಗೆ ಹಣ ಸಂದಾಯ ಮಾಡಿದ್ದು, ಗುತ್ತಿಗೆ ಷರತ್ತು ಉಲ್ಲಂಘನೆ ಮಾಡಿಲ್ಲವೆಂದು ಉಪ ಆಯುಕ್ತರು (ಪಶ್ಚಿಮ) ರವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 13.6X92.96=1264 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ: 17-04-2007ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.2300/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 2300X1264=29,07,200/- ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.2,90,720/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.24,230/- ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿಯನ್ನು ನವೀಕರಿಸುವ ಮಾನ್ಯ ಆಯುಕ್ತರು ದಿನಾಂಕ: 28.10.2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22.11.2011 ರ ನಿರ್ಣಯ.

***<u>ನಿರ್ಣಯ :-</u>*** **ದಿನಾಂಕ 22-11-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, 5 (ಐದು) ವರ್ಷಗಳ ಅವಧಿಗೆ ಮಾಸಿಕ ರೂ.2000/- (ಎರಡು ಸಾವಿರ) ಗಳಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***40]. ವಿಷಯದ ಸಂಖ್ಯೆ :-ತೆಆಸ್ಥಾಸ/415/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಜಾಪಿಆರ್/2236/10-11, ದಿನಾಂಕ : 10-11-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತುಗಳ ಮೇಲೆ ಹೊಸದಾಗಿ ಜಾಹೀರಾತು ಫಲಕಗಳನ್ನು ಟೆಂಡರ್-ಕಂ-ಹರಾಜು ಮೂಲಕ ವಿತರಿಸುವುದರಿಂದ ಪಾಲಿಕೆಗೆ ಆರ್ಥಿಕವಾಗಿ ಹೆಚ್ಚು ಆದಾಯವನ್ನು ನಿರೀಕ್ಷಿಸಬಹುದಾಗಿದ್ದು, ರೈಲ್ವೆ ರಸ್ತೆಯ ಸಮಾನಾಂತರವಾಗಿ ಇರುವ ಸುಮಾರು 195 ಸ್ಥಳಗಳ ಪಾದಚಾರಿ ಮಾರ್ಗದ ಹಾಗೂ ರಸ್ತೆಯ ಬದಿಯಲ್ಲಿ ಸುಮಾರು 500 ಜಾಹೀರಾತು ಫಲಕಗಳನ್ನು ಅಳವಡಿಸಲು ಸ್ಥಳ ಪರಿಶೀಲಿಸಿ ಈ ಕೆಳಕಂಡ ಸ್ಥಳಗಳನ್ನು ಗುರುತಿಸಲಾಗಿದೆ.

| ಕ್ರ. ಸಂ. | ಸ್ಥಳಗಳ ವಿವರ |
|---|---|
| 1. | ಮೆಜೆಸ್ಟಿಕ್ ರೈಲ್ವೆ ಸ್ಟೇಷನ್ ಬ್ರಿಡ್ಜ್ ಮುಂಭಾಗ ಮತ್ತು ಬ್ರಿಡ್ಜ್ ಬಳಿ ಸುತ್ತಮುತ್ತ |
| 2. | ಮದ್ರಾಸ್ ಬ್ರಿಡ್ಜ್ ಎದುರು ಆರ್.ಆರ್.ಕಾಂಪೌಂಡ್ ಸುತ್ತಮುತ್ತ |
| 3. | ಮದ್ರಾಸ್ ಬ್ರಿಡ್ಜ್ ಎದುರು ಆರ್.ಆರ್.ಕಾಂಪೌಂಡ್ ಸುತ್ತಮುತ್ತ |

| | |
|---|---|
| 4. | ಮದ್ರಾಸ್ ಬ್ರಿಡ್ಜ್ ಎದುರು ಆರ್.ಆರ್.ಕಾಂಪೌಂಡ್ ಸುತ್ತಮುತ್ತ |
| 5. | ಮದ್ರಾಸ್ ಬ್ರಿಡ್ಜ್ ಎದುರು ಆರ್.ಆರ್.ಕಾಂಪೌಂಡ್ ಸುತ್ತಮುತ್ತ |
| 6. | ನೀರಿನ ಟ್ಯಾಂಕ್ ಮೇಲೆ ಆರ್.ಆರ್.ಕಾಂಪೌಂಡ್ ಸುತ್ತಮುತ್ತ |
| 7. | ಓಕಳಿಪುರಂ ಮುಖ್ಯರಸ್ತೆ ರೈಲ್ವೆ ವಸತಿ ಗೃಹ ಸುತ್ತಮುತ್ತ |
| 8. | ಓಕಳಿಪುರಂ ಮುಖ್ಯರಸ್ತೆ ರೈಲ್ವೆ ವಸತಿ ಗೃಹ ಸುತ್ತಮುತ್ತ |
| 9. | ಓಕಳಿಪುರಂ ಮುಖ್ಯರಸ್ತೆ ರೈಲ್ವೆ ವಸತಿ ಗೃಹ ಸುತ್ತಮುತ್ತ |
| 10. | ಓಕಳಿಪುರಂ ಪೆಟ್ರೋಲ್ ಬಂಕ್ ಎಡ ಭಾಗ ಸುತ್ತಮುತ್ತ |
| 11. | ಓಕಳಿಪುರಂ ಪೆಟ್ರೋಲ್ ಬಂಕ್ ಎಡ ಭಾಗ ಸುತ್ತಮುತ್ತ |
| 12. | ಓಕಳಿಪುರಂ ಪೆಟ್ರೋಲ್ ಬಂಕ್ ಬಲ ಭಾಗ ಸುತ್ತಮುತ್ತ |
| 13. | ಓಕಳಿಪುರಂ ಪೆಟ್ರೋಲ್ ಬಂಕ್ ಬಲ ಭಾಗ ಸುತ್ತಮುತ್ತ |
| 14. | ಓಕಳಿಪುರಂ ಬ್ರಿಡ್ಜ್ ನಂತರ, ಎಫ್.ಟಿ.ಟಿ. ಟಿ–ಜಂಕ್ಷನ್ |
| 15. | ಪ್ಲಾಟ್‌ಫಾರಂ 'ಟಿ' ಜಂಕ್ಷನ್ ಪ್ಲಾಟ್‌ಫಾರಂ ಕೃಷ್ಣ ಫ್ಲೋರ್ ಮಿಲ್ ಬಳಿ ಸುತ್ತಮುತ್ತ |
| 16. | ಫ್ಲಾಟ್‌ಫಾರಂ 'ಟಿ' ಜಂಕ್ಷನ್ ರಾಜಾಜಿನಗರ ಕಡೆಗೆ ಸುತ್ತಮುತ್ತ |
| 17. | ಫ್ಲಾಟ್‌ಫಾರಂ 'ಟಿ' ಜಂಕ್ಷನ್ ರಾಜಾಜಿನಗರ ಕಡೆಗೆ ಸುತ್ತಮುತ್ತ |
| 18. | ಫ್ಲಾಟ್‌ಫಾರಂ 'ಟಿ' ಜಂಕ್ಷನ್ ರಾಜಾಜಿನಗರ ಕಡೆಗೆ ಸುತ್ತಮುತ್ತ |
| 19. | ಫ್ಲಾಟ್‌ಫಾರಂ 'ಟಿ' ಜಂಕ್ಷನ್ ಮಲ್ಲೇಶ್ವರಂ ಕಡೆಗೆ ಸುತ್ತಮುತ್ತ |
| 20. | ಫ್ಲಾಟ್‌ಫಾರಂ 'ಟಿ' ಜಂಕ್ಷನ್ ಮಲ್ಲೇಶ್ವರಂ ಕಡೆಗೆ ಸುತ್ತಮುತ್ತ |
| 21. | ಕೊಡ್ಸ್ ಬ್ರಿಡ್ಜ್ ಎಫ್.ಟಿ.ಎಫ್ ಕೆ.ಎಫ್. ಮಿಲ್ ಎದುರು, ಶೇಷಾದ್ರಿಪುರಂ ಸುತ್ತಮುತ್ತ |
| 22. | ಕೊಡ್ಸ್ ಬ್ರಿಡ್ಜ್ ಎಫ್.ಟಿ.ಎಫ್ ಕೆ.ಎಫ್. ಮಿಲ್ ಎದುರು, ಶೇಷಾದ್ರಿಪುರಂ ಸುತ್ತಮುತ್ತ |
| 23. | ಕೊಡ್ಸ್ ಬ್ರಿಡ್ಜ್ ಎಫ್.ಟಿ.ಎಫ್ ಕೆ.ಎಫ್. ಮಿಲ್ ಎದುರು, ಶೇಷಾದ್ರಿಪುರಂ ಸುತ್ತಮುತ್ತ |
| 24. | ಕೊಡ್ಸ್ ಬ್ರಿಡ್ಜ್ ಎಫ್.ಟಿ.ಎಫ್ ಕೆ.ಎಫ್. ಮಿಲ್ ಎದುರು, ಶೇಷಾದ್ರಿಪುರಂ ಸುತ್ತಮುತ್ತ |
| 25. | ಫಿ.ಎಫ್. ರಸ್ತೆ, ಕೆ.ಎಫ್. ಮಿಲ್ ಮತ್ತು ಸ್ವಾತಿ ಮಧ್ಯದಲ್ಲಿ |
| 26. | ಪಿ.ಎಫ್. ರಸ್ತೆ ಸ್ವಾತಿ ಎಫ್.ಟಿ.ಎಫ್. ಕೆ.ಎಫ್ ಮಿಲ್ ಎದುರು |
| 27. | ಪಿ.ಎಫ್. ರಸ್ತೆ ಸ್ವಾತಿ ಎಫ್.ಟಿ.ಎಫ್. ಕೆ.ಎಫ್ ಮಿಲ್ ಎದುರು |
| 28. | ಪಿ.ಎಫ್. ರಸ್ತೆ ಸ್ವಾತಿ ಎಫ್.ಟಿ.ಎಫ್. ಕೆ.ಎಫ್ ಮಿಲ್ ಎದುರು |
| 29. | ಪಿ.ಎಫ್. ರಸ್ತೆ ಸ್ವಾತಿ ಎಫ್.ಟಿ.ಎಫ್. ಕೆ.ಎಫ್ ಮಿಲ್ ಎದುರು |
| 30. | ಪಿ.ಎಫ್. ರಸ್ತೆ ಸ್ವಾತಿ ಎಫ್.ಟಿ.ಎಫ್. ಕೆ.ಎಫ್ ಮಿಲ್ ಎದುರು |
| 31. | ಬ್ರಿಡ್ಜ್ ಕೋಡೆ ಸರ್ಕಲ್ ಹತ್ತಿರ |
| 32. | ಕುಮಾರ್ ಪಾರ್ಕ್ |
| 33. | ಸ್ಯಾಂಕಿ ರಸ್ತೆ |
| 34. | ಪ್ಯಾಲೇಸ್ ರಸ್ತೆ |
| 35. | ವಸಂತನಗರ |
| 36. | ನೇತಾಜಿ ಬ್ರಿಡ್ಜ್ |
| 37. | ಬೆಂಗಳೂರು ಈಸ್ಟ್ |
| 38. | ಆರ್.ಆರ್. ಕಲ್ಯಾಣ ಮಂಟಪ ಹತ್ತಿರ |
| 39. | ಹಳೇ ಮದ್ರಾಸ್ ರಸ್ತೆ |
| 40. | ಯಲಹಂಕ ಬೈಪಾಸ್ |
| 41. | ದೇವಯ್ಯ ಪಾರ್ಕ್ (ಮಲ್ಲೇಶ್ವರಂ) |
| 42. | ದೇವಯ್ಯ ಪಾರ್ಕ್ (ಮಲ್ಲೇಶ್ವರಂ) |
| 43. | ದೇವಯ್ಯ ಪಾರ್ಕ್ (ಮಲ್ಲೇಶ್ವರಂ) |

| | |
|---|---|
| 44. | ದೇವಯ್ಯ ಪಾರ್ಕ್ (ಮಲ್ಲೇಶ್ವರಂ) |
| 45. | ಮಲ್ಲೇಶ್ವರಂ 17ನೇ ಕ್ರಾಸ್ ಬ್ಲಾಕ್ ನಿಂದ ಬ್ಲಾಕ್ |
| 46. | ಮಲ್ಲೇಶ್ವರಂ 17ನೇ ಕ್ರಾಸ್ |
| 47. | ಮೆಟ್ರೋ ಯಶವಂತಪುರ (ಮೆಟ್ರೋ) |
| 48. | ಮೆಟ್ರೋ ಯಶವಂತಪುರ (ಮೆಟ್ರೋ) |
| 49. | ಮೆಟ್ರೋ ಯಶವಂತಪುರ (ಮೆಟ್ರೋ) |
| 50. | ಮೆಟ್ರೋ ಯಶವಂತಪುರ (ಯಶವಂತಪುರ ಸರ್ಕಲ್) |
| 51. | ಮೆಟ್ರೋ ಯಶವಂತಪುರ (ಯಶವಂತಪುರ ಸರ್ಕಲ್) |
| 52. | ಮೆಟ್ರೋ ಯಶವಂತಪುರ (ಯಶವಂತಪುರ ಸರ್ಕಲ್) |
| 53. | ಯಶವಂತಪುರ ಯಾರ್ಡ್ |
| 54. | ಯಶವಂತಪುರ ಯಾರ್ಡ್ |
| 55. | ಯಶವಂತಪುರ ರೈಲ್ವೆ ಸ್ಟೇಷನ್ |
| 56. | ಯಶವಂತಪುರ ರೈಲ್ವೆ ಸ್ಟೇಷನ್ |
| 57. | ಯಶವಂತಪುರ ರೈಲ್ವೆ ಸ್ಟೇಷನ್ |
| 58. | ಯಶವಂತಪುರ ರೈಲ್ವೆ ಸ್ಟೇಷನ್ |
| 59. | ಹೆಬ್ಬಾಳ ರೈಲ್ವೆ ಸ್ಟೇಷನ್ ಹತ್ತಿರ |
| 60. | ಹೆಬ್ಬಾಳ (ಬೆಂಗಳೂರು ಸಿಟಿ) |
| 61. | ಬಿ.ಇ.ಎಲ್ ರಸ್ತೆ |
| 62. | ಬಿ.ಇ.ಎಲ್ ರಸ್ತೆ |
| 63. | ಬಿ.ಇ.ಎಲ್ ರಸ್ತೆ |
| 64. | ಬಿ.ಇ.ಎಲ್ ರಸ್ತೆ |
| 65. | ಜಕ್ಕೂರು ಲೆವೆಲ್ ಕ್ರಾಸ್ |
| 66. | ಜಕ್ಕೂರು ಲೆವೆಲ್ ಕ್ರಾಸ್ |
| 67. | ಜಕ್ಕೂರು ಬೈಪಾಸ್ ಬ್ರಿಡ್ಜ್ |
| 68. | ಜಕ್ಕೂರು ಬೈಪಾಸ್ ಬ್ರಿಡ್ಜ್ |
| 69. | ಕಿನೋ ಬ್ರಿಡ್ಜ್ ಎಫ್.ಟಿ.ಎಫ್. ಶೇಷಾದ್ರಿಪುರಂ |
| 70. | ನೆಹರು ಬ್ರಿಡ್ಜ್ ಎಫ್.ಟಿ.ಎಫ್. ಶಿವಾನಂದ ವೃತ್ತದ ಸುತ್ತಮುತ್ತ |
| 71. | ನೆಹರು ಬ್ರಿಡ್ಜ್ ಎಫ್.ಟಿ.ಎಫ್. ಶಿವಾನಂದ ವೃತ್ತದ ಸುತ್ತಮುತ್ತ |
| 72. | ನೆಹರು ಬ್ರಿಡ್ಜ್ ಎಫ್.ಟಿ.ಎಫ್. ಶಿವಾನಂದ ವೃತ್ತದ ಸುತ್ತಮುತ್ತ |
| 73. | ನೆಹರು ಬ್ರಿಡ್ಜ್ ಎಫ್.ಟಿ.ಎಫ್. ಶಿವಾನಂದ ವೃತ್ತದ ಸುತ್ತಮುತ್ತ |
| 74. | ನೆಹರು ಬ್ರಿಡ್ಜ್ ಎಫ್.ಟಿ.ಎಫ್. ಶಿವಾನಂದ ವೃತ್ತದ ಸುತ್ತಮುತ್ತ |
| 75. | ವಿಂಡ್ಸರ್ ಮ್ಯಾನರ್ ಬ್ರಿಡ್ಜ್ ಬಳಿ ಸ್ಯಾಂಕಿ ರಸ್ತೆ ಸುತ್ತಮುತ್ತ |
| 76. | ವಿಂಡ್ಸರ್ ಮ್ಯಾನರ್ ಬ್ರಿಡ್ಜ್ ಬಳಿ ಸ್ಯಾಂಕಿ ರಸ್ತೆ ಸುತ್ತಮುತ್ತ |
| 77. | ವಿಂಡ್ಸರ್ ಮ್ಯಾನರ್ ಬ್ರಿಡ್ಜ್ ಬಳಿ ಸ್ಯಾಂಕಿ ರಸ್ತೆ ಸುತ್ತಮುತ್ತ |
| 78. | ವಿಂಡ್ಸರ್ ಮ್ಯಾನರ್ ಬ್ರಿಡ್ಜ್ ಬಳಿ ಸ್ಯಾಂಕಿ ರಸ್ತೆ ಸುತ್ತಮುತ್ತ |
| 79. | ಎಂ.ಸಿ.ಸಿ. ಬ್ರಿಡ್ಜ್ ಎಫ್.ಟಿ.ಎಫ್. ಪ್ಯಾಲೇಸ್ ರಸ್ತೆ ಸುತ್ತಮುತ್ತ |
| 80. | ಎಂ.ಸಿ.ಸಿ. ಬ್ರಿಡ್ಜ್ ಎಫ್.ಟಿ.ಎಫ್. ಪ್ಯಾಲೇಸ್ ರಸ್ತೆ ಸುತ್ತಮುತ್ತ |
| 81. | ಎಂ.ಸಿ.ಸಿ. ಬ್ರಿಡ್ಜ್ ಎಫ್.ಟಿ.ಎಫ್. ಎಂ.ಸಿ.ಸಿ. ರಸ್ತೆ ಸುತ್ತಮುತ್ತ |
| 82. | ಎಂ.ಸಿ.ಸಿ. ಬ್ರಿಡ್ಜ್ ಎಫ್.ಟಿ.ಎಫ್. ಎಂ.ಸಿ.ಸಿ. ರಸ್ತೆ ಸೆಂಟರ್–ಬಿ2ಬಿ ಕಂಟೋನ್‌ಮೆಂಟ್ ಸ್ಟೇಷನ್ ಕಡೆಗೆ |
| 83. | ಎಂ.ಸಿ.ಸಿ. ಬ್ರಿಡ್ಜ್ ಎಫ್.ಟಿ.ಎಫ್. ಎಂ.ಸಿ.ಸಿ. ರಸ್ತೆ ಸುತ್ತಮುತ್ತ |
| 84. | ಎಂ.ಸಿ.ಸಿ. ಬ್ರಿಡ್ಜ್ ಎಫ್.ಟಿ.ಎಫ್. ಪ್ಯಾಲೇಸ್ ರಸ್ತೆ ಸುತ್ತಮುತ್ತ |

| | |
|---|---|
| 85. | ಎಂ.ಸಿ.ಸಿ. ಬ್ರಿಡ್ಜ್ ಎಫ್.ಟಿ.ಎಫ್. ಪ್ಯಾಲೇಸ್ ರಸ್ತೆ ಸುತ್ತಮುತ್ತ |
| 86. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ ಸುತ್ತಮುತ್ತ |
| 87. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ ಸುತ್ತಮುತ್ತ |
| 88. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ ಸುತ್ತಮುತ್ತ |
| 89. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ ಸುತ್ತಮುತ್ತ |
| 90. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ ಸುತ್ತಮುತ್ತ |
| 91. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ ಸುತ್ತಮುತ್ತ |
| 92. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ ಸುತ್ತಮುತ್ತ |
| 93. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ ಸುತ್ತಮುತ್ತ |
| 94. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಜಯಮಹಲ್ ರಸ್ತೆ ಸುತ್ತಮುತ್ತ |
| 95. | ಕಂಟೋನ್‌ಮೆಂಟ್ ಸ್ಟೇಷನ್ ಎಫ್.ಟಿ.ಎಫ್. ಜಯಮಹಲ್ ರಸ್ತೆ ಸುತ್ತಮುತ್ತ |
| 96. | ಕಂಟೋನ್‌ಮೆಂಟ್ ಸ್ಟೇಷನ್ ಗಾರ್ಡನ್ ಏರಿಯಾ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ–1 |
| 97. | ಕಂಟೋನ್‌ಮೆಂಟ್ ಸ್ಟೇಷನ್ ಗಾರ್ಡನ್ ಏರಿಯಾ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ–2 |
| 98. | ಕಂಟೋನ್‌ಮೆಂಟ್ ಸ್ಟೇಷನ್ ಗಾರ್ಡನ್ ಏರಿಯಾ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ–3 |
| 99. | ಕಂಟೋನ್‌ಮೆಂಟ್ ಸ್ಟೇಷನ್ ಗಾರ್ಡನ್ ಏರಿಯಾ ಎಫ್.ಟಿ.ಎಫ್. ಮಿಲ್ಲರ್ಸ್ ರಸ್ತೆ–4 |
| 100. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಸ್ಟೇಷನ್–6 |
| 101. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಸ್ಟೇಷನ್ ಕಾರ್ ಪಾರ್ಕಿಂಗ್–7 |
| 102. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಸ್ಟೇಷನ್ ಕಾರ್ ಪಾರ್ಕಿಂಗ್–7 |
| 103. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಸ್ಟೇಷನ್ ಕಾರ್ ಪಾರ್ಕಿಂಗ್–8 |
| 104. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಸ್ಟೇಷನ್ ಕಾರ್ ಪಾರ್ಕಿಂಗ್–8 |
| 105. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಮೈನ್ ಗೇಟ್–1 |
| 106. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಮೈನ್ ಗೇಟ್–1 |
| 107. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಮೈನ್ ಗೇಟ್–2 |
| 108. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಮೈನ್ ಗೇಟ್–1 |
| 109. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಸ್ಟೇಷನ್ |
| 110. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಕಂಟೋನ್‌ಮೆಂಟ್ ಸ್ಟೇಷನ್–6 |
| 111. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಜಯಮಹಲ್ |
| 112. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಜಯಮಹಲ್ |
| 113. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಜಯಮಹಲ್ |
| 114. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಜಯಮಹಲ್ –1 |
| 115. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಜಯಮಹಲ್ –2 |
| 116. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್.ಜಯಮಹಲ್–ಬೆನ್‌ಸನ್‌ಟೌನ್ ಮಧ್ಯ |
| 117. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಜಯಮಹಲ್–ಬೆನ್‌ಸನ್ ಟೌನ್ |
| 118. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಜಯಮಹಲ್–ಬೆನ್‌ಸನ್ ಟೌನ್ |
| 119. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಮಿಲ್ಲರ್ಸ್&ಎಂ.ಸಿ.ಸಿ. ನ್ಯೂ ಬೈಪಾಸ್–1 |
| 120. | ಕಂಟೋನ್‌ಮೆಂಟ್ ಸ್ಟೇಷನ್, ಎಫ್.ಟಿ.ಎಫ್. ಮಿಲ್ಲರ್ಸ್&ಎಂ.ಸಿ.ಸಿ. ಹಳೇ ಬೈಪಾಸ್–1 |
| 121. | ಬಂಬೋ ಬಜಾರ್ ಎಫ್.ಟಿ.ಎಫ್. ಮಿಲ್ಲರ್ಸ್ ನೇತಾಜಿ ರಸ್ತೆ |
| 122. | ನೇತಾಜಿ ರಸ್ತೆ, ಎಫ್.ಟಿ.ಎಫ್. ನೇತಾಜಿ ರಸ್ತೆ ಅಂಡರ್ ಬ್ರಿಡ್ಜ್ |
| 123. | ಟ್ಯಾನರಿ ಬ್ರಿಡ್ಜ್ ಎಫ್.ಟಿ.ಎಫ್. ಟ್ಯಾನರಿ ರಸ್ತೆ |
| 124. | ಟ್ಯಾನರಿ ಬ್ರಿಡ್ಜ್ ಎಫ್.ಟಿ.ಎಫ್. ಟ್ಯಾನರಿ ರಸ್ತೆ |
| 125. | ಕ್ಲಾರೆನ್ಸ್ ಸ್ಕೂಲ್ ಬ್ರಿಡ್ಜ್ ಎಫ್.ಟಿ.ಎಫ್. ರಿಚ್‌ಮಂಡ್ ಟೌನ್ |

| | |
|---|---|
| 126. | ಕ್ಲಾರೆನ್ಸ್ ಸ್ಕೂಲ್ ಬ್ರಿಡ್ಜ್ ಎಫ್.ಟಿ.ಎಫ್. ಫ್ರೇಜಾರ್ ಟೌನ್ |
| 127. | ಕ್ಲಾರೆನ್ಸ್ ಸ್ಕೂಲ್ ಬ್ರಿಡ್ಜ್ ಎಫ್.ಟಿ.ಎಫ್. ಫ್ರೇಜಾರ್ ಟೌನ್–2 |
| 128. | ಫ್ರೇಜಾರ್ ಟೌನ್ ಬ್ರಿಡ್ಜ್ ಎಫ್.ಟಿ.ಎಫ್. ಕ್ಲಾರೆನ್ಸ್ ಫ್ರೇಜಾರ್ ಟೌನ್–1 |
| 129. | ಫ್ರೇಜಾರ್ ಟೌನ್ ಬ್ರಿಡ್ಜ್ ಎಫ್.ಟಿ.ಎಫ್. ಕ್ಲಾರೆನ್ಸ್ ಫ್ರೇಜಾರ್ ಟೌನ್ |
| 130. | ಫ್ರೇಜಾರ್ ಟೌನ್ ಬ್ರಿಡ್ಜ್ ಎಫ್.ಟಿ.ಎಫ್. ಕ್ಲಾರೆನ್ಸ್ ಫ್ರೇಜಾರ್ ಟೌನ್–1 |
| 131. | ಐ.ಟಿ.ಸಿ. ಲೆವೆಲ್ ಕ್ರಾಸಿಂಗ್ ಎಫ್.ಟಿ.ಎಫ್. ಬಾಣಸವಾಡಿ ಐ.ಟಿ.ಸಿ. ಫ್ಯಾಕ್ಟರಿ |
| 132. | ಐ.ಟಿ.ಸಿ. ಲೆವೆಲ್ ಕ್ರಾಸಿಂಗ್ ಎಫ್.ಟಿ.ಎಫ್. ಬಾಣಸವಾಡಿ ಐ.ಟಿ.ಸಿ. ಫ್ಯಾಕ್ಟರಿ |
| 133. | ಐ.ಟಿ.ಸಿ. ಲೆವೆಲ್ ಕ್ರಾಸಿಂಗ್ ಎಫ್.ಟಿ.ಎಫ್. ಬಾಣಸವಾಡಿ ಐ.ಟಿ.ಸಿ. ಫ್ಯಾಕ್ಟರಿ |
| 134. | ಐ.ಟಿ.ಸಿ. ಲೆವೆಲ್ ಕ್ರಾಸಿಂಗ್ ಎಫ್.ಟಿ.ಎಫ್. ಬಾಣಸವಾಡಿ ಐ.ಟಿ.ಸಿ. ಫ್ಯಾಕ್ಟರಿ |
| 135. | ಬೆನ್ನೀಗಾನಹಳ್ಳಿ ಬ್ರಿಡ್ಜ್ |
| 136. | ಬೆನ್ನೀಗಾನಹಳ್ಳಿ ಬ್ರಿಡ್ಜ್ |
| 137. | ಬೆನ್ನೀಗಾನಹಳ್ಳಿ ಬ್ರಿಡ್ಜ್ |
| 138. | ಸೇಲಂ ಬ್ರಿಡ್ಜ್–ಕೆ.ಜೆ.ಎಂ. ರಸ್ತೆ |
| 139. | ಸೇಲಂ ಬ್ರಿಡ್ಜ್–ಕೆ.ಜೆ.ಎಂ. ರಸ್ತೆ |
| 140. | ಸೇಲಂ ಬ್ರಿಡ್ಜ್–ಕೆ.ಜೆ.ಎಂ. ರಸ್ತೆ |
| 141. | ಬೆನ್ನೀಗಾನಹಳ್ಳಿ ಬ್ರಿಡ್ಜ್ |
| 142. | ಟಿನ್ ಫ್ಯಾಕ್ಟರಿ ಬ್ರಿಡ್ಜ್ |
| 143. | ಟಿನ್ ಫ್ಯಾಕ್ಟರಿ ಬ್ರಿಡ್ಜ್ |
| 144. | ಸೇಲಂ ಬ್ರಿಡ್ಜ್–ಕೆ.ಜೆ.ಎಂ. ರಸ್ತೆ |
| 145. | ಚನ್ನಸಂದ್ರ ರಿಂಗ್ ರಸ್ತೆ |
| 146. | ಕೆ.ಜೆ.ಎಂ. ಹತ್ತಿರ |
| 147. | ಕೆ.ಜೆ.ಎಂ. ಹತ್ತಿರ–ಡಬ್ಲ್ಯೂ.ಎಫ್.ಡಿ. |
| 148. | ಕೆ.ಜೆ.ಎಂ. ಹತ್ತಿರ–ಡಬ್ಲ್ಯೂ.ಎಫ್.ಡಿ. |
| 149. | ಕೆ.ಜೆ.ಎಂ. ಸ್ಟೇಷನ್–ಹಳೇ ಬ್ರಿಡ್ಜ್ |
| 150. | ಕೆ.ಜೆ.ಎಂ. ಕ್ವಾರ್ಟರ್ಸ್ |
| 151. | ಕೆ.ಜೆ.ಎಂ. ಸ್ಟೇಷನ್–ಎಲ್.ಸಿ. ಗೇಟ್ |
| 152. | ಕೃಷ್ಣರಾಜಪುರಂ–ಡಬ್ಲ್ಯೂ.ಎಫ್.ಡಿ. ರಸ್ತೆ |
| 153. | ಕೆ.ಜೆ.ಎಂ.–ಡಬ್ಲ್ಯೂ.ಎಫ್.ಡಿ. |
| 154. | ಕೃಷ್ಣರಾಜಪುರಂ ವೈಟ್‌ಫೀಲ್ಡ್ ರಸ್ತೆ |
| 155. | ಕೆ.ಜೆ.ಎಂ–ಡಬ್ಲ್ಯೂ.ಎಫ್.ಡಿ. ರಸ್ತೆ |
| 156. | ಕೆ.ಜೆ.ಎಂ–ಡಬ್ಲ್ಯೂ.ಎಫ್.ಡಿ. |
| 157. | ಕೆ.ಜೆ.ಎಂ–ಡಬ್ಲ್ಯೂ.ಎಫ್.ಡಿ. ರಸ್ತೆ |
| 158. | ಕೆ.ಜೆ.ಎಂ–ಡಬ್ಲ್ಯೂ.ಎಫ್.ಡಿ. ರಸ್ತೆ |
| 159. | ಕೆ.ಜೆ.ಎಂ–ಡಬ್ಲ್ಯೂ.ಎಫ್.ಡಿ. ಮಹದೇವಪುರ ರಸ್ತೆ |
| 160. | ರಿಂಗ್ ರಸ್ತೆ ದೊಡ್ಡನಕ್ಕುಂದಿ |
| 161. | ದೊಡ್ಡನಗುಂಡಿ ಬ್ರಿಡ್ಜ್ |
| 162. | ದೊಡ್ಡನಗುಂಡಿ ಬ್ರಿಡ್ಜ್ |
| 163. | ರಿಂಗ್ ರಸ್ತೆ ದೊಡ್ಡನಕ್ಕುಂದಿ |
| 164. | ವೈಟ್‌ಫೀಲ್ಡ್ ಎಲ್.ಸಿ. ಹತ್ತಿರ |
| 165. | ವೈಟ್‌ಫೀಲ್ಡ್ ಎಲ್.ಸಿ. ಹತ್ತಿರ |
| 166. | ಚನ್ನಸಂದ್ರ ಸಿಗ್ನಲ್ |

| | |
|---|---|
| 167. | ಚನ್ನಸಂದ್ರ ಸಿಗ್ನಲ್ |
| 168. | ಚನ್ನಸಂದ್ರ ಬ್ರಿಡ್ಜ್ |
| 169. | ಚನ್ನಸಂದ್ರ ಬ್ರಿಡ್ಜ್ |
| 170. | ಚನ್ನಸಂದ್ರ ಬ್ರಿಡ್ಜ್ |
| 171. | ಚನ್ನಸಂದ್ರ ಸ್ಟೇಷನ್ ಎದುರುಗಡೆ |
| 172. | ಚನ್ನಸಂದ್ರ ಸ್ಟೇಷನ್ ಎದುರುಗಡೆ |
| 173. | ಚನ್ನಸಂದ್ರ ಸ್ಟೇಷನ್ ಎದುರುಗಡೆ |
| 174. | ಸಿ.ಎಸ್.ಡಿ.ಆರ್. ಸ್ಟೇಷನ್ ರಿಂಗ್ ರಸ್ತೆ ವಿಲೇಜ್ ರಸ್ತೆ ಎದುರು |
| 175. | ಚನ್ನಸಂದ್ರ ಸಿಗ್ನಲ್ |
| 176. | ಚನ್ನಸಂದ್ರ ಸಿಗ್ನಲ್ |
| 177. | ಚನ್ನಸಂದ್ರ ಸಿಗ್ನಲ್ |
| 178. | ರಾಮಮೂರ್ತಿ ನಗರ |
| 179. | ರಾಮಮೂರ್ತಿ ನಗರ ಬ್ರಿಡ್ಜ್ ಹತ್ತಿರ |
| 180. | ರಾಮಮೂರ್ತಿ ನಗರ ಬ್ರಿಡ್ಜ್ ಹತ್ತಿರ ಟ್ರಾಫಿಕ್ ಬಾಡ್ |
| 181. | ಬೆನ್ನಿಗೇನಹಳ್ಳಿ ಫ್ಲೈಓವರ್–ರಾಮಮೂರ್ತಿನಗರ |
| 182. | ಬೆನ್ನಿಗೇನಹಳ್ಳಿ ಫ್ಲೈಓವರ್–ರಾಮಮೂರ್ತಿನಗರ |
| 183. | ದೀಪಾಂಜಲಿನಗರ ಬ್ರಿಡ್ಜ್ |
| 184. | ದೀಪಾಂಜಲಿನಗರ ಬ್ರಿಡ್ಜ್ |
| 185. | ದೀಪಾಂಜಲಿ ಬ್ರಿಡ್ಜ್ |
| 186. | ದೀಪಾಂಜಲಿ ಓವರ್ ಬ್ರಿಡ್ಜ್ ಹತ್ತಿರ |
| 187. | ದೀಪಾಂಜಲಿ ಬ್ರಿಡ್ಜ್ |
| 188. | ದೀಪಾಂಜಲಿ ನಗರ ಬ್ರಿಡ್ಜ್ |
| 189. | ಆಜಾದ್ ಫ್ಯಾಕ್ಟರಿ/ಮೈಸೂರು ರಸ್ತೆ |
| 190. | ಆಜಾದ್ ಫ್ಯಾಕ್ಟರಿ/ಮೈಸೂರು ರಸ್ತೆ |
| 191. | ಮೈಸೂರು ರಸ್ತೆ ಆಜಾದ್ ಫ್ಯಾಕ್ಟರಿ |
| 192. | ಜ್ಞಾನಭಾರತಿ ರೈಲ್ವೆ ಸ್ಟೇಷನ್ ಹತ್ತಿರ |
| 193. | ಮೈಸೂರು ರಸ್ತೆ ಜ್ಞಾನಭಾರತಿ |
| 194. | ಮೈಸೂರು ರಸ್ತೆ ಜ್ಞಾನಭಾರತಿ |
| 195. | ಜ್ಞಾನಭಾರತಿ |

ಸದರಿ ಸ್ಥಳಗಳಲ್ಲಿ ಜಾಹೀರಾತು ಫಲಕಗಳನ್ನು ಜಾಹೀರಾತು ಬೈಲಾ–2006ರ ಉಪವಿಧಿಗಳನ್ವಯ ಯುನಿಪೋಲ್‌ಗಳ ಮಾದರಿಯಲ್ಲಿ ರೈಲ್ವೆ ರಸ್ತೆಯ ಸಮಾನಾಂತರವಾಗಿ ರಸ್ತೆಯ ಬದಿಯಲ್ಲಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರಿಗೆ/ಪಾದಚಾರಿಗಳ ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆ ಉಂಟಾಗದಂತೆ ಅಳವಡಿಸಲು ಮೂರು ವರ್ಷಗಳ ಅವಧಿಗೆ ಟೆಂಡರ್–ಕಂ–ಹರಾಜು ಮೂಲಕ ಈ ಕೆಳಕಂಡ ಷರತ್ತುಗಳನ್ವಯ ವಹಿಸಿಕೊಡಬಹುದಾಗಿದೆ.

1. ಪ್ರತಿ ಫಲಕಕ್ಕೆ ವಾರ್ಷಿಕವಾಗಿ ನೆಲಬಾಡಿಗೆಯನ್ನು ಹರಾಜು ಮೂಲಕ ನಿಗದಿಪಡಿಸುವುದು.
2. ವಾರ್ಷಿಕವಾಗಿ ಜಾಹೀರಾತು ತೆರಿಗೆಯನ್ನು ಹರಾಜು ಮೂಲಕ ನಿಗದಿಪಡಿಸುವುದು.
3. ಜಾಹೀರಾತು ಫಲಕವನ್ನು ಅನುಮತಿ ಪಡೆದ ಸಂಸ್ಥೆ ಹೊರತು ಅನ್ಯ ಸಂಸ್ಥೆಗೆ ವರ್ಗಾಯಿಸತಕ್ಕದ್ದಲ್ಲ.
4. ಜಾಹೀರಾತು ಬೈಲಾ–2006ರ ಉಪವಿಧಿಗಳನ್ವಯ ಜಾಹೀರಾತು ಫಲಕಗಳನ್ನು ಅಳವಡಿಸತಕ್ಕದ್ದು.
5. ಬೈಲಾ 7(7)ರ ಪ್ರಕಾರ ಜಾಹೀರಾತು ಏಜೆನ್ಸಿಯು ಜಾಹೀರಾತು ಪ್ರದರ್ಶನದ ಬರವಣಿಗೆಯಲ್ಲಿ ಕನ್ನಡ ಭಾಷೆಯ ಬಳಕೆಗೆ ಮೊದಲ ಆದ್ಯತೆ ನೀಡತಕ್ಕದು ಮತ್ತು ವ್ಯಾಕರಣ ಸಂಬಂಧಿತ ತಪ್ಪುಗಳಿಗೆ ಅವಕಾಶ ನೀಡಬಾರದು.

ಮೇಲ್ಕಂಡ 195 ಸ್ಥಳಗಳಲ್ಲಿ ಯುನಿಪೋಲ್ ಮಾದರಿಯಲ್ಲಿ ಸುಮಾರು 500 ಸಂಖ್ಯೆಯ ಜಾಹೀರಾತು ಫಲಕಗಳನ್ನು ಟೆಂಡರ್–ಕಂ–ಹರಾಜು ಮೂಲಕ ಮೂರು ವರ್ಷಗಳ ಅವಧಿಗೆ ವಹಿಸಲು ಸೂಕ್ತ ಅನುಮೋದನೆಗಾಗಿ ಮಂಡಿಸಿರುವ ದಿನಾಂಕ: 10–11–2011ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22–11–2011 ರ ನಿರ್ಣಯ.

***ನಿರ್ಣಯ :– ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ ; 22–11–2011 ನಿರ್ಣಯವನ್ನು ಒಪ್ಪಿದೆ.***

## ***41]. ವಿಷಯದ ಸಂಖ್ಯೆ :–ತೆಆಸ್ಥಾಸ/416/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/94/09–10, ದಿನಾಂಕ : 02–11–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್–167, 22ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಜಯನಗರ 3ನೇ ಬ್ಲಾಕ್, ಪಾಲಿಕೆ ಖಾಲಿ ನಿವೇಶನವನ್ನು ಪೆಟ್ಟಿ ಅಂಗಡಿಗೆ ಗುತ್ತಿಗೆ ನೀಡಲು ಶ್ರೀಮತಿ. ಬಸಮ್ಮ ರವರು ಕೋರಿರುತ್ತಾರೆ.

ಸ್ಥಳೀಯ ಅಧಿಕಾರಿಗಳ ಸ್ಥಳ ಪರಿಶೀಲಿಸಿ ನಕ್ಷೆಯೊಂದಿಗೆ ವರದಿಯಲ್ಲಿ ಅರ್ಜಿದಾರರು ಕೋರಿರುವ ಸ್ಥಳವು ಪಾಲಿಕೆ ನಿರ್ಮಿತ ಶೌಚಾಲಯದ ಹಿಂಭಾಗದ ದೊಡ್ಡಮೋರಿ ಮತ್ತು ಪಾಲಿಕೆ ಉದ್ಯಾನವನದ ಮಧ್ಯಭಾಗದ ಖಾಲಿ ಜಾಗವಾಗಿದ್ದು, ಅರ್ಜಿದಾರರು ಕೋರಿರುವ ಪೆಟ್ಟಿ ಅಂಗಡಿಗೆ ಸ್ಥಳವನ್ನು ಗುತ್ತಿಗೆಗೆ ನೀಡಲು ನಿಯಮಾನುಸಾರ ಮುಂದಿನ ಕ್ರಮಕ್ಕಾಗಿ ಕಡತ ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಲಾಗಿ ನಕ್ಷೆಯಂತೆ ಸ್ಥಳ ಲಭವಿದ್ದು, ತಾತ್ಕಾಲಿಕ ಪೆಟ್ಟಿ ಅಂಗಡಿ ಇಡುವ ಅರ್ಜಿದಾರರ ಕೋರಿಕೆಯನ್ನು ಪರಿಗಣಿಸುವ ಬಗ್ಗೆ ನಿರ್ಣಯಕ್ಕಾಗಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲು ಅಭಿಪ್ರಾಯಿಸಲಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ: ಉ.ಆ(ಕಂ)/ಪಿ.ಆರ್/115/01–02, ದಿನಾಂಕ: 01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ: 10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಕ್ಕದ್ದು.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21–09–2001ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ. 9100/–ಗಳಿದ್ದು, ಅರ್ಜಿದಾರರುಗಳು ಕೋರಿರುವ 10x10 ಅಡಿಗಳ ಜಾಗವು 100 ಚ.ಅಡಿಗಳಾಗುತ್ತದೆ. ಇದರಂತೆ 9100x100=9,10,000/– ರೂ. ಗಳಾಗುತ್ತದೆ. ಶೇ: 10%ರಷ್ಟು ವಾರ್ಷಿಕ ಗುತ್ತಿಗೆ ಹಣ 91,000/– ರೂ. ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 7585/– ರೂ. ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆಯನ್ವಯ –1976ರ (6) ಹಾಗೂ (ಬಿ) II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಪರವಾನಿಗೆ ಪಡೆಯಬೇಕು ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ/2002, ದಿನಾಂಕ: 02–06–2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಈ ಹಿನ್ನೆಲೆಯಲ್ಲಿ ನಗರಯೋಜನೆ ಅಭಿವೃದ್ದಿ ಸ್ಥಾಯಿ ಸಮಿತಿ ರವರು ಟಿಪ್ಪಣಿ ಪರಿಶೀಲಿಸಿ, ಪಾದಚಾರಿಗಳಿಗೆ ಅನಾನುಕೂಲವಾಗುವ ಹಿನ್ನೆಲೆಯಲ್ಲಿ ಮನವಿ ತಿಸ್ಕರಿಸಿರುತ್ತದೆ. ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸಿ, ಪಾದಚಾರಿಗಳಿಗೆ ಅನಾನುಕೂಲವಾಗುವುದಿಲ್ಲವೆಂದು ಮತ್ತೊಮ್ಮೆ ಪರಿಶೀಲಿಸಲು ಕೋರಿದ್ದು, ಈ ಬಗ್ಗೆ ವಲಯಾಧಿಕಾರಿಗಳು ಈ ಸ್ಥಳ ಪಾದಚಾರಿ ಮಾರ್ಗದಲ್ಲಿ ಬರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ನಕ್ಷೆ ಪರಿಶೀಲಿಸಲಾಗಿ ಪ್ರಸ್ತಾಪಿಸಿರುವ ಜಾಗದಲ್ಲಿ ರಾಜಕಾಲುವೆ ನಿರ್ವಹಣೆಗಾಗಿ ವಾಹನ ಸಂಚರಿಸುವುದು ಅತ್ಯವಶ್ಯಕವಾಗಿರುವುದರಿಂದ, ಈ ಜಾಗವನ್ನು ನೀಡುವುದು ಸೂಕ್ತವಾಗಿರುವುದಿಲ್ಲವೆಂದು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 02–11–2011ರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22–11–2011 ರ ನಿರ್ಣಯ.

***ನಿರ್ಣಯ :– ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ ; 22–11–2011 ನಿರ್ಣಯವನ್ನು ಪುನರ್ ಪರಿಶೀಲಿಸಲು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಹಿಂತಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

***42]. ವಿಷಯದ ಸಂಖ್ಯೆ :–ತೆಆಸ್ಥಾಸ/417/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/165/11–12, ದಿನಾಂಕ : 09–11–2011ರಲ್ಲಿ ವಿವರಿಸಿರುವಂತೆ, ಮಾನ್ಯ ಆಯುಕ್ತರ ದಿನಾಂಕ: 09–11–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ರವಿಕುಮಾರ್ ರವರಿಗೆ ವಾರ್ಡ್–133ರ ಆರ್.ಪಿ.ಸಿ ಬಡಾವಣೆ ಬಂಡೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ಬಿ.ಎಂ.ಟಿ.ಸಿ ಬಸ್ ನಿಲ್ದಾಣದ ಬಳಿ ನಂದಿನಿ ಹಾಲಿನ ಪೂರೈಕೆ ಕೇಂದ್ರ ಸ್ಥಾಪಿಸಲು 5X6 ಅಡಿಗಳ ಜಾಗವನ್ನು ಮಾಸಿಕ 1000/– ರೂ. ನಿಗಧಿಪಡಿಸಿ ದಿನಾಂಕ: 04–07–2007 ರಿಂದ ಮೂರು ವರ್ಷಗಳ ಅವಧಿ ಗುತ್ತಿಗೆ ನೀಡುದ್ದು, 03–07–2010ಕ್ಕೆ ಗುತ್ತಿಗೆ ಅವಧಿ ಮುಕ್ತಾಯಗೊಂಡಿರುತ್ತದೆ.

ಶ್ರೀ ರವಿಕುಮಾರ್‌ರವರು ಮನವಿ ಸಲ್ಲಿಸಿ, ತಾನು ನಿರುದ್ಯೋಗಿ ಪದವೀಧರರಾಗಿದ್ದು, ಗುತ್ತಿಗೆ ಅವಧಿ ಮುಕ್ತಾಯವಾಗಿರುವುದರಿಂದ ಅವಧಿ ಮುಗಿದ ದಿನಾಂಕದಿಂದ 9–ವರ್ಷಗಳ ಅವಧಿಗೆ ಹಾಲಿನ ಮಾರಾಟ ಮಳಿಗೆಗೆ ಗುತ್ತಿಗೆ ನವೀಕರಿಸುವಂತೆ ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ ಕಾರ್ಡ್ ರಸ್ತೆ ಮತ್ತು ಸರ್ವಿಸ್ ರಸ್ತೆ ಮಧ್ಯೆ ಭಾಗದಲ್ಲಿರುವ ಬುಲೇವಾರ್ಡು ಪಾರ್ಕ್‌ನ ಪಕ್ಕದ ಬಸ್ ನಿಲ್ದಾಣದ ಪಕ್ಕದಲ್ಲಿದ್ದು, ಇದರಿಂದ ಪಾದಚಾರಿಗಳಿಗೆ ತೊಂದರೆಯಾಗುವುದಿಲ್ಲ ಹಾಗೂ ಈ ಪ್ರದೇಶದಲ್ಲಿ ಬಿ.ಎಂ.ಆರ್.ಸಿ.ಎಲ್ ಕಾಮಗಾರಿ ನಡೆಯುತ್ತಿದ್ದು, ಮೇಟ್ರೋ ಹಾದಿಗೆ ಒಳಪಡುವುದಿಲ್ಲವಾದ್ದರಿಂದ, ಮುಂದಿನ 5–ವರ್ಷಗಳಿಗೆ ನವೀಕರಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ದಿನಾಂಕ: 01–03–2002ರ ಆಯುಕ್ತರ ಸುತ್ತೋಲೆ ಕಲಂ (1) ರಲ್ಲಿ 12 ತಿಂಗಳಿಗೆ ಮೀರದ ಅವಧಿಗೆ ಗುತ್ತಿಗೆ ನೀಡುವ ಅಧಿಕಾರವು ಆಯುಕ್ತರಿಗಿದ್ದು, ಸ್ಥಾಯಿಸಮಿತಿಗಳಿಗೆ 3–ವರ್ಷ , ಪಾಲಿಕೆ ಸಭೆಗೆ 5 ವರ್ಷ ಹಾಗೂ ಕಲಂ 7 (4)ರಲ್ಲಿ ಗುತ್ತಿಗೆ ಹಣ ಸ್ಥಳದ ಹಾಲಿ ಮಾರುಕಟ್ಟೆ ದರಕ್ಕೆ 10% ರಷ್ಟು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಲು ಆದೇಶವಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21–09–2011ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ. 5,810/–ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 30 ಚ. ಅಡಿಗಳಾಗುತ್ತದೆ. ಇದರಂತೆ 5810X30=1,74,300/– ರೂ. ಗಳಾಗುತ್ತದೆ. ಶೇ: 10% ರಷ್ಟು ವಾರ್ಷಿಕ ಗುತ್ತಿಗೆ ಹಣ 17,430/–ರೂ. ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 1,460/– ರೂ.ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ರವೀಕುಮಾರ್‌ರವರಿಗೆ ಮುಂದಿನ 5–ವರ್ಷಗಳಿಗೆ ಗುತ್ತಿಗೆ ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ: 09–11–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22–11–2011 ರ ನಿರ್ಣಯ.

***ನಿರ್ಣಯ :–*** **ದಿನಾಂಕ 22–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.1200/– (ಒಂದು ಸಾವಿರದ ಎರಡು ನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 25-01-2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಉಪ ಆಯುಕ್ತರು (ಭೂಸ್ವಾಧೀನ), |
| ಲತಾ. ಕೆ – ಸದಸ್ಯರು | ಸಹಾಯಕ ಆಯುಕ್ತರು (ಆಸ್ತಿಗಳು), |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಆರ್.ಓ.ಬಿ/ಆರ್.ಯು.ಬಿ), |
| ವಿ. ವಾಗಿಶ್ – ಸದಸ್ಯರು | ಲೆಕ್ಕಾಧಿಕ್ಷಕರು, ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ, |
| ಮಂಜುನಾಥ – ಸದಸ್ಯರು | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ರ.ಮೂ.ಸೌ), |
| ಎಲ್. ನಾಗರತ್ನ – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಯೋಜನೆ–ಆರ್.ಆರ್.ನಗರ), |
| ವರಲಕ್ಷ್ಮಿ. ಜೆ – ಸದಸ್ಯರು | |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/226/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ (ಯೋಜನೆ) ರವರು ಕಡತದ ಕಂಡಿಕೆ ಸಂಖ್ಯೆ 19 ರಲ್ಲಿ ನಮೂದಿಸಿರುವ 6 ಕಾಮಗಾರಿಗಳ ಒಟ್ಟು ಮೊತ್ತ ರೂ.599.41 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಮುಖ್ಯ ಅಭಿಯಂತರರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕಂಡಿಕೆ ಸಂಖ್ಯೆ 24 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ, ಲೆಕ್ಕ ಶೀರ್ಷಿಕೆ ಮೂಲ ಭೂತ ಸೌಕರ್ಯಗಳು ಮುಖ್ಯ ರಸ್ತೆ/ಆರ್ಟೆರಿಯಲ್/ಉಪ ಆರ್ಟೆರಿಯಲ್ ರಸ್ತೆಗಳು ಪಿ.ಸಂಖ್ಯೆ 2019 ರಲ್ಲಿ ಒಟ್ಟು 6 ಕಾಮಗಾರಿಗಳ ಮೊತ್ತ ರೂ.599.41 ಲಕ್ಷಗಳ ಅನುದಾನವನ್ನು ಒದಗಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/236/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ ಹನುಮಂತೇಗೌಡ, ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 72 ಇವರು ಮುದ್ದಯ್ಯನ ಪಾಳ್ಯ ರಿಂಗ್ ರಸ್ತೆಗೆ ಹಾದು ಹೋಗುವ ರಸ್ತೆಯಲ್ಲಿ ಪ್ರತಿ ನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಮೊತ್ತ ರೂ.89.00 ಲಕ್ಷಗಳಿಗೆ ಅನುಮೋದನೆ ನೀಡಲು ಕೋರಿದ್ದು, ಕಾರ್ಯಪಾಲಕ ಅಭಿಯಂತರರು – ರಸ್ತೆ ಮೂಲಭೂತ ಸೌಕರ್ಯ ಇವರು ತುರ್ತು ಕಾಮಗಾರಿಗಳ ಅನುದಾನದಲ್ಲಿ ಜಾಬ್ ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುತ್ತಾರೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿದ್ದು, 2010–11ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಂಡ ಕಾಮಗಾರಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಅಡಿ

ಸೂಕ್ತ ಅನುದಾನ ಒದಗಿಸಿಕೊಂಡು ಅನುಷ್ಠಾನಗೊಳಿಸುವುದರ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡುವುದರ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 05-08-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## 03]. ವಿಷಯದ ಸಂಖ್ಯೆ :-ತೆಆಸ್ಥಾಸ/237/2011-12

ಆಯುಕ್ತರ ಟಿಪ್ಪಣಿ ದಿನಾಂಕ : 03-08-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎನ್. ಎಸ್. ನಂದೀಶರೆಡ್ಡಿ ರವರು ಹೆಚ್.ಎ.ಎಲ್. ಏರ್‌ಪೋರ್ಟ್ ವಾರ್ಡ್ 87ರ ಅನ್ನಸಂದ್ರಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾರ್ವಜನಿಕರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ರೂ.300.00 ಲಕ್ಷಗಳ ಅನುದಾನವನ್ನು ಮತ್ತು ವಾರ್ಡ್ 87ರ ನೆಲ್ಲೂರುಪುರದಿಂದ ರೆಡ್ಡಿಪಾಳ್ಯ ಎಲ್.ಬಿ.ಶಾಸ್ತ್ರಿನಗರ ಮೂಲಕ ವಿಭೂತಿಪುರ ಕೆರೆವರೆಗೆ ರಾಜಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷ ಒಟ್ಟು ರೂ.700.00 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕೆಂದು ಕೋರಿ ಪತ್ರವನ್ನು ಸಲ್ಲಿಸಿರುತ್ತಾರೆ. ಪತ್ರವನ್ನು ಲಗತ್ತಿಸಿದೆ.

2011-12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂದಿಸಿದಂತೆ ಅನುದಾನದ ಮೊತ್ತ ರೂ.700.00 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## 04]. ವಿಷಯದ ಸಂಖ್ಯೆ :-ತೆಆಸ್ಥಾಸ/305/2011-12

ಆಯುಕ್ತರ ಟಿಪ್ಪಣಿ ದಿನಾಂಕ : 28-09-2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160 ರ 07 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ ಶ್ರೀ ಎಂ ಶ್ರೀನಿವಾಸ್, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರು 2011-12 ನೇ ಸಾಲಿನ ಆಯವ್ಯಯದ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಅನುಮೋದನೆ ನೀಡಲು ತಮ್ಮ ಪತ್ರದ ಮುಖಾಂತರ ಕೋರಿರುತ್ತಾರೆ.

2011-12 ನೇ ಸಾಲಿನ ಕರಡು ಆಯವ್ಯಯ ಮಂಡಿಸುವ ಮುನ್ನ ಅಗತ್ಯ ತುರ್ತು ಕಾಮಗಾರಿಗಳಿಗಾಗಿ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡಿರುವ ಮೊತ್ತ ರೂ. 6600.00 ಲಕ್ಷಗಗಳು ಹಾಗೂ ಚಾಲ್ತಿ ಕಾಮಗಾರಿಗಳಿಗೆ ರೂ. 8500.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

( ರೂ. ಲಕ್ಷಗಳಲ್ಲಿ)

| 2011-12 ರ ಕರಡು ಆಯವ್ಯಯದಲ್ಲಿ ಒಟ್ಟಾರೆ ಮೀಸಲಿಟ್ಟ ಅನುದಾನ (6600+8500) | 2011-12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಜಾಬ್ ನಂಬರ್ ನೀಡಿರುವ ಮೊತ್ತ | ಜಾಬ್ ಸಂಖ್ಯೆ ನೀಡಲು ಸ್ಥಾಯಿ ಸಮಿತಿ ಮತ್ತು ಮಾನ್ಯ ಆಯುಕ್ತರವರಿಂದ ಅನುಮೋದಿತ ಮೊತ್ತ | ಜಾಬ್ ನೀಡುವುದರ ಬಗ್ಗೆ ಅನುಮೋದನೆಗೆ ಮಂಡಿಸಿರುವ ಮೊತ್ತ | ರಸ್ತೆ ಗುಂಡಿ ಮುಚ್ಚಲು ಜೆಟ್ ಪ್ಯಾಕರ್ ಮಿಸನ್ ಖರೀದಿಸಲು ಮೀಸಲಿಡಲು ಮೌಖಿಕವಾಗಿ ಸೂಚಿಸಿರುವ ಮೊತ್ತ | ಬಾಕಿ ಇರುವ ಮೊತ್ತ |
|---|---|---|---|---|---|
| 8500.000 | 2533.420 | 1383.77 | 485.08 | 2500.00 | 1597.73 |

2011-12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ 7 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## *05]. ವಿಷಯದ ಸಂಖ್ಯೆ :–ತೆಆಸ್ಥಾಸ/310/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)45/2011–12, ದಿನಾಂಕ : 30–09–2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ. ರುದ್ರೇಶ್, ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ (ರಿ), ನಂ. 208, ಮಿಲೇನಿಯಂ ಶಾಲೆ ಎದುರು, ಆರ್.ಎಂ.ವಿ. 2ನೇ ಹಂತ, ರಾಜಗೋಪಾಲ ರಸ್ತೆ, ಸಂಜಯನಗರ ಅಂಚೆ, ನಾಗಶೆಟ್ಟಿ ಹಳ್ಳಿ, ಬೆಂಗಳೂರು – 560 094. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಸಾಂಸ್ಕೃತಿಕ ನೆಲೆಗಟ್ಟಿಗಾಗಿ ಸಮಾಜದ ಉನ್ನತಿಗಾಗಿ ಶಿಕ್ಷಣದ ಪ್ರಗತಿಗಾಗಿ ಪರ್ಯಾಯಗಳನ್ನು ಹುಡುಕುವ ಮೂಲಕ ಸಮಾನತೆಯ ಮತ್ತು ಜನಪರಂಪರೆಯ ಸಮಾಜ ನಿರ್ಮಾಣಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾಂಸ್ಕೃತಿಕ ಸಂಸ್ಥೆಯೆಂದು ಹೆಸರು ಮಾಡಿರುವುದಾಗಿ ತಿಳಿಸಿರುತ್ತಾರೆ. ಕಳೆದ 20 ವರ್ಷಗಳಿಂದ ರಂಗಭೂಮಿ, ಪೌರಾಣಿಕ, ಜನಪದ ಸಾಹಿತ್ಯ, ಪರಿಸರ, ಶಿಕ್ಷಣ ಗ್ರಾಮೀಣಾಭಿವೃದ್ಧಿ ಮುಂತಾದ ಎಲ್ಲಾ ರಂಗಗಳಲ್ಲೂ ಕೆಲಸ ಮಾಡುತ್ತಿರುವ ನಾಡಿನ ಸಾಹಿತಿ, ಚಿಂತಕರ, ಕಲಾವಿದರ ಮೆಚ್ಚುಗೆ ಪಡೆದಿರುವುದಾಗಿ ತಿಳಿಸಿರುತ್ತಾರೆ. ಪ್ರತಿ ವರ್ಷದಂತೆ ಈ ವರ್ಷವೂ ತಮ್ಮ ವೇದಿಕೆ ವತಿಯಿಂದ ನಾಟಕೋತ್ಸವ–2011 ಕಾರ್ಯಕ್ರಮವನ್ನು ನಯನ ರಂಗಮಂದಿರ ಮತ್ತು ರವೀಂದ್ರ ಕಲಾ ಕ್ಷೇತ್ರದಲ್ಲಿ ದಿನಾಂಕ 05.09.2011 ಮತ್ತು 06.09.2011 ರಂದು ಎರಡು ದಿನಗಳ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಈ ಎರಡು ದಿನಗಳಲ್ಲಿ ಎರಡು ನಾಟಕ ಮತ್ತು ಒಂದು ರಂಗ ಗೀತೆ ಕಾರ್ಯಕ್ರಮ ಮಾಡುತ್ತಿದ್ದು ಈ ಮೂರು ಕಾರ್ಯಕ್ರಮಗಳಿಗೂ ಪಾಲಿಕೆ ವತಿಯಿದ ಪ್ರಾಯೋಜನೆ/ಧನ ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

ಪೂಜ್ಯ ಮಹಾಪೌರರು ಹಾಗೂ ಶ್ರೀ ಎಸ್.ಎಂ. ಕೃಷ್ಣ ಮೂರ್ತಿ ಸದಸ್ಯರು ವಾರ್ಡ್–19 (ಸಂಜಯ್ ನಗರ) ರವರು ಟಿಪ್ಪಣಿ ಬರೆದು ಸದರಿ ಸಂಘಕ್ಕೆ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/312/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)43/2011–12, ದಿನಾಂಕ : 30–09–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಗೀತಾ ಬಾಲಿ, ನೃತ್ಯ ನಿರ್ದೇಶಕಿ ಮತ್ತು ಕಾರ್ಯದರ್ಶಿ, ಗೀತಾ ನೃತ್ಯ ಶಾಲಾ (ರಿ) ನಂ. 140, 4ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜೆ.ಪಿ. ನಗರ, 3ನೇ ಹಂತ, (ವಿಜಯಾ ಬ್ಯಾಂಕ್ ರಸ್ತೆ) ಬೆಂಗಳೂರು – 560 078 ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ತಾವು ಪರಿಶಿಷ್ಟ ವರ್ಗಕ್ಕೆ ಸೇರಿದ ಹೆಸರಾಂತ ನೃತ್ಯ ಕಲಾವಿದೆ. ತಮ್ಮ ನೃತ್ಯ ಶಾಲೆಯು 4ನೇ ಅಕ್ಟೋಬರ್ 1988 ರಲ್ಲಿ ಸ್ಥಾಪನೆಯಾಗಿದ್ದು, ಸುಮಾರು 50 ವರ್ಷಗಳಿಂದ ಅನೇಕ ವಿದ್ಯಾರ್ಥಿಗಳಿಂದ ನೃತ್ಯ ಶಿಕ್ಷಣವನ್ನು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ ರಮಣ ಮಹರ್ಷಿ ಅಂಧರ ಶಾಲೆಯಲ್ಲಿ ಅಂಧ ಮಕ್ಕಳಿಗೆ ನೃತ್ಯ ಶಿಕ್ಷಣವನ್ನು ಸಹಾ ಕೊಟ್ಟಿರುತ್ತೇನೆಂದು, ತರಬೇತಿ ನೀಡಿದ ವಿದ್ಯಾರ್ಥಿಗಳ ಪ್ರದರ್ಶನವನ್ನು ವಿಕ್ಷಿಸಿ ಅನೇಕ ಗಣ್ಯರು ಮತ್ತು ವಿಮರ್ಶಕರು ಮುಕ್ತ ಕಂಠದಿಂದ ಪ್ರಶಂಸಿರುತ್ತಾರೆಂದು ತಿಳಿಸಿರುತ್ತಾರೆ. ತಾನು ಭರತನಾಟ್ಯ ಮತ್ತು ಕೂಚಿಪುಡಿ ನೃತ್ಯದಲ್ಲಿ ಪರಿಣಿತಿ ಹೊಂದಿದ್ದು ದೇಶದಾದ್ಯಂತ ಸಾವಿರಕ್ಕೂ ಹೆಚ್ಚು ನೃತ್ಯ ಪ್ರದರ್ಶನಗಳನ್ನಿತ್ತು ಗಣ್ಯರಿಂದ ಪ್ರಶಂಸೆ ಗಳಿಸಿದ್ದು, ತನ್ನ ನೃತ್ಯ ಸೇವೆಗಾಗಿ ಕರ್ನಾಟಕದಿಂದ ರಾಜ್ಯೋತ್ಸವ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ–2009, ವಿಶೇಷ ಶಿಕ್ಷಕರ ಪ್ರಶಸ್ತಿ–2003, ಡಾ॥ ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ–2001, ಹಾಗೂ ಕೆಂಪೇಗೌಡ ಪ್ರಶಸ್ತಿ–2001 ಅನ್ನು ಪಡೆದಿರುವುದಾಗಿ ತಿಳಿಸಿ ತಮ್ಮ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ 2 ದಿನಗಳ "ನಾದ ನೃತ್ಯಾಂಜಲಿ" ನೃತ್ಯ ಕಾರ್ಯಕ್ರಮವನ್ನು ದಿನಾಂಕ 23, 24ರ ಡಿಸೆಂಬರ್ 2011ರಂದು ಆಯೋಜಿಸಿದ್ದು, ಪಾಲಿಕೆಯಿಂದ ರೂ. 6.00 ಲಕ್ಷಗಳ ಧನ ಸಹಾಯವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ನೃತ್ಯ ಶಾಲೆಗೆ **2010–11** ನೇ ಸಾಲಿಗೆ **ರೂ. 25,000/–** (ಇಪ್ಪತ್ತೈದು ಸಾವಿರ) ಗಳ ಅನುದಾನ/ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 30–09–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.1,00,000/– (ಒಂದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *07]. ವಿಷಯದ ಸಂಖ್ಯೆ :–ತೆಆಸ್ಥಾಸ/320/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)58/2011–12, ದಿನಾಂಕ : 03–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಹರೀಶ್. ಬಿ.ಇ. ಮಾನ್ಯ ಉಪ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೆಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ, ಸದರಿಯವರು ಚಾನ್ ಕೀ ಕರಾಟೆ ಆರ್ಟ್ ಅಕಾಡೆಮಿ(ರಿ) ಹಾಗೂ ಕಲಾ ಮಂದಿರ ಸಂಸ್ಥೆಯು ಹೆಚ್. ಪಾರ್ವತಮ್ಮ ಹಿರೇಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇಲ್ಲಿ ಸುಮಾರು 20 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಯ ಮುಖಾಂತರ ಅನೇಕ ಬಡ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವುದಾಗಿ ಪ್ರಸ್ತಾಪಿಸಿ, **ಮಾ:ಅನಿಲ್,** ನಂದಿನಿ ಬಡಾವಣೆ ಇವರು ದಿನಾಂಕ 26–06–2011 ರಂದು ನಗರದ ನಾಗರಭಾವಿ ವೃತ್ತದಿಂದ ಡಾ: ರಾಜ್ ಕುಮಾರ್ ಪುಣ್ಯ ಭೂಮಿ ಕಂಠೀರವ ಸ್ಟುಡಿಯೋ, ಇಲ್ಲಿಯವರೆಗೆ 8 ಕಿ.ಮೀ ದೂರದವರೆಗೆ **"ನಾನ್ ಸ್ಟಾಫ್ ಡಬಲ್ ಹ್ಯಾಂಡ್ ಕಾರ್ಟ್ ವೀಲ್"** ನ್ನು ಕೇವಲ 1 ಗಂಟೆ 14 ನಿಮಿಷದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿ ಲಿಮ್ಕಾ ಪುಸ್ತಕದಲ್ಲಿ ದಾಖಲೆ ನಿರ್ಮಿಸಿ, ಈ ಮೂಲಕ ರಾಜ್ಯದ ಗೌರವವನ್ನು ಎತ್ತಿ ಹಿಡಿದಿರುತ್ತಾರೆ. ಇವರು ಬಡ ಕುಟುಂಬದಿಂದ ಬಂದವರಾಗಿರುತ್ತಾರೆ. ಪಾಲಿಕೆ ವತಿಯಿಂದ ಆತನ ಕುಟುಂಬಕ್ಕೆ ಆರ್ಥಿಕ ಸಹಾಯವನ್ನು ಮಹಾನಗರ ಪಾಲಿಕೆ ವತಿಯಿಂದ ಕೊಡಿಸಿ ಕೊಡಲು ಕೋರಿಕೊಂಡಿರುತ್ತಾರೆಂದು ತಿಳಿಸಿ, ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೆಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇವರು ನೀಡಿರುವ ಪತ್ರವನ್ನು ಪರಿಗಣಿಸಿ ಧನ ಸಹಾಯ ಮಾಡಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ–ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/– ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಪ್ರಸಕ್ತ 2011–12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವಿಗೆ ರೂ. 10,000/– ಗಳ (ಹತ್ತು ಸಾವಿರಗಳು) ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/321/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)64/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಶ್ರೀ ಗುರುದೇವ ನಾರಾಯಣ ಕುಮಾರ್, ಅಧ್ಯಕ್ಷರು, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ (ನೋ), ನಂ. 619/620, 13ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560 040. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡ ಚಳವಳಿಯ ಧೀಮಂತ ನಾಯಕರು, ಮಾಜಿ ಶಾಸಕರು ಆಗಿದ್ದ ಜಿ. ನಾರಾಯಣ ಕುಮಾರ್ ಸ್ಥಾಪಿತ ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಆಶ್ರಯದಲ್ಲಿ ನವೆಂಬರ್ 1 2011 ರಿಂದ ಒಂದು ತಿಂಗಳ ಕಾಲ ಅದ್ದೂರಿ "ಕನ್ನಡ ರಾಜ್ಯೋತ್ಸವ" ವನ್ನು ಕೆಂಪೇಗೌಡ ರಸ್ತೆಯಲ್ಲಿರುವ "ಬನ್ನಪ್ಪ ಪಾರ್ಕ್ ಆಟದ ಮೈದಾನ" ದಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತೇವೆಂದು ನವೆಂಬರ್ 1 ರಂದು ನಾಡಿನ ವೈಭವವನ್ನು ಸಾರುವ ಮೆರವಣಿಗೆಯಲ್ಲಿ ಜಾನಪದ ತಂಡಗಳು, ಸ್ತಬ್ಧ ಚಿತ್ರಗಳು, ಕಲಾವಿದರು ಪಾಲ್ಗೊಳ್ಳುವರು, ನವೆಂಬರ್ 1 ರಿಂದ ಸತತವಾಗಿ ಒಂದು ತಿಂಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆಂದು ತಿಳಿಸುತ್ತಾ, ಪ್ರತಿ ವರ್ಷವು ಮಹಾನಗರ ಪಾಲಿಕೆ ಧನ ಸಹಾಯವನ್ನು ನೀಡುತ್ತಿರುವುದು ಸರಿಯಷ್ಟೆ, ಈ ವರ್ಷವು ರಾಜ್ಯೋತ್ಸವ ಕಾರ್ಯಕಲಾಪಗಳಿಗೆ ಮತ್ತು ಕಾರ್ಯಕ್ರಮದ ವ್ಯವಸ್ಥೆಗೆ ಬಹಳ ಖರ್ಚು ವೆಚ್ಚ ತಗುಲುತ್ತಿರುವುದು ಮಹಾನಗರ ಪಾಲಿಕೆ ವತಿಯಿಂದ ರೂ. 20.00 (ಇಪ್ಪತ್ತು ಲಕ್ಷ) ಧನ ಸಹಾಯವನ್ನು ನೀಡಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿಗೆ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪಾಲಿಕೆ ವತಿಯಿಂದ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *09]. ವಿಷಯದ ಸಂಖ್ಯೆ :–ತೆಆಸ್ಥಾಸ/322/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್ಆರ್(4)88/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಶ್ರೀ ಜಯದುರ್ಗಾ ಮತ್ತು ಮಾರಿಯಮ್ಮ ದೇವಸ್ಥಾನ ಟ್ರಸ್ಟ್ (ರಿ), ನಂ. 1/ಎ, ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನ ರಸ್ತೆ, ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಎದುರು, ಬೆಂಗಳೂರು – 560 047 ರವರು ಮನವಿ ಸಲ್ಲಿಸಿ ಶಾಂತಿ ನಗರ ವಿಧಾನ ಸಭಾ ಕ್ಷೇತ್ರ (ಬಿ.ಬಿ.ಎಂ.ಪಿ. ವಾರ್ಡ್ ನಂ.116 ನೀಲಸಂದ್ರ) ವ್ಯಾಪ್ತಿಯಲ್ಲಿ ಬರುವ ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನಕ್ಕೆ ಕಳೆದ ವರ್ಷ ಅನುದಾನ ಮಂಜೂರು ಮಾಡುವಂತೆ ಅಗತ್ಯವಾದ ಮಾಹಿತಿಗಳೊಂದಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅನುದಾನ ಮಂಜೂರಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಸದರಿ ದೇವಸ್ಥಾನದ ಕಟ್ಟಡ ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ರೂ. 27.00 ಲಕ್ಷಗಳಾಗಿದ್ದು, ಹಣಕಾಸಿನ ಕೊರತೆಯಿಂದಾಗಿ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುತ್ತವೆ. ಈ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ಪಂಗಡದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದು (ಕೊಳಚೆ ಪ್ರದೇಶ) ಆರ್ಥಿಕ ಸಹಾಯವಿಲ್ಲದೆ ದೇವಸ್ಥಾನ ಅಭಿವೃದ್ಧಿಗೆ ಅನಾನುಕೂಲ ಉಂಟಾಗಿರುತ್ತದೆ ತಿಳಿಸಿ, ಪಾಲಿಕೆ ವತಿಯಿಂದ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸದರಿ ದೇವಸ್ಥಾನಕ್ಕೆ ರೂ. 10.00 (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಮಂಜೂರು ಮಾಡುವ ಮೂಲಕ ದೇವಸ್ಥಾನದ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

2010–11 ನೇ ಸಾಲಿನಲ್ಲಿ ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಿರಿಸಲಾಗಿದ್ದ ರೂ. 10.00 ಕೋಟಿಗಳು ಹಂಚಿಕೆಯಾಗಿದ್ದರ ಹಿನ್ನೆಲೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 28–03–2011 ರಂದು ನಡೆದ ಸಭೆಯ ನಡವಳಿಗಳು ವಿಷಯದ ಸಂಖ್ಯೆ : ತೆಆಸ್ಥಾಸ/335/2010–11 ರಲ್ಲಿ ಸದರಿ ಸಂಸ್ಥೆಯ ಪ್ರಸ್ತಾವನೆಯನ್ನು ಕೈಬಿಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/325/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)66/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ನಗರದ ವಿವಿಧ ಸಂಘ ಸಂಸ್ಥೆಗಳಿಗೆ (ಗ್ರಾಂಟ್–ಇನ್–ಏಡ್) ಹಣವನ್ನು ಬಿಡುಗಡೆ ಮಾಡುವಾಗ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರದ ಸಂಖ್ಯೆ: ನಅಇ 108 ಎಂಎನ್‌ಯು 03 ದಿನಾಂಕ: 27.05.2003 ರ ಪತ್ರದಲ್ಲಿ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮೋದನೆಯನ್ನು ಪಡೆದ ನಂತರವೇ ಪಾವತಿಸಲು ಹಾಗೂ ಪ್ರತಿ ವರ್ಷ ಒಂದೇ ಸಂಸ್ಥೆಗೆ ಈ ಅನುದಾನ ನೀಡದಂತೆ ಆದೇಶಿಸಿರುತ್ತದೆ. ಸರ್ಕಾರದ ಪತ್ರದ ಸಂಖ್ಯೆ ನಅಇ 108 ಎಂಎನ್‌ಯು 2003 ದಿನಾಂಕ 01.08.2003 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ವಿವಿಧ ಸಂಘ–ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನ ನೀಡುವ ಬಗ್ಗೆ ಯಾವುದೇ ನಿರ್ದಿಷ್ಟವಾದ ಮಾರ್ಗಸೂಚಿಗಳನ್ನು ರಚಿಸಿರುವುದಿಲ್ಲವಾದ ಕಾರಣ ಸಂಘ–ಸಂಸ್ಥೆಗಳಿಗೆ ಸಹಾಯಾನುದಾನ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗಸೂಚಿಗಳನ್ನು ರಚಿಸಿಕೊಂಡು ವಿವಿಧ ಸಂಘ–ಸಂಸ್ಥೆಗಳಿಗೆ ಪಾಲಿಕೆಯ ಹಂತದಲ್ಲಿಯೇ ಈ ಬಾಬ್ತಿಗೆ ಅನುಮೋದಿತ ಆಯವ್ಯಯ ಮಿತಿಯಲ್ಲಿ ಅನುದಾನವನ್ನು ಮಂಜೂರು ಮಾಡಲು ಸೂಚನೆ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ನಗರದ ಯಾವುದೇ ಸಂಘ ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನವನ್ನು ಬಿಡುಗಡೆ ಮಾಡುವಾಗ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಲಾದ ಸಮಸಂಖ್ಯೆಯ ಟಿಪ್ಪಣಿ ದಿನಾಂಕ: 25.11.2003 ರಂತೆ ಟಿಪ್ಪಣಿಯನ್ನು ಮಂಡಿಸಿದ್ದು, ಸದರಿ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಗಳಲ್ಲಿ "ಈಗಾಗಲೇ ಸಹಾಯ ಧನ ಕೋರಿರುವ ಸಂಘ ಸಂಸ್ಥೆಗಳಿಗೆ ಅನುದಾನವನ್ನು ನೀಡುವುದು ಹಾಗೂ ಟಿಪ್ಪಣಿಯಲ್ಲಿ ಮಂಡಿಸಿರುವ ಮಾರ್ಗಸೂಚಿಗಳನ್ನು 2004–05 ನೇ ಸಾಲಿನಿಂದ ಕಡ್ಡಾಯವಾಗಿ ಪಾಲಿಸುವುದು" ಎಂಬುದಾಗಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ.

ಅದರಂತೆ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಎಸಿ(ಎ)ಪಿಆರ್ 1991/03–04 ದಿನಾಂಕ 18.03.2004 ರ ಆಯುಕ್ತರವರ ಕಛೇರಿ ಆದೇಶದಂತೆ ಸಂಘ ಸಂಸ್ಥೆಗಳಿಗೆ ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಲು ನಗರ ಪಾಲಿಕೆಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

1. ಅನುದಾನಕ್ಕಾಗಿ ಅರ್ಜಿ ಸಲ್ಲಿಸುವ ಯಾವುದೇ ಒಂದು ಸಂಘ/ಸಂಸ್ಥೆಯು ನೊಂದಾಯಿತ ಸಂಸ್ಥೆಯಾಗಿರಬೇಕು ಹಾಗೂ ಸದರಿ ಸಾಲಿನ ಅಥವಾ ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿ ಸಲ್ಲಿಸಬೇಕು.
2. ಕನಿಷ್ಠಪಕ್ಷ ಹಿಂದಿನ ಮೂರು ವರ್ಷಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು/ಸಭೆ ಸಮಾರಂಭಗಳು/ಸಾರ್ವಜನಿಕ ಸೇವೆ ಇತ್ಯಾದಿ ನಡೆಸಿರುವ ಬಗ್ಗೆ ದಾಖಲೆ ಸಲ್ಲಿಸಬೇಕು.
3. ಸದರಿ ಸಂಸ್ಥೆಯ ಇರುವಿಕೆಯ ಬಗ್ಗೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ ಅಥವಾ ಆರೋಗ್ಯ ವೈದ್ಯಾಧಿಕಾರಿಗಳ ವತಿಯಿಂದ ಸ್ಥಳೀಯ ಮಹಜರ್ ಮಾಡಿ ವರದಿಯನ್ನು ಸಲ್ಲಿಸತಕ್ಕದ್ದು.
4. ಸದರಿ ಸಂಸ್ಥೆಯು ಈಗಾಗಲೇ ಪಾಲಿಕೆಯ ವತಿಯಿಂದಾಗಲೀ ಅಥವಾ ಮಹಾಪೌರರ ನಿಧಿಯಿಂದಾಗಲೀ ಅನುದಾನ ಪಡೆದಿದ್ದ ಪಕ್ಷದಲ್ಲಿ ಯಾವ ಸಾಲಿನಲ್ಲಿ ಪಡೆದಿತ್ತೆಂಬ ಬಗ್ಗೆ ಮಾಹಿತಿ ಪಡೆಯತಕ್ಕದ್ದು.
5. ಸಂಘ ಸಂಸ್ಥೆಗಳು ಕೋರಿರುವಂತಹ ಕಾರ್ಯಕ್ರಮಗಳಿಗೆ ತಗುಲುವ ವೆಚ್ಚದ ಬಗ್ಗೆ ಅಂದಾಜು ಸಲ್ಲಿಸುವುದು.
6. ಸಂಸ್ಥೆಯು ಸಭೆ–ಸಮಾರಂಭವನ್ನು ಸೂಚಿತ ದಿನದಂದು ಏರ್ಪಡಿಸಿದ್ದ ಬಗ್ಗೆ ವರದಿ.
7. ಅನುದಾನವನ್ನು ಐದು ವರ್ಷಗಳಿಗೊಮ್ಮೆ ಒಂದು ಸಂಘ/ಸಂಸ್ಥೆಗೆ ಅನುದಾನ ನೀಡಲಾಗುವುದು.

8. ಅನುದಾನ ಕೋರುವ ಸಂಘ/ಸಂಸ್ಥೆಗಳ ಕಾರ್ಯಚಟುವಟಿಕೆಗಳು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರಬೇಕು. ಜಾತ್ಯಾತೀತವಾದ, ಧರ್ಮಾತೀತವಾದ ಹಾಗೂ ರಾಜಕೀಯೇತರ ಕಾರ್ಯಕ್ರಮ ವಾಗಿರಬೇಕು.
9. ಮೇಲಿನಂತೆ ಅರ್ಹತೆಗಳಿರುವ ಸಂಘ/ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 5 ಸಾವಿರಗಳಿಂದ 10 ಸಾವಿರ ರೂ. ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ 10 ಸಾವಿರದಿಂದ 25 ಸಾವಿರ ರೂ. ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸಿದೆ.
10. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ/ಆಸ್ಪತ್ರೆಗಳಿಗೆ ಹಾಗೂ ಕ್ರೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ.
11. ಪಾಲಿಕೆಯಿಂದ ಅನುದಾನವನ್ನು ಪಡೆದ ಸಂಸ್ಥೆಯು ಸದರಿ ಅನುದಾನವನ್ನು ನಿಗಧಿತ ಉದ್ದೇಶಗಳಿಗೆ ಸಕ್ರಮವಾಗಿ ಬಳಸಿರುವ ಬಗ್ಗೆ ನಿರ್ದಿಷ್ಠ ನಮೂನೆಯಲ್ಲಿ ಲೆಕ್ಕ ಪತ್ರ ಹಾಗೂ ಪ್ರಮಾಣಪತ್ರಗಳನ್ನು ಒದಗಿಸಲು ಬದ್ಧರಾಗಿರತಕ್ಕದ್ದು.
12. ಪಾಲಿಕೆಯಿಂದ ಅನುದಾನವನ್ನು ಒಂದು ವಿವೇಚನಾತ್ಮಕ ಸಹಾಯವಾಗಿದ್ದು, ಇದರಿಂದ ಯಾವುದೇ ಸಂಸ್ಥೆಯು ಅಂತಹ ಅನುದಾನ ಪಡೆಯುವ ಹಕ್ಕನ್ನು ಸೃಷ್ಠಿಸಿದಂತಾಗುವುದಿಲ್ಲ. ಯಾವುದೇ ಸಂದರ್ಭದಲ್ಲಿ ಪಾಲಿಕೆಯಿಂದ ನೀಡಲಾದ ಅನುದಾನವನ್ನು ತಡೆಹಿಡಿಯುವ ಅಥವಾ ನಿರ್ದಿಷ್ಠ ಉಪಯೋಗಗಳಿಗೆ ನೀಡಲಾದ ಅನುದಾನವನ್ನು ಸಕಾಲದಲ್ಲಿ ಕ್ರಮಬದ್ಧವಾಗಿ ಉಪಯೋಗಿಸದಿರುವ ಸಂದರ್ಭದಲ್ಲಿ ಅಂತಹ ಅನುದಾನವನ್ನು ಪಾಲಿಕೆಯು ಹಿಂದಕ್ಕೆ ಪಡೆಯಬಹುದಾಗಿರುತ್ತದೆ.
13. ಅನುದಾನ ಕೋರುವ ಸಂಘ/ಸಂಸ್ಥೆಯು ಏಕಮಾತ್ರ ಸದಸ್ಯರನ್ನೊಳಗೊಂಡ ಸಂಸ್ಥೆಯಾಗಿರಬಾರದು.
14. ಪಾಲಿಕೆಯಿಂದ ಅನುದಾನ ಬಿಡುಗಡೆ ಮಾಡುವ ಮುನ್ನ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ನಿರ್ಣಯದಂತೆ ಬಿಡುಗಡೆ ಮಾಡಬಹುದಾಗಿದೆ.

ಮುಂದುವರೆದಂತೆ, 2010–11 ನೇ ಸಾಲಿನಲ್ಲಿ ಕೊಡುಗೆ ಮತ್ತು ಸಹಾಯಾನುಧಾನ ಲೆಕ್ಕ ಶೀರ್ಷಿಕೆಯಡಿ ಪಾಲಿಕೆ ಸಭೆಯ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಒಟ್ಟು 170 ಸಂಘ/ಸಂಸ್ಥೆಗಳು ಹಾಗೂ ವೈಯಕ್ತಿಕವಾಗಿ ಕ್ರೀಡಾಪಟುಗಳಿಗೆ ಸಹಾಯಧನ/ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. **ಈ ಮಂಜೂರಾತಿಗಳು ಮೇಲ್ಕಂಡ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿದಂತಾಗುತ್ತದೆ.**

**2010–11ನೇ ಆರ್ಥಿಕ ವರ್ಷದಲ್ಲಿ ಸಹಾಯಧನ/ಅನುದಾನ ಪಡೆದುಕೊಂಡಂತಹ ಸಂಘ ಸಂಸ್ಥೆಗಳು ಮತ್ತು ಕ್ರೀಡಾಪಟುಗಳು ಅನುದಾನ/ಸಹಾಯಧನ ಕೋರಿ ಪ್ರಸಕ್ತ ಸಾಲಿನಲ್ಲಿಯೂ ಸಹ ಮನವಿಯನ್ನು ಸಲ್ಲಿಸಿರುತ್ತಾರೆ**

ಹಾಲಿ ಅಳವಡಿಸಿಕೊಂಡಿರುವ ಮಾರ್ಗಸೂಚಿಗಳಲ್ಲಿ ಕ್ರೀಡಾಪಟುಗಳು ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದಂತವರಿಗೆ ವ್ಯಕ್ತಿಗತವಾಗಿ ಅನುದಾನ/ಸಹಾಯಧನ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಪ್ರಸಕ್ತ ಸಾಲಿನಲ್ಲಿಯೂ ಸಹ ಇದೇ ರೀತಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಿದಲ್ಲಿ, ಲೆಕ್ಕ ಪರಿಶೋಧನ ಕೈಗೊಂಡ ಸಂದರ್ಭದಲ್ಲಿ ಅಧಿಕಾರಿ ವರ್ಗದವರು ಸಮಸ್ಯೆಗೆ ಒಳಗಾಗುವುದರ ಜೊತೆಗೆ ಸಾರ್ವಜನಿಕ ಚರ್ಚೆಗೆ ಗ್ರಾಸ ಮಾಡಿ ಕೊಟ್ಟಂತಾಗುತ್ತದೆ.

ಆದ್ದರಿಂದ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಕಟ್ಟುನಿಟ್ಟಾಗಿ ಮಾರ್ಗಸೂಚಿಗಳ ಅನ್ವಯವೇ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ, ಅಥವಾ ಮೇಲ್ಕಂಡ ಹಿನ್ನೆಲೆಯಲ್ಲಿ ಸಂಘ–ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗತವಾಗಿ (ಕ್ರೀಡಾಪಟು, ನೃತ್ಯ ಕಲಾವಿದರು, ರಂಗಭೂಮಿ ಕಲಾವಿದರು, ವಿದ್ಯಾಭ್ಯಾಸ, ಇನ್ನಿತರೇ) ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಲು ಮಾರ್ಗ ಸೂಚಿಗಳನ್ನು ಮಾರ್ಪಡಿಸಬೇಕಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಹಾಗೂ ಪಾಲಿಕೆ ಸಭೆಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 10–10–2011ರ ಆಯುಕ್ತರ ಟಿಪ್ಪಣಿಯಲ್ಲಿನ ಮಾರ್ಗಸೂಚಿಗಳ ಬಗ್ಗೆ ಆಯವ್ಯಯ ಮಂಡನೆಗೆ ಮೊದಲೇ ಸಮಿತಿಯ ಗಮನಕ್ಕೆ ಬಾರದೇ ಇರುವ ಕಾರಣ 2012–13ನೇ ಸಾಲಿನಿಂದ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದೆಂದು ಹಾಗೂ ಅಲ್ಲಿಯವರೆವಿಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ಅನುಷ್ಠಾನಗೊಳಿಸುವುದೆಂದು ತೀರ್ಮಾನಿಸಲಾಯಿತು.***

## *11]. ವಿಷಯದ ಸಂಖ್ಯೆ :-ತೆಆಸ್ಥಾಸ/331/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)60/2011-12, ದಿನಾಂಕ : 07-10-2011ರಲ್ಲಿ ವಿವರಿಸಿರುವಂತೆ, ಮಾನ್ಯ ಉಪಮಹಾಪೌರರು ಟಿಪ್ಪಣಿ ಬರೆದು ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು, ಬೆಂಗಳೂರು – 560 001. ಇವರು ನೀಡಿರುವ ಬೀದಿ ದೀಪದ ಬಗ್ಗೆ ಸಂಶೋಧನಾ ವರದಿ ಮತ್ತು ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ಸಂಶೋಧನೆಯನ್ನು ನಡೆಸುತ್ತಿದ್ದು, ಇದಕ್ಕೆ ಆರ್ಥಿಕ ಸಹಾಯವನ್ನು ಕೇಳಿರುತ್ತಾರೆಂದು ತಿಳಿಸುತ್ತಾ, ಇದನ್ನು ಮಹಾನಗರ ಪಾಲಿಕೆ ವತಿಯಿಂದ ನೀಡಲು ಸಾಧ್ಯವಿದ್ದಲ್ಲಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು ರವರು ಉಪ ಮಹಾಪೌರರಿಗೆ ಮನವಿ ಸಲ್ಲಿಸಿ, ತಾನು 10 ವರ್ಷಗಳಿಂದ ಬೆಂಗಳೂರು ನಗರ ಪರಿಸರ ವಿಜ್ಞಾನದ ಅಧ್ಯಯನ ಮಾಡಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದು ಈಗ ತನ್ನ ಮಾರ್ಗದರ್ಶನದಲ್ಲಿ ಶ್ರೀಮತಿ ಪೂರ್ಣಿಮ ಡಿ.ಎಸ್. ಹಾಗೂ ಶ್ರೀಮತಿ ಬಿ. ನೇತ್ರಾವತಿ ಇವರುಗಳು ಬೆಂಗಳೂರು ನಗರದ ಸೌರಶಕ್ತಿ ಬೀದಿ ದೀಪಗಳ ಕುರಿತು ಅಧ್ಯಯನ ಸಂಶೋಧನೆ ಮಾಡುತ್ತಿದ್ದು, ರಾಯಲಸೀಮಾ ವಿಶ್ವವಿದ್ಯಾನಿಲಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸೌರಶಕ್ತಿ ಬೀದಿ ದೀಪಗಳ ಬಗ್ಗೆ ಪಿ.ಹೆಚ್.ಡಿ. ಪದವಿಗೆ ನೊಂದಾಯಿಸಿದ್ದು ಎರಡು ವರ್ಷಗಳಿಂದ ಇದರ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸೌರಶಕ್ತಿ ಬೀದಿ ದೀಪಗಳ ಕುರಿತು ಸಂಶೋಧನ ಅಧ್ಯಯನ ನಡೆಸಲು ರೂ. 5.00 (ಐದು ಲಕ್ಷ ರೂಪಾಯಿಗಳು) ಅನುದಾನವನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ, ಅಧ್ಯಯನ ಪೀಠಗಳಿಗೆ ಅನುದಾನ ನೀಡಲು ನಿರ್ದೇಶನವಿರುತ್ತದೆ. **ಸಂಶೋಧನ ಅಧ್ಯಯನಕ್ಕೆ ಅನುದಾನ ನೀಡುವ ಕುರಿತು ಯಾವುದೇ ನಿರ್ದೇಶನವಿರುವುದಿಲ್ಲ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *12]. ವಿಷಯದ ಸಂಖ್ಯೆ :-ತೆಆಸ್ಥಾಸ/334/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)84/2011-12, ದಿನಾಂಕ : 13-10-2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಚಂದ್ರ, ಸದಸ್ಯರು ವಾರ್ಡ್ ಸಂಖ್ಯೆ 62, ರಾಮಸ್ವಾಮಿಪಾಳ್ಯ, ಹಾಗೂ ಶ್ರೀ ಬಾಬು, ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್ ದಂಡು ಪ್ರದೇಶ ರವರುಗಳ ಪತ್ರಗಳನ್ನು ಇದರೊಂದಿಗೆ ಲಗತ್ತಿಸುತ್ತಾ, ಮುನಿರೆಡ್ಡಿ ಪಾಳ್ಯದ ಪೌರಕಾರ್ಮಿಕರು ವಾಸವಾಗಿರುವ ಪ್ರದೇಶದಲ್ಲಿ ಗಂಗಮ್ಮ ದೇವಸ್ಥಾನವಿದ್ದು, ದೇವಸ್ಥಾನದ ವತಿಯಿಂದ ಸುಮಾರು 30 ವರ್ಷಗಳಿಂದ ದಸರಾ ಮಹೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವು ದಸರಾ ಮಹೋತ್ಸವವನ್ನು ಆಚರಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಸುಮಾರು 10.00 ಲಕ್ಷಗಳವರೆಗೆ ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ. 6.00 ಲಕ್ಷಗಳ ಅನುದಾನವನ್ನು ಒದಗಿಸುವಂತೆ ಕೋರಿರುತ್ತಾರೆ. ಈ ಸಂಬಂಧ ರೂ. 4.00 ಲಕ್ಷಗಳ ಅನುದಾನವನ್ನು ಮೇಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ಪೂಜ್ಯ ಮಹಾಪೌರರ ಟಿಪ್ಪಣಿಯೊಂದಿಗೆ ಮಾನ್ಯ ನಗರ ಪಾಲಿಕೆ ಸದಸ್ಯರ ಪತ್ರ ಹಾಗೂ ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಶನ್ ದಂಡು ಪ್ರದೇಶ ರವರ ಪತ್ರಗಳು ಮತ್ತು ಕಾರ್ಯಕ್ರಮಗಳ ವಿವರಗಳ ಪಟ್ಟಿ ಮಾತ್ರ ಲಗತ್ತಾಗಿರುತ್ತದೆ.

ಕಳೆದ ಸಾಲಿನ ದಸರಾ ಮಹೋತ್ಸವ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ಸದರಿ ಪಾಲಿಕೆ ಸದಸ್ಯರ ಹೆಸರಿಗೆ (2010-11 ನೇ ಸಾಲಿಗೆ) **ರೂ. 2.00 ಲಕ್ಷಗಳ** ಅನುದಾನ/ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ. ಪ್ರಸಕ್ತ 2011–12ನೇ ಸಾಲಿನ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ಆಗಿರುವುದಿಲ್ಲ.
ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## ***13]. ವಿಷಯದ ಸಂಖ್ಯೆ :–ತೆಆಸ್ಥಾಸ/337/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಅ(ಕ)ಪಿಎಸ್‌ಆರ್(4)56/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಯಮುನಾ ಗೋಪಿನಾಥ್, ಗೌರವ ಕಾರ್ಯದರ್ಶಿ, ಕಿಂಕಿಣಿ, 308, 10ನೇ ಮುಖ್ಯರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011. ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆ ನಡೆಸುವ ರಾಷ್ಟ್ರ ಮಟ್ಟದ ವಾರ್ಷಿಕ ನೃತ್ಯೋತ್ಸವ ರಾಜ್ಯದ/ರಾಷ್ಟ್ರದ ಪ್ರತಿಷ್ಠಿತ ಸಾಂಸ್ಕೃತಿ ಘಟನೆಗಳಲ್ಲೊಂದಾಗಿದ್ದು, ಈ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದ 28ನೇ ಕಿಂಕಿಣಿ ನೃತ್ಯೋತ್ಸವವನ್ನು ಜನವರಿ 2012 ರಲ್ಲಿ ಆಯೋಜಿಸಲಾಗಿದ್ದು, ಬೆಂಗಳೂರು ಮಹಾನಗರದಲ್ಲಿ ನಡೆಸುತ್ತಾ ಬಂದಿರುವ ಈ ವಾರ್ಷಿಕ ನೃತ್ಯೋತ್ಸವಕ್ಕೆ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಾರ್ಷಿಕವಾಗಿ ಹಲವಾರು ವರ್ಷಗಳಿಂದ ಅನುದಾನ ನೀಡುತ್ತಾ ಬಂದಿದ್ದು, ಈ ಉತ್ಸವ ಸತತವಾಗಿ 28 ವರ್ಷಗಳಿಂದ ನಡೆಸುತ್ತಾ ಬಂದಿರುವುದಾಗಿ ತಿಳಿಸಿರುತ್ತಾರೆ. 28ನೆಯ ಕಿಂಕಿಣಿ ನೃತ್ಯೋತ್ಸವನ್ನು 2012 ರ ಜನವರಿ ತಿಂಗಳಿನಲ್ಲಿ 14 ಕಾರ್ಯಕ್ರಮಗಳನ್ನೊಳಗೊಂಡ 7 ದಿನಗಳ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, ಈ ಉತ್ಸವದ ಅಂದಾಜು ವೆಚ್ಚ ಸುಮಾರು ರೂ. 9.00 ಲಕ್ಷಕ್ಕಿಂತ ಅಧಿಕವಾಗಿರುವುದಾಗಿ ತಿಳಿಸಿ ಪಾಲಿಕೆ ಕಳೆದ ವರ್ಷದ 27ನೇ ಕಿಂಕಿಣಿ ನೃತ್ಯೋತ್ಸವಕ್ಕೆ ರೂ. 20,000/– ಅನುದಾನ ನೀಡಿದ್ದು, ಉತ್ಸವವನ್ನು ವಿಜೃಂಭಣೆಯಿಂದ ನಡೆಸಲು ಅನುವಾಗಿರುವುದಾಗಿ ತಿಳಿಸಿ, ವರ್ಷೇ ವರ್ಷೇ ಹೆಚ್ಚಾಗಿರುವ ವೆಚ್ಚ ಗಮನಿಸಿ ಜನವರಿ 2012 ರಲ್ಲಿ ಬೆಂಗಳೂರು ನಗರದಲ್ಲಿ ನಡೆಸುವ 28ನೇ ಕಿಂಕಿಣಿ ನೃತ್ಯೋತ್ಸವಕ್ಕೆ ರೂ. 50,000/– ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ **2010–11** ನೇ ಸಾಲಿಗೆ **ರೂ. 20,000/– ಗಳ** ಅನುದಾನ / ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ:354:ಎಂಎನ್‌ವೈ:96 ದಿನಾಂಕ 14–10–1996 ರಲ್ಲಿ ಸದರಿ ಸಂಸ್ಥೆಗೆ ಪಾಲಿಕೆ ವತಿಯಿಂದ ವಾರ್ಷಿಕ ರೂ. 10,000/– ಗಳ ವಾರ್ಷಿಕ ಅನುದಾನ ಮಂಜೂರು ಮಾಡಲು ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 07–10–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಿಂಕಿಣಿ ನೃತ್ಯೋತ್ಸವ ಸಂಸ್ಥೆಗೆ ರೂ.50,000/– (ಐವತ್ತು ಸಾವಿರ) ಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## ***14]. ವಿಷಯದ ಸಂಖ್ಯೆ :–ತೆಆಸ್ಥಾಸ/348/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಅ(ಕ)ಪಿಎಸ್‌ಆರ್(4)76/2011–12, ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಶಶಿಕಲಾ ಕೃಷ್ಣೇಗೌಡ, ಸದಸ್ಯರು ವಾರ್ಡ್ ನಂ. 66 (ಸುಬ್ರಮಣ್ಯ ನಗರ) ರವರು ಪತ್ರ ಬರೆದು ತನ್ನ ವಾರ್ಡ್ ನಂ. 66, ಸುಬ್ರಮಣ್ಯ ನಗರದಲ್ಲಿ ದೀಪಾ ಅಕಾಡೆಮಿ ಫಾರ್ ದಿ ಡಿಫರೆಂಟ್ಲಿ ಎಬಲ್ಡ್ ಸಂಸ್ಥೆ (ದೀಪ ಅಂಧ ಮಕ್ಕಳ ಪ್ರೌಢಶಾಲೆ), ನಂ. 226/ಎ/3, ಟ್ಯಾಂಕ್ ಬಂಡ್ ರಸ್ತೆ, ಸುಬ್ರಮಣ್ಯ ನಗರ, ಬೆಂಗಳೂರು – 560 021. ರವರ ಮನವಿ ಮತ್ತು ದಾಖಲೆಗಳನ್ನು

ಸಲ್ಲಿಸಿ, ಸದರಿ ಸಂಸ್ಥೆಯು ಅಂಥ ಮಕ್ಕಳ ವಿದ್ಯಾಭ್ಯಾಸಕ್ಕೆ ಉಚಿತವಾಗಿ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡುತ್ತಿದೆ. ಆದ್ದರಿಂದ ಈ ಸಂಸ್ಥೆಗೆ ಬಿ.ಬಿ.ಎಂ.ಪಿ. ಕಲ್ಯಾಣ ನಿಧಿಯಿಂದ ಧನ ಸಹಾಯವನ್ನು ನೀಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :- ದಿನಾಂಕ : 27-10-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.1,00,000/- (ಒಂದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *15]. ವಿಷಯದ ಸಂಖ್ಯೆ :-ತೆಆಸ್ಥಾಸ/349/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)95/2011-12, ದಿನಾಂಕ : 27-10-2011ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ಆರ್. ಪಾರ್ಥಸಾರಥಿ, ಕಾರ್ಯದರ್ಶಿ, ಕರ್ನಾಟಕ ರಾಜ್ಯೋತ್ಸವ ಸಮಿತಿ, ನೃಪತುಂಗ ಮಂಟಪ, ನಂ. 229, 4ನೇ ಮುಖ್ಯರಸ್ತೆ, ಎಸ್.ಬಿ.ಎಂ. ಬ್ಯಾಂಕ್ ಎದುರು, ಚಾಮರಾಜಪೇಟೆ, ಬೆಂಗಳೂರು – 560 018 ರವರು ಮನವಿ ಸಲ್ಲಿಸಿ, ಪ್ರತಿ ವರ್ಷದಂತೆ ಈ ವರ್ಷವೂ "ಕರ್ನಾಟಕ ರಾಜ್ಯೋತ್ಸವ"ವನ್ನು ನವೆಂಬರ್ 1 ರಂದು ಮೈಸೂರು ಬ್ಯಾಂಕ್ ಹತ್ತಿರ ಇರುವ ನೃಪತುಂಗ ಮಂಟಪದಲ್ಲಿ ಆಚರಿಸುತ್ತಿದ್ದು, ಪ್ರತೀ ವರ್ಷವೂ ಕರ್ನಾಟಕ ರಾಜ್ಯೋತ್ಸವಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಾಯಧನವನ್ನಾಗಿ ನೀಡುತ್ತಿದ್ದೀರೆಂದು ಕಳೆದ ವರ್ಷವೂ ಸೇರಿದಂತೆ, ಈ ವರ್ಷವೂ ಕರ್ನಾಟಕ ರಾಜ್ಯೋತ್ಸವವನ್ನು ವೈಭವವಾಗಿ ಆಚರಿಸುವುದರಿಂದ ಪಾಲಿಕೆಯಿಂದ ರೂ. 25.00 ಲಕ್ಷಗಳನ್ನು ಸಹಾಯ ಧನವಾಗಿ ನೀಡಬೇಕಾಗಿ ಕೋರಿರುತ್ತಾರೆ.

ಸದರಿಯವರಿಗೆ 2008-09 ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***-ಮುಂದೂಡಿದೆ-***

## *16]. ವಿಷಯದ ಸಂಖ್ಯೆ :-ತೆಆಸ್ಥಾಸ/351/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 27-10-2011ರಲ್ಲಿ ವಿವರಿಸಿರುವಂತೆ, ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.109.00 ಲಕ್ಷಗಳಿಗೆ ಮಾನ್ಯ ಆಯುಕ್ತರವರ ಕಂಡಿಕೆ (25). ಕಮಿಷನರ್ ಆರ್ಡರ್ ನಂ. PSR(G)/4231/10-11, Dt : 11-10-2010. ರಲ್ಲಿ ಮಂಜೂರು ನೀಡಿದ್ದು, ಸದರಿ ಕಾಮಗಾರಿ ಸಂಕೇತ 095-11-N-J-N-D-FO-001. ಅನ್ನು ನೀಡಿರುತ್ತಾರೆ.

ಮುಂದುವರೆದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ದಿನಾಂಕ : 27–09–2011 ರಂದು ಮಾನ್ಯ ಆಯುಕ್ತರವರನ್ನು ಈ ಕೆಲಸವನ್ನು ಜರೂರಾಗಿ ತೆಗೆದುಕೊಳ್ಳಲು ಕೋರಿರುತ್ತಾರೆ. ಈ ಪತ್ರದ ಮೇಲೆ ಮಾನ್ಯ ಆಯುಕ್ತರು ಸದಸ್ಯರ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುತ್ತಾರೆ. ಶ್ರೀ.ಚಂದ್ರಶೇಖರ್ ಸೋಪನಹಳ್ಳಿರವರು ಅಂದಾಜು ಪಟ್ಟಿಗಿಂತ ಶೇ.7.00% ರಷ್ಟು ಕಡಿಮೆ ನಮೂದಿಸಿದ್ದು, ಉಳಿದವರಿಗಿಂತ ಕಡಿಮೆ ಬಿಡ್‌ದಾರರಾಗಿರುತ್ತಾರೆ. ಈ ಕಾಮಗಾರಿಯು ತುಂಬಾ ಅತಿಅವಶ್ಯಕವಾಗಿರುತ್ತದೆ, ಮೇಲಿಂದ ಹರಿದು ಬರುವ ಕೊಳಚೆ ನೀರು ತೆರೆದ ಪ್ರದೇಶದಲ್ಲಿ ಹರಿಯುವುದನ್ನು ತಡೆಯಲು ಆರ್.ಸಿ.ಸಿ ಕಟ್ಟಡವನ್ನು ಹೊಸದಾಗಿ ನಿರ್ಮಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ. ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಲಾಗಿರುತ್ತದೆ. ಎರಡು ಇಕ್ಕೆಲೆಗಳಲ್ಲೂ ಆಸರೆ ಗೋಡೆಯು ಕಲ್ಲು ಕಟ್ಟಡದಿಂದ ಕೂಡಿರುತ್ತದೆ. ಸದರಿ ಕಟ್ಟಡ ತುಂಬಾ ಹಳೆಯದಾಗಿದ್ದು ಶಿಥಿಲಾಗಿರುತ್ತದೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ತಾಂತ್ರಿಕ ಮಂಜೂರಾತಿ ಸಂಖ್ಯೆ : CE/SWD/TS/15/2010-11, dt:25-11-2010. ಹಾಗೂ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ : CE/SWD/ADMN/15/2010-11, dt:25-11-2010. ಅನುಮೋದನೆ ದೊರೆತಿರುತ್ತದೆ. ಮುಂದುವರೆದಂತೆ ಸದರಿ ಕಾಮಗಾರಿಗೆ ರೂ.109.00 ಲಕ್ಷಗಳಿಗೆ ಸೂಕ್ತ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿದೆ.

***ನಿರ್ಣಯ :– ದಿನಾಂಕ : 27–10–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *17]. ವಿಷಯದ ಸಂಖ್ಯೆ :–ತೆಆಸ್ಥಾಸ/353/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್‌ಆರ್(4)101/2011–12, ದಿನಾಂಕ ಃ 02–11–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಭಾರತ ವಿಕಾಸ ಪರಿಷದ್, ನಂ. 172, ಕವಿ ಲಕ್ಷ್ಮೀಶ ರಸ್ತೆ, ವಿ.ವಿ.ಪುರಂ, ಬೆಂಗಳೂರು – 4 ರವರು ಸಲ್ಲಿಸಿರುವ ಮನವಿಯನ್ನು ಲಗತ್ತಿಸುತ್ತಾ, ಸದರಿ ಸಂಘವು ಸಾಮಾಜಿಕ, ಸಾಂಸ್ಕೃತಿಕ ಸೇವಾ ಸಂಸ್ಥೆಯಾಗಿದ್ದು, ಜನರಲ್ಲಿ ದೇಶ ಪ್ರೇಮ, ಭಾರತೀಯತೆ ಮತ್ತು ಸ್ವಾಭಿಮಾನವನ್ನು ಉದ್ದೀಪಿಸುವುದು ಹಾಗೂ ರಾಷ್ಟ್ರೀಯ ಸಮೂಹ ಗಾಯನ, ರಸಪ್ರಶ್ನೆ ಕಾರ್ಯಕ್ರಮ, ಗುರುವಂದನಾ ಛಾತ್ರಾ, ವಿಕಾಲಾಂಗಿಗೆ ಸಹಾಯ ಹಾಗೂ ಪುನರ್ ವಸತಿ ಯೋಜನೆ, ಗ್ರಾಮ ವಿಕಾಸ ಯೋಜನೆ, ಉಚಿತ ಕಣ್ಣಿನ ತಪಾಸಣೆ/ಚಿಕಿತ್ಸಾ ಶಿಬಿರ ಇತ್ಯಾದಿಗಳನ್ನು ನಡೆಸಿಕೊಂಡು ಬರುತ್ತಿದ್ದು, ಸುಮಾರು 25 ವರ್ಷಗಳನ್ನು ಕಳೆದಿದ್ದು ರಜತ ಮಹೋತ್ಸವ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಿದ್ದು ಇದಕ್ಕೆ ಲಕ್ಷಾಂತರ ರೂಪಾಯಿಗಳ ವೆಚ್ಚವಾಗಲಿದ್ದು, ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಧನ ಸಹಾಯ ಕೋರಿರುತ್ತಾರೆಂದು ತಿಳಿಸಿ, ಸದರಿ ಭಾರತ ವಿಕಾಸ ಪರಿಷದ್ ಕರ್ನಾಟಕ ಇದಕ್ಕೆ ಧನ ಸಹಾಯ ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ**, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## *18]. ವಿಷಯದ ಸಂಖ್ಯೆ :–ತೆಆಸ್ಥಾಸ/370/2011–12*

ಆಯುಕ್ತರ ಟಿಪ್ಪಣಿ ದಿನಾಂಕ ಃ 05–11–2011ರಲ್ಲಿ ವಿವರಿಸಿರುವಂತೆ, Improvement to Roads and Drains in Swathntra nagara of K.R.Pura Sub div.in 47 (Est. Rs.100.00 lakhs). 2009–10ನೇ ಸಾಲಿನಲ್ಲಿ ಶೇ.22.75

ಅನುದಾನದಡಿ ನೀಡಲಾಗುತ್ತಿದ್ದ 047-10-N-W-E-R-IM-001. ಕಾಮಗಾರಿ ಸಂಕೇತವನ್ನು ರದ್ದುಪಡಿಸಿ 2010–11ನೇ ಸಾಲಿನಲ್ಲಿ 3 ಬದಲಿ ಕಾಮಗಾರಿಗಳನ್ನು ಕೈಗೊಳ್ಳುವುದರ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ಸಮಿತಿಯು ವಿಷಯದ ಸಂಖ್ಯೆ 258/2010–11 ದಿನಾಂಕ 14–03–2011 ರ ನಡವಳಿಯಲ್ಲಿ 2009–10ರ ಹಳೆ ಕಾಮಗಾರಿಯನ್ನು ನಿರ್ವಹಿಸಲು ತೀರ್ಮಾನಿಸಿದೆ.

ಪ್ರಸ್ತುತ ಶ್ರೀಮತಿ.ಕೆ.ಪೂರ್ಣಿಮ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 53 ಇವರು ಪತ್ರ ನೀಡಿ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮರು ಮಂಡಿಸಲು ಕೋರಿರುತ್ತಾರೆ.

ಸದರಿ ಪ್ರಸ್ತವನೆಯನ್ನು 2011–12ನೇ ಸಾಲಿನ ಕರಡು ಆಯವ್ಯಯದ ಪುಟ ಸಂಖ್ಯೆ (171) ರಲ್ಲಿ ಪಿ1878 "ಶೇ.22.75% ಕಾಮಗಾರಿಗಳು ಪಿ1878" ಲೆಕ್ಕಶೀಷಿಕೆಯಡಿ ಮುಂದುವರೆದ ಕಾಮಗಾರಿಗಳು ಅಡಿ ಮೀಸಲಿರಿಸಿರುವ ರೂ.15030.00 ಲಕ್ಷಗಳಲ್ಲಿ 3 ಬದಲಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.100.00 ಲಕ್ಷಗಳಿಗೆ ಅನುಮೋದನೆ ಹಾಗೂ ಜಾಬ್ ನಂಬರ್ ನೀಡುವ ಬಗ್ಗೆ ಮರು ಪರಿಶೀಲಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

| Sl No | Name of Work | Est. Amount |
|---|---|---|
| 1 | Construction of CC Drain & Road at Chikkadevasandra in Basavanapura in W.N.53. | Rs.50.00 lakhs |
| 2 | Construction of CC Drain & Road at Rajivnagar in Basavanapura in W.N.53. | Rs.25.00 lakhs |
| 3 | Construction of CC Drain & Road at Priyankanagra in Basavanapura in W.N.53. | Rs.50.00 lakhs |

***–ಮುಂದೂಡಿದೆ–***

## ***19]. ವಿಷಯದ ಸಂಖ್ಯೆ :–ತೆಆಸ್ಥಾಸ/373/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)98/2011–12, ದಿನಾಂಕ 05–11–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಎ. ಎಚ್. ಬಸವರಾಜು, ವಾರ್ಡ್ ನಂ. 180 ರ ನಗರ ಪಾಲಿಕೆ ಸದಸ್ಯರು ಹಾಗೂ ಅಧ್ಯಕ್ಷರು ಶ್ರೀ ಬನಶಂಕರಿ ದೇವಸ್ಥಾನ ಅಭಿವೃದ್ಧಿ ಸಮಿತಿ ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ನಂ. 294, ಶ್ರೀ ಬನಶಂಕರಿ ನಿಲಯ, 7ನೇ ಮುಖ್ಯ ರಸ್ತೆ, ಭವಾನಿ ನಗರ, ಬನಶಂಕರಿ 2ನೇ ಹಂತ, ಬೆಂಗಳೂರು – 560 070. ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ಶ್ರೀ ಬನಶಂಕರಿ ದೇವಸ್ಥಾನದ ಆವರಣದಲ್ಲಿ 12 ವರ್ಷಗಳಿಂದ ಉಚಿತ ಸಾಮೂಹಿಕ ವಿವಾಹವನ್ನು ನಡೆಸುತ್ತಾ ಬರುತ್ತಿದ್ದು, ದಿನಾಂಕ : 02–02–2012 ರಂದು 13ನೇ ವರ್ಷದ ಉಚಿತ ಸಾಮೂಹಿಕ ವಿವಾಹವನ್ನು ನಡೆಸಲಿದ್ದು, ವಿವಾಹ ಸಮಯದಲ್ಲಿ ವಧು–ವರರಿಗೆ ಮಾಂಗಲ್ಯ, ಬಟ್ಟೆ, ಊಟದ ವ್ಯವಸ್ಥೆ ಇತ್ಯಾದಿಗಳನ್ನು ಸಂಬಂಧಪಟ್ಟ ವೇದಿಕೆ ಭರಿಸಲಿದ್ದು, ಇದಕ್ಕೆ ಸುಮಾರು ರೂ. 15.00 ಲಕ್ಷಗಳ ವೆಚ್ಚವಾಗಲಿದ್ದು, ಈ ಕಾರ್ಯಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2011–12 ನೇ ಸಾಲಿನ ಆಯವ್ಯಯದ ಸಂಘ ಸಂಸ್ಥೆಗೆ ನೀಡುವ ಅನುದಾನದಲ್ಲಿ ರೂ. 10.00 ಲಕ್ಷಗಳನ್ನು ಧನ ಸಹಾಯ ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ಧನ ಸಹಾಯ ಮಂಜೂರಾತಿ ಬಗ್ಗೆ ಸೂಕ್ತ ಪ್ರಸ್ತಾವನೆ ಮಂಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 05–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.5,00,000/– (ಐದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *20]. ವಿಷಯದ ಸಂಖ್ಯೆ :–ತೆಆಸ್ಥಾಸ/376/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)103/2011–12, ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಮಂಜುನಾಥ್ ರಾಜು, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮನವಿ ಸಲ್ಲಿಸಿ, ಮಾನ್ಯ ಉಪ ಮಹಾಪೌರರ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ಶ್ರೀಮತಿ ರೂಪಾ ಐಯ್ಯರ್, ವ್ಯವಸ್ಥಾಪಕರ ನಿರ್ದೇಶಕರು, ಇಂಡಿಯಾ ಕ್ಲಾಸಿಕ್ ಆರ್ಟ್ಸ್, ನಂ. 11, 1ನೇ ಕ್ರಾಸ್, 7ನೇ ಮುಖ್ಯರಸ್ತೆ, 7ನೇ ಬ್ಲಾಕ್, 4ನೇ ಹಂತ, ಬನಶಂಕರಿ 3ನೇ ಹಂತ, ಬೆಂಗಳೂರು – 560085. ವತಿಯಿಂದ ಯೂರೋಪ್ ದೇಶದಲ್ಲಿ ಪ್ರಪ್ರಥವಾಗಿ ವಿಶ್ವ ಕನ್ನಡ ಸಮ್ಮೇಳನ ಯೂರೋಪ್ 2011 ಎಂಬ ಕಾರ್ಯಕ್ರಮವನ್ನು 2011 ಅಕ್ಟೋಬರ್ 22 ಮತ್ತು 23 ರಂದು ನಡೆಸಲು ಉದ್ದೇಶಿಸಿರುವ ಮೇರೆಗೆ ಸದರಿ ಕನ್ನಡ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರು. 10.00 ಲಕ್ಷ ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, ಇಂಡಿಯಾ ಕ್ಲಾಸಿಕ್ ಆರ್ಟ್ಸ್ ರವರಿಗೆ ತುರ್ತಾಗಿ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 5.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸಮಿತಿಯ ಮುಂದೆ ಸೂಕ್ತ ಟಿಪ್ಪಣಿಯನ್ನು ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

*–ಮುಂದೂಡಿದೆ–*

## *21]. ವಿಷಯದ ಸಂಖ್ಯೆ :–ತೆಆಸ್ಥಾಸ/378/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)105/2011–12, ದಿನಾಂಕ : 08–11–2011ರಲ್ಲಿ ವಿವರಿಸಿರುವಂತೆ, ಶ್ರೀ ಜನಾರ್ಧನ್ ರಾಜೇ ಅರಸ್, ಕಾರ್ಯದರ್ಶಿ ಸಹನಾ ಅಂಗವಿಕಲರ ಸೇವಾ ಪ್ರತಿಷ್ಠಾನ (ರಿ), ನಂ. 278, 4ನೇ 'ಬಿ' ಕ್ರಾಸ್, 10ನೇ ಮುಖ್ಯರಸ್ತೆ, ಹಂಪಿನಗರ (ಆರ್.ಪಿ.ಸಿ. ಲೇಔಟ್) ವಿಜಯನಗರ, 2ನೇ ಹಂತ, ಬೆಂಗಳೂರು – 560 104. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕಳೆದ ಸಾಲಿನಲ್ಲಿ ತಮ್ಮ ಸಂಸ್ಥೆಗೆ ಧನ ಸಹಾಯ ನೀಡಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ನೆರವು ನೀಡಿ ಸಹಕರಿಸಿದ್ದಕ್ಕಾಗಿ ಪಾಲಿಕೆಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಸಹನಾ ಅಂಗವಿಕಲರ ಸೇವಾ ಪ್ರತಿಷ್ಠಾನವು ಎಲ್ಲಾ ರೀತಿಯ ಅಂಗವಿಕಲರಿಗೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಪುನಶ್ಚೇತನ ಇತ್ಯಾದಿ ಕ್ಷೇತ್ರಗಳಲ್ಲಿ ಶ್ರಮಿಸುತ್ತಾ ಬಂದಿದೆ. ಅಂಧರಿಗೆ ಬ್ರೈಲ್ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಪೂರ್ವ, ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಅಂಧ ವಿದ್ಯಾರ್ಥಿ ವೃಂಧದವರಿಗೆ ಉಚಿತವಾಗಿ ಬ್ರೈಲ್ ಪಠ್ಯ ಪುಸ್ತಕವನ್ನು ಒದಗಿಸುತ್ತಿದೆ ಎಂದು ಕಾಲೇಜು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಉಚಿತ ವಸತಿ ನಿಲಯ ಸೌಕರ್ಯ ಹಾಗೂ ಶೈಕ್ಷಣಿಕವಾಗಿ ಸಹಾಯ ಹಾಗೂ ನೆರವು ನೀಡುವುದು ತಮ್ಮ ಧ್ಯೇಯೋದ್ದೇಶಗಳಲ್ಲಿ ಒಂದಾಗಿರುತ್ತದೆ. ಅಲ್ಲದೆ ತಮ್ಮ ಶಾಖೆಗಳನ್ನು ಧಾರವಾಡ, ಚಿಕ್ಕಮಗಳೂರು, ಹಾಗೂ ಮೈಸೂರು ಜಿಲ್ಲೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಬ್ರೈಲ್ ಮುದ್ರಣಾಲಯ, ವಸತಿ ನಿಲಯ ಹಾಗೂ ಗಣಕಯಂತ್ರ ತರಬೇತಿ ಇತ್ಯಾದಿ ಸೇವೆಗಳನ್ನು ಸಲ್ಲಿಸುತ್ತಿರುತ್ತೇವೆಚಿದು ತಮ್ಮೆಲ್ಲ ಚಟುವಟಿಕೆ ಕಾರ್ಯಗಳಿಗೆ ಸಾರ್ವಜನಿಕರ ದೇಣಿಗೆಯನ್ನೇ ಆವಲಂಬಿಸಬೇಕಾಗಿರುತ್ತದೆ. ಏಕೆಂದರೆ ತಮ್ಮ ಸಂಸ್ಥೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಯಾವುದೇ ರೀತಿಯ ಧನ ಸಹಾಯ ದೊರೆಯುತ್ತಿಲ್ಲವೆಂದು, ವಾರ್ಷಿಕವಾಗಿ ತಮ್ಮ ಸಂಸ್ಥೆಗೆ ಕನಿಷ್ಠ 30,06,265 (ಮೂವತ್ತು ಲಕ್ಷದ ಆರು ಸಾವಿರದ ಇನ್ನೂರ ಅರವತ್ತೈದು) ರೂ.ಗಳಷ್ಟು ಅವಶ್ಯಕವಿರುವುದರಿಂದ ತಮ್ಮ ಪಾಲಿಕೆಯ ವತಿಯಿಂದ ಕನಿಷ್ಠ 20,000,00 ರೂ.ಗಳನ್ನಾದರೂ ಧನ ಸಹಾಯ ನೀಡಿ ಅಂಗವಿಕಲರ ಶ್ರೇಯೋಭಿವೃದ್ಧಿಗೆ ಹಾಗೂ ಅವರ ಉತ್ತಮ ಭವಿಷ್ಯಕ್ಕೆ ಪಾಲಿಕೆಯು ನಾಂದಿಯಾಗಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ **2010–11** ನೇ ಸಾಲಿನಲ್ಲಿ **ರೂ. 1.00 ಲಕ್ಷ**ಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,

**ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :- ದಿನಾಂಕ : 08-11-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.1,00,000/- (ಒಂದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## 22]. ವಿಷಯದ ಸಂಖ್ಯೆ :-ತೆಆಸ್ಥಾಸ/379/2011-12

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)100/2011-12, ದಿನಾಂಕ : 05-11-2011ರಲ್ಲಿ ವಿವರಿಸಿರುವಂತೆ, ಶ್ರೀ ಎನ್. ದಯಾನಂದ್, ಮಾಜಿ ಉಪ ಮಹಾಪೌರರು ಮನವಿ ಸಲ್ಲಿಸಿ, ಲಾಲ್ ಬಹದ್ದೂರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ನಂ. 56, ಮಾನಸ ನಿಲಯ, 3ನೇ 'ಎ' ಕ್ರಾಸ್, ಲಾಲ್ ಬಹದ್ದೂರ ನಗರ, ಬೆಂಗಳೂರು – 43 ಸಂಘವು ಸರ್ಕಾರದಲ್ಲಿ ನೊಂದಣಿಯಾಗಿರುತ್ತದೆ ಮತ್ತು ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಅವರುಗಳಿಗೆ ಖರ್ಚಾಗಿರುವುದು ಸಹ ನನಗೆ ದೃಢವಾಗಿರುತ್ತದೆ. ಆದುದರಿಂದ ತಾವುಗಳು ಮೇಲ್ಕಾಣಿಸಿದ ಸಂಘಕ್ಕೆ ಅನುದಾನದ ಅಡಿಯಲ್ಲಿ ಈ ಹಣವನ್ನು ಮಂಜೂರು ಮಾಡಬಹುದು ಈ ಹಣದಿಂದ ಇನ್ನೂ ಹೆಚ್ಚಿನ ಉತ್ಸಾಹದಿಂದ ಕಾರ್ಯಕ್ರಮ ಸಾಮಾಜಿಕ ಕಾರ್ಯಕ್ರಮಗಳನ್ನು ಮತ್ತೆ ನಮ್ಮ ಲಾಲ್ ಬಹದ್ದೂರ ನಗರದ ನಿವಾಸಿಗಳಿಗೆ ಅನುಕೂಲ ಆಗುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆಂದು ಆದುದರಿಂದ ಪಾಲಿಕೆಯು ಇಂತಹ ಸ್ವಯಂ ಪ್ರೇರಿತ ಸಂಘ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡಬೇಕು ಹಾಗೂ ಸಹಾಯ ಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪ್ರಧಾನ ಕಾರ್ಯದರ್ಶಿ, ಲಾಲ್ ಬಹದ್ದೂರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ರವರು ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ದಿ: 15.08.2011 ರಂದು 750 ಬಡವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ, ಪ್ರೋತ್ಸಾಹಧನ, ಹಾಗೂ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ವಿದ್ಯಾರ್ಥಿಗೆ ರೂ. 10,000/- ಸಹಾಯಧನ ಹಾಗೂ ಗಾಂಧಿ ಜಯಂತಿ ಅಂಗವಾಗಿ ಕ್ರೀಡಾ ಸ್ಪರ್ಧೆಗಳನ್ನು ನಡೆಸಿರುವುದಾಗಿ ತಿಳಿಸಿ ಪಾಲಿಕೆ ವತಿಯಿಂದ ರೂ. 4.00 ಲಕ್ಷಗಳ ಧನ ಸಹಾಯ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***-ಮುಂದೂಡಿದೆ-***

## 23]. ವಿಷಯದ ಸಂಖ್ಯೆ :-ತೆಆಸ್ಥಾಸ/386/2011-12

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ/ಆ)ಪಿಎಸ್ಆರ್(4)20/11-12, ದಿನಾಂಕ : 19-11-2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎನ್. ವೀರಣ್ಣ ಕೆ.ಆರ್. ಪುರಂ,

ವಾರ್ಡ್ ಸಂಖ್ಯೆ–52 ರ ಸದಸ್ಯರು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು ಆದ ಇವರು ತಮ್ಮ ಪತ್ರದಲ್ಲಿ ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್, ಬೆಂಗಳೂರು ರವರು ತಮ್ಮ ಪತ್ರದಲ್ಲಿ ಕೋರಿರುವಂತೆ ದೇವಸ್ಥಾನದ ವಾರ್ಷಿಕ ಕಾರ್ಯಕ್ರಮಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ. 2.00 ಲಕ್ಷಗಳ ಸಹಾಯಧ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ "ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್" ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 1.00 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *24]. ವಿಷಯದ ಸಂಖ್ಯೆ :–ತೆಆಸ್ಥಾಸ/387/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)23/11–12, ದಿನಾಂಕ : 16–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಲೋಕೇಶ್ವರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಡಾಡ್ಜ್ ಬಾಲ್ ಸಂಸ್ಥೆ (ರಿ), ನಂ. ಎಂ54, 9ನೇ 'ಬಿ' ಮುಖ್ಯರಸ್ತೆ, ಎಲ್.ಐ.ಸಿ. ಕಾಲೋನಿ, ಜೀವನ್ ಭೀಮಾನಗರ, ಬೆಂಗಳೂರು – 560 075 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಕರ್ನಾಟಕ ರಾಜ್ಯ ಡಾಡ್ಜ್‌ಬಾಲ್ ಸಂಸ್ಥೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ದಿನಾಂಕ 28–04–2011 ರಿಂದ 30–04–2011 ರವರೆಗೆ ಐದನೇ ರಾಷ್ಟ್ರೀಯ ಕಿರಿಯರ ಡಾಡ್ಜ್‌ಬಾಲ್ ಪಂದ್ಯಾವಳಿಗಳನ್ನು ಸಹಕಾರ ನಗರದ ಕೊಡಿಗೇಹಳ್ಳಿಯಲ್ಲಿರುವ ಬಿ.ಬಿ.ಎಂ.ಪಿ. ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದು ಪಂದ್ಯಾವಳಿಗಳಲ್ಲಿ ಭಾರತದ ಇತರೆ ರಾಜ್ಯಗಳಿಂದ 19 ಬಾಲಕರ ಮತ್ತು 18 ಬಾಲಕಿಯರ ತಂಡಗಳು ಒಟ್ಟು 37 ತಂಡಗಳು ಭಾಗವಹಿಸಿದ್ದವು. ಈ ಪಂದ್ಯಾವಳಿಗಳನ್ನು ಆಯೋಜಿಸಲು ರೂ. 9,35,000/– ಗಳು ವೆಚ್ಚವಾಗಿದ್ದು, ಈ ಪಂದ್ಯಾವಳಿಗಳಿಗೆ ವಸತಿ ವ್ಯವಸ್ಥೆ ಊಟದ ವ್ಯವಸ್ಥೆ ಪ್ರೇಕ್ಷಕರು ಕುಳಿತುಕೊಳ್ಳಲು ಆಸನದ ವ್ಯವಸ್ಥೆ, ಧ್ವನಿ ವರ್ಧಕ ಮತ್ತು ಇತರೆ ವೆಚ್ಚಗಳು ರೂ. 5,00,000/– ಭರಿಸಬೇಕಾಗಿರುವುದರಿಂದ ತಮ್ಮ ಸಂಸ್ಥೆಯ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲವಾದ್ದರಿಂದ ಪಾಲಿಕೆಯ ವತಿಯಿಂದ ಐದು ಲಕ್ಷ ರೂ.ಗಳ ಆರ್ಥಿಕ ನೆರವನ್ನು ಕೋರಿ ಈ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಆದುದರಿಂದ ಪಾಲಿಕೆಯ ವತಿಯಿಂದ ಆರ್ಥಿಕ ಧನ ಸಹಾಯವನ್ನು ಶೀಘ್ರವಾಗಿ ಬಿಡುಗಡೆ ಮಾಡಬೇಕಾಗಿ ಕೋರಿರುತ್ತಾರೆ.

ಶ್ರೀ ಎಸ್. ಆರ್. ವಿಶ್ವನಾಥ್, ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ, ಬೆಂಗಳೂರು ನಗರ ಜಿಲ್ಲೆ ರವರು ಹಾಗೂ ಶ್ರೀ ಅಶ್ವತ್ಥ ನಾರಾಯಣ ಗೌಡ, ಮಾನ್ಯ ಸದಸ್ಯರು, ವಾರ್ಡ್–8 (ಕೊಡಿಗೇಹಳ್ಳಿ) ರವರು ಪತ್ರ ಬರೆದು ಸದರಿಯವರಿಗೆ ರೂ. 5.00 ಲಕ್ಷಗಳನ್ನು ಪಾಲಿಕೆಯ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನೀಡಲು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ **ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10

ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *25]. ವಿಷಯದ ಸಂಖ್ಯೆ :-ತೆಆಸ್ಥಾಸ/391/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 23.11.2011. ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160ರ ವ್ಯಾಪ್ತಿಯಲ್ಲಿ ಗಟ್ಟಿಗೆರೆ ಸ್ಮಶಾನಕ್ಕೆ ಆರ್.ಸಿ.ಸಿ ತಡೆಗೋಡೆ ಮತ್ತು ಸ್ಮಶಾನದ ರಸ್ತೆಗೆ ಚರಂಡಿ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 13.80 ಲಕ್ಷಗಳಿಗೆ 2011-12 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0486" ಅಡಿ ಅನುಮೋದನೆ ನೀಡಲು ಹಾಗೂ ಜಾಬ್ ಸಂಖ್ಯೆ ನೀಡಲು ಮಂಡಿಸಲಾಗಿದೆ.

2011-12 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 100 ರಲ್ಲಿ ಲೆಕ್ಕಶೀರ್ಷಿಕೆ ಪಿ0486 ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ವಹಣೆ ಮತ್ತು ದುರಸ್ಥಿ ( ಪ್ರತಿ ವಲಯ ರೂ. 25.00 ಲಕ್ಷದಂತೆ) ರೂ. 200.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಪ್ರತಿ ವಲಯಕ್ಕೆ ರೂ. 25.00 ಲಕ್ಷದಂತೆ ಅನುದಾನ ಮೀಸಲಿರಿಸಲಾಗಿದೆ.

ಮೇಲ್ಕಂಡ ಲೆಕ್ಕಶೀರ್ಷಿಕೆಯಡಿ ರಾಜರಾಜೇಶ್ವರಿನಗರ ವಲಯಕ್ಕೆ ಲಭ್ಯವಾಗುವ ಅನುದಾನ ರೂ. 25.00 ಲಕ್ಷಗಳಲ್ಲಿ ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ. 13.80 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ0486 ರ ಕಾರ್ಯಕ್ರಮ ಪಟ್ಟಿಗೆ ಸೇರಿಸಿಕೊಂಡು ಅನುಷ್ಟಾನಗೊಳಿಸುವ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## *26]. ವಿಷಯದ ಸಂಖ್ಯೆ :-ತೆಆಸ್ಥಾಸ/393/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)72/11-12, ದಿನಾಂಕ : 19.11.2011. ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಕೆ. ಹೆಚ್. ರಾಮಲಿಂಗಾ ರೆಡ್ಡಿ, ಅಧ್ಯಕ್ಷರು, ಕರ್ನಾಟಕ ಭ್ರಷ್ಠಾಚಾರ ನಿರ್ಮೂಲನಾ ವೇದಿಕೆ (ರಿ), ಕೆ.ಎಸ್. ಹಳ್ಳಿ, ಕನ್ನಮಂಗಲ ಅಂಚೆ, ಬೆಂಗಳೂರು – 560 067. ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ ಸದರಿಯವರು ದಿನಾಂಕ 22-09-2011 ರಂದು ನಗರದ ಗಾಂಧಿ ಭವನದಲ್ಲಿ ಚುನಾವಣಾ ಸಮಗ್ರ ಸುಧಾರಣೆಗಳು ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದು, ಈ ವಿಚಾರಣಾ ಸಂಕಿರಣದಲ್ಲಿ ಚರ್ಚಿಸಲು ಕಾನೂನು ತಜ್ಞರು, ನ್ಯಾಯಾಧೀಶರು, ಬುದ್ಧಿ ಜೀವಿಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಸುಮಾರು ರೂ. 3,33,000/- ಗಳ ವೆಚ್ಚವಾಗಲಿದೆ ಎಂದು ಅಂದಾಜು ವಿವರಗಳನ್ನು ತಿಳಿಸಿ, ಮಹಾನಗರ ಪಾಲಿಕೆಯಿಂದ ಸಹಾಯ ಅನುದಾನ ನೀಡುವಂತೆ ಕೋರಿರುತ್ತಾರೆಂದು ತಿಳಿಸಿ, ಸಾಮಾಜಿಕ ಪರಿವರ್ತನೆಯ ಹಿತದೃಷ್ಠಿಯಿಂದ ಇಂತಹ ವಿಚಾರ ಸಂಕಿರಣಗಳು ಇವತ್ತಿನ ದಿವಸಗಳಲ್ಲಿ ಅವಶ್ಯಕವೆನಿಸುತ್ತದೆ, ಮೇಲ್ಕಂಡ ಕಾರ್ಯಕ್ರಮಕ್ಕೆ ಅತಿಥಿಗಳ ಗೌರವ ಧನಕ್ಕೆ ತಗಲುವ ವೆಚ್ಚ ರೂ. 39,000/- ಗಳನ್ನು ಪಾಲಿಕೆ ವತಿಯಿಂದ ಭರಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *27]. ವಿಷಯದ ಸಂಖ್ಯೆ :–ತೆಆಸ್ಥಾಸ/394/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)53/11–12, 22–11–2011 ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ವಿಶ್ವಶಾಂತಿ ಸಾರ್ವಜನಿಕ ಸಂಸ್ಥೆ, ನಂ. 471, 16ನೇ ಕ್ರಾಸ್, ಬಾಗಲಗುಂಟೆ, ನಾಗಸಂದ್ರ (ಪೋಸ್ಟ್) ಬೆಂಗಳೂರು – 560 073. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ಕಳೆದ 10 ವರ್ಷಗಳಿಂದ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 30 ಕೊಳೆಗೇರಿ ಪ್ರದೇಶಗಳಲ್ಲಿ ಮಹಿಳೆಯರ, ಮಕ್ಕಳ ಮತ್ತು ವೃದ್ಧರ ಸರ್ವತೋಮುಖ ಏಳಿಗೆಗಾಗಿ  ಕಾರ್ಯನಿರ್ವಹಿಸುತ್ತಿದ್ದೇವೆ. ಅಂದರೆ (ಕೌಟುಂಬಿಕ ಸಲಹೆ ಮತ್ತು ಮಾರ್ಗದರ್ಶನ, ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು, ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವುದು. ವಿವಿಧ ರೀತಿಯ ವೃತ್ತಿ ತರಬೇತಿಗಳನ್ನು ಏರ್ಪಡಿಸುವುದು. ವೃದ್ಧರ ಪುನರ್ವಸತಿ, ಬಾಲಕಾರ್ಮಿಕರ ನಿರ್ಮೂಲನೆ, ಕಾನೂನಿನ ಬಗ್ಗೆ ತಿಳುವಳಿಕೆ, ಹೆಚ್.ಐ.ವಿ./ಏಡ್ಸ್ ರೋಗದ ಬಗ್ಗೆ ಮಾಹಿತಿ ಸ್ವ–ಸಹಾಯ ಸಂಘಗಳ ರಚನೆ ಮತ್ತು ತರಬೇತಿ, ಸಣ್ಣ ಉಳಿತಾಯ ಮತ್ತು ಸಾಲದ ಯೋಜನೆ ಇತ್ಯಾದಿ) ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೊಳಗೇರಿ ನಿವಾಸಿಗಳ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದಾಗಿ ತಿಳಿಸಿ, ಇಂತಹ ಕಾರ್ಯಕ್ರಮಗಳ ಅನುಷ್ಠಾನದ ಸಲುವಾಗಿ ಬೆಂಗಳೂರು ಮಹಾನಗರ ಪಾಲಿಕೆಯಿಂದ 5 ವರ್ಷಗಳಿಗೊಮ್ಮೆ ನೀಡುವ ಅನುದಾನವನ್ನು ಬಿಡುಗಡೆ ಮಾಡಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

ಸದರಿಯವರಿಗೆ 2006–07 ನೇ ಸಾಲಿನಲ್ಲಿ ರೂ. 1.00 ಲಕ್ಷ (ಒಂದು ಲಕ್ಷ) ಸಹಾಯಧನ ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ**,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

*ನಿರ್ಣಯ :* *ದಿನಾಂಕ : 22–11–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ವಿಶ್ವಶಾಂತಿ ಸಾರ್ವಜನಿಕ ಸಂಸ್ಥೆಯು ಕೊಳಗೇರಿ ನಿವಾಸಿಗಳ ಅಭಿವೃದ್ಧಿಗಾಗಿ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು ಉತ್ತಮವಾಗಿರುವುದರಿಂದ ರೂ.50,000/– (ಐವತ್ತು ಸಾವಿರ) ಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.*

## *28]. ವಿಷಯದ ಸಂಖ್ಯೆ :–ತೆಆಸ್ಥಾಸ/395/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಬಿಬಿಎಂಪಿ(ಆಕ)ಸಂಖ್ಯೆ ಃ 734/ಕ.ಅ.ಸೇ/11–12, ದಿನಾಂಕ ಃ 22–11–2011ರಲ್ಲಿ ವಿವರಿಸಿರುವಂತೆ, ಶ್ರೀ. ಟಿ.ಎನ್.ಜಗನ್ನಾಥ್ ರಾವ್ # 164, 16ನೇ ಕ್ರಾಸ್, 5ನೇ ಹಂತ, ಜೆ.ಪಿ.ನಗರ, ಬೆಂ–78. ರವರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಮನವಿ ಸಲ್ಲಿಸಿ, ಸದರಿಯವರು ನನ್ನ ಮಗಳಾದ ಕು|| ಟಿ.ಜೆ.ನಿವೇದಿತಾ ಹುಟ್ಟಿನಿಂದಲೆ ಅಂಗವಿಕಲತೆ, ಅವಳಿಗೆ ಕಿವಿ ಕೇಳುವುದಿಲ್ಲ, ಮಾತು ಬರುವುದಿಲ್ಲ, ಬುದ್ದಿ ಮಾಂದ್ಯತೆ ಮತ್ತು ಸ್ಪಾಷ್ಟಿಕ್ (Spastic-Left side) ಎಡ ಭಾಗ. ಈ ಎಲ್ಲಾಅಂಗವಿಕಲತೆ ಇದ್ದರೂ ಸಹ ನಿವೇದಿತ ಭರತನಾಟ್ಯವನ್ನು ಕಲಿತಿದ್ದಾಳೆ. ಅವಳ ವಿದ್ಯಾಭ್ಯಾಸ 4ನೇ ತರಗತಿಯವರೆಗೆ, ಅವಲು ಇನ್ನೊಬ್ಬರ ಸಹಾಯವಿಲ್ಲದೆ ಎಲ್ಲೂ ಹೋಗುವ ಹಾಗಿಲ್ಲ.

ನನ್ನ ಸಹೋದರಿ ಸುಭದ್ರ ಪ್ರಭು, ಭರತನಾಟ್ಯ ಕಲಿಸುವ ಶಾಲೆಯನ್ನು ನಡೆಸುತ್ತಿರುತ್ತಾರೆ. ನನ್ನ ಹೆಂಡತಿ ರಮಾ ಜನಗನ್ನಾಥ್, ಪ್ರಖ್ಯಾತ ಗಾಯಕಿ ಹಾಗೂ ಭರತನಾಟ್ಯ ಕಲಾವಿದೆ. ಇವರು ಕೂಚಿಪುಡಿ, ಆಂಧ್ರ ನಾಟ್ಯ ಹಾಗೂ ಭರತನಾಟ್ಯಗಳಿಗೆ ಹಿನ್ನೆಲೆ ಸಂಗೀತ ಸಹಕಾರ ನೀಡುತ್ತಿರುತ್ತಾರೆ. ಇವರುಗಳ ಮಾರ್ಗದರ್ಶನದಲ್ಲಿ ನಿವೇದಿತಾ ಭರತನಾಟ್ಯ ಅಭ್ಯಾಸ ಮಾಡುತ್ತಿರುತ್ತಾಳೆ.

ನಿವೇದಿತಾಳಿಗೆ ಈ ಎಲ್ಲಾ ಅಂಗವೈಕಲ್ಯತೆಗಳಿದ್ದರೂ, ಭರತನಾಟ್ಯ ಕಲಿತಿದ್ದಾಳೆ. ನಿವೇದಿತಾ ತನ್ನ 8ನೇ ವಯಸ್ಸಿನಿಂದ ನೃತ್ಯ ಕಾರ್ಯಕ್ರಮ ನೀಡುತ್ತಿದ್ದಾಳೆ. ಇಲ್ಲಿಯವರೆಗೆ ಸುಮಾರು 60ಕ್ಕೂ ಹೆಚು ನೃತ್ಯ ಕಾರ್ಯಕ್ರಮವನ್ನು ನೀಡಿದ್ದಾಳೆ. ನಿವೇದಿತಾಳ ಭರತನಾಟ್ಯ ರಂಗ ಪ್ರವೇಶ ದಿನಾಂಕ : 07–04–2007 ರಂದು ಎ.ಡಿ.ಎ.ರಂಗಮಂದಿರದಲ್ಲಿ ನೆರವೇರಿತು.

ಇವಳ ಸಾಧನೆಯನ್ನು ಪರಿಗಣಿಸಿ ಭಾರತ ಸರ್ಕಾರ ಇವಳಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ದಿನಾಂಕ : 03–12–2007ರ ವಿಶ್ವ ಅಂಗವಿಕಲ ದಿನದಂದು ನೀಡಿ ಗೌರವಿಸಿದೆ. ಅದೇ ದಿನ ಅಂದರೆ ನಮ್ಮ ಘನ ಕರ್ನಾಟಕ ಸರ್ಕಾರ ಸಹ ನಿವೇದಿತಾಳಿಗೆ ದಿನಾಂಕ : 03–12–2007 ರಂದು ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕರ್ನಾಟಕ ಸಕಾರವು ನಿವೇದಿತಾಳಿಗೆ 2009ನೇ ಸಲಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಮೇಲಿನ ಪ್ರಶಸ್ತಿಯನ್ನಲ್ಲದೇ ನಿವೇದಿತಾ ಹತ್ತು ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ನಿವೇದಿತಾಳ ಈ ಎಲ್ಲಾ ಸಾಧನೆಯನ್ನು ಪರಿಗಣಿಸಿ ತಮ್ಮ ಘನ ಇಲಾಖೆಯ ವತಿಯಿಂದ ನೃತ್ಯ ಕಾರ್ಯಕ್ರಮಕ್ಕೆ ಅವಕಾಶ ನೀಡಬೇಕೆಂದು ಹಾಗೂ ಇದಕ್ಕಾಗಿ ರೂ.50,000– ಗಳ ಅನುದಾನವನ್ನು ನೀಡಲು ಕೋರಿರುತ್ತಾರೆ.

ಅಭ್ಯರ್ಥಿಯು ಹುಟ್ಟಿನಿದಲೂ ಅಂಗವಿಕಲತೆಯಾಗಿದ್ದು, ಇವರು ಸಾಧನೆ ಮಾಡಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂದಿಸಿದಂತೆ, ಕಲ್ಯಾನ ಕಾರ್ಯಕ್ರಮದ ಮಾರ್ಗಸೂಚಿಯ ಪ್ರಕಾರ ಅಂಗವಿಕಲರಿಗೆ ಉಪಕರಣಗಳನ್ನು ಒದಗಿಸುವುದು ಹಾಗೂ ಅಂಗವಿಕಲರ ಸೇವಾಕೇಂದ್ರಗಳಿಗೆ ಮತ್ತು ಬುದ್ಧಿಮಾಂಧ್ಯ ಮಕ್ಕಳಿಗೆ ಪ್ರೋತ್ಸಾಹಧನ ಮಾತ್ರ ನೀಡಬಹುದಾಗಿರುತ್ತದೆ, ಆದರೆ ನೃತ್ಯ ಕಾರ್ಯಕ್ರಮ ಹಾಗೂ ನೃತ್ಯ ಕಾರ್ಯಕ್ರಮಕ್ಕೆ ಸಹಾಯಧನದ ಅವಕಾಶ ನೀಡುವ ಕಾರ್ಯಕ್ರಮವಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *29]. ವಿಷಯದ ಸಂಖ್ಯೆ :–ತೆಆಸ್ಥಾಸ/404/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)115/11–12, ದಿನಾಂಕ : 26–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಆರ್. ಎಸ್. ಸತ್ಯ ನಾರಾಯಣ, ಮಾನ್ಯ ಸದಸ್ಯರು, ವಾರ್ಡ್ –77 (ದತ್ತಾತ್ರೇಯ ದೇವಸ್ಥಾನ) ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕನ್ನಡ ಕಲಾ ಜ್ಯೋತಿ ಯುವಕರ ಸಂಘ (ರಿ), ನಂ. 60, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು– 20 ರವರು ಬಿಬಿಎಂಪಿ ಯಿಂದ ಧನ ಸಹಾಯ ನೀಡಲು ಕೋರಿ ಮನವಿ ಪತ್ರ ಸಲ್ಲಿಸಿದ್ದು, ಸದರಿ ಪತ್ರವನ್ನು ತಮ್ಮ ಪರಿಶೀಲನೆಗೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸ್ಮತ್ತಾ, ಸದರಿಯವರ ಕೋರಿಕೆಯ ಬಗ್ಗೆ ತಮ್ಮಗಳ ಗಮನಕ್ಕೆ ತಂದು ಕೋರುವುದೇನೆಂದರೆ, ಸಂಘದ ಆಶ್ರಯದಲ್ಲಿ ರಾಜ್ಯ ಮಟ್ಟದ ಶ್ರೀ ಕೆಂಪೇಗೌಡ ಪ್ರಶಸ್ತಿ ಹೊನಲು ಬೆಳಕಿನ ಕುಸ್ತಿ ಪಂದ್ಯಗಳನ್ನು ನಡೆಸಿ, ಯುವಶಕ್ತಿಗೆ ಚೈತನ್ಯ ನೀಡುವುದು, ನಾಗರೀಕರಿಗೆ ಮನೋಲ್ಲಾಸ ಪಡಿಸುವುದು ಹಾಗೂ ಈ ಕ್ರೀಡೆಯ ಉನ್ನತಿಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುತ್ತಾರೆಂದು, ಮೈಸೂರು ಮಹಾರಾಜರ ಕಾಲಾವಧಿಯಲ್ಲಿ ಕುಸ್ತಿ ಪಂದ್ಯಾವಳಿಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಈ ಕ್ರೀಡೆಯನ್ನು ಪ್ರೋತ್ಸಾಯಿಸುತ್ತಿದ್ದುದನ್ನು ನಾವುಗಳು ಕಂಡು ಕೇಳಿರುತ್ತೇವೆ. ಪ್ರಸ್ತುತ ದಸರಾ ಸಂದರ್ಭದಲ್ಲಿ ಮಾತ್ರ ಆದ್ಯತೆ ನೀಡುತ್ತಿದ್ದು, ಉಳಿದ ಸಂದರ್ಭಗಳಲ್ಲಿ ಆದ್ಯತೆ ನೀಡದಿರುವುದರಿಂದ, ಈ ಕ್ರೀಡೆಯೇ ನಶಿಸಿ ಹೋಗುತ್ತಿರುವುದನ್ನು ಗುರುತಿಸಬಹುದಾಗಿದೆ. ಆದರೆ ಸದರಿ ಸಂಘದ ಆಶ್ರಯದಲ್ಲಿ ರಾಜ್ಯ ಮಟ್ಟದ ಶ್ರೀ ಕೆಂಪೇಗೌಡ ಪ್ರಶಸ್ತಿ ಹೊನಲು ಬೆಳಕಿನ ಕುಸ್ತಿ ಪಂದ್ಯಗಳನ್ನು ನಡೆಸಿ ಕೊಡುತ್ತಿರುವುದನ್ನು ಗಮನಿಸಿ ಹೆಚ್ಚಿನ ಪ್ರೋತ್ಸಾಹ ನೀಡುವುದು ಸಮಂಜಸವೆಂದು ಭಾವಿಸುತ್ತೇನೆಂದು ತಿಳಿಸಿರುತ್ತಾರೆ. ಆದುದರಿಂದ ಕನ್ನಡ ಕಲಾ ಜ್ಯೋತಿ ಯುವಕರ ಸಂಘ (ರಿ) ರವರ ಕೋರಿಕೆಯನ್ನು ಪರಿಗಣಿಸಿ, ಪ್ರಸ್ತುತ ಸದರಿ ಸಂಸ್ಥೆಯವರು ನಡೆಸಿಕೊಡುತ್ತಿರುವ ಕಾರ್ಯಕ್ರಮಕ್ಕೆ ಹಣಕಾಸಿನ ನೆರವು ಅಗತ್ಯವಾಗಿದ್ದು, ಅವರ ಕಾರ್ಯವನ್ನು ಪ್ರೋತ್ಸಾಹಿಸಲು ಬಿಬಿಎಂಪಿಯಿಂದ ಧನ ಸಹಾಯದ ಅವಶ್ಯಕತೆ ಇರುವುದರಿಂದ 2011–12 ನೇ ಸಾಲಿನಲ್ಲಿ ಸೂಕ್ತ ಧನ ಸಹಾಯ ಮಾಡಲು ಕೋರುತ್ತೇನೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು **ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ,** ಸಾಂಸ್ಕೃತಿಕ

ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 26-11-2011 ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.3,00,000/- (ಮೂರು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## 30]. ವಿಷಯದ ಸಂಖ್ಯೆ :-ತೆಆಸ್ಥಾಸ/418/2011-12

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(2)ಪಿಆರ್/389/10-11, ದಿನಾಂಕ ಃ 29-08-2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:114ರ ವ್ಯಾಪ್ತಿಯಲ್ಲಿರುವ ಜಾನ್‌ಬುಲ್ ಸ್ಟ್ರೀಟ್ ಇಲ್ಲಿ ವಾಸಿಸುತ್ತಿರುವ 08-ಜನರಿಗೆ ದಿನಾಂಕ:21-01-1973 ರಿಂದ 20-12-1973 ರವರೆಗೆ (11-ತಿಂಗಳ) ಅವಧಿಗೆ ವಿವಿಧ ಅಳತೆಗಳ ನಿವೇಶನವನ್ನು ತಿಂಗಳಿಗೆ ವಿವಿಧ ದರಗಳಲ್ಲಿ (2/-ರೂ. 3/-ರೂ. 5/-ರೂ) ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದು, ತದನಂತರ, ಗುತ್ತಿಗೆ ಅವಧಿ ನವೀಕರಿಸಿರುವುದಿಲ್ಲ. ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಸ್ವತ್ತಿನ ಸಂಖ್ಯೆ | ಗುತ್ತಿಗೆ ನೀಡಿರುವ ಫಲಾನುಭವಿಗಳ ಹೆಸರು | ಹಾಲಿ ವಾಸಿಸುತ್ತಿರುವ ಫಲಾನುಭವಿಗಳ ವಾರಸುದಾರರ ಹೆಸರು | ವಿಸ್ತೀರ್ಣ | ಮಾಸಿಕ ಗುತ್ತಿಗೆ ಮೊತ್ತ |
|---|---|---|---|---|---|
| 1 | 1 | ಶ್ರೀ.ಎಂ.ನಟರಾಜನ್ | ಎಂ.ನಟರಾಜನ್ | 30X25 = 750 ಚ.ಅಡಿ | 2/- ರೂ.ಗಳು |
| 2 | 1/ಎ | ಸೀತಾರಾಮಮ್ಮ | ಸೀತಮ್ಮ | 20X18 = 360 ಚ.ಅಡಿ | 5/- ರೂ.ಗಳು |
| 3 | 2 | (ಲೇಟ್)ಎಸ್.ಟೀಕಾರಾಮ್ | ಶ್ರೀಮತಿ.ಮಾಯಾದೇವಿ ಕೋಂ.ಟೀಕಾರಾಮ್ ಎಸ್ | 30X25 = 750 ಚ.ಅಡಿ | 3/- ರೂ.ಗಳು |
| 4 | 2/ಎ | (ಲೇಟ್)ಕೆ.ಪೆರುಮಾಳ್ | ಶ್ರೀಮತಿ.ಅಲುಮೇಲು ಕೋಂ ಪೆರುಮಾಳ್ | 20X30 = 600 ಚ.ಅಡಿ | 2/- ರೂ.ಗಳು |
| 5 | 3 | ತಿರುವೆಂಕಟಮ್ | ಎಂ.ನಟರಾಜನ್ | 20X18 = 360 ಚ.ಅಡಿ | 3/- ರೂ.ಗಳು |
| 6 | 4 | ಬಿ.ಕೃಷ್ಣಸ್ವಾಮಿ | ಬಿ.ಕೃಷ್ಣಸ್ವಾಮಿ | 20X30 = 600 ಚ.ಅಡಿ | 2/- ರೂ.ಗಳು |
| 7 | 5 | (ಲೇಟ್)ಸೆಲ್ವರಾಜ್.ಸಿ | ಶ್ರೀಮತಿ.ಲೋಗಂಬಾಲ್ ಕೋಂ ಸೆಲ್ವರಾಜ್.ಸಿ | 30X20 = 600 ಚ.ಅಡಿ | 2/- ರೂ.ಗಳು |
| 8 | 6 | (ಲೇಟ್)ವೈ.ಮುತ್ತು | ಜಯಪ್ರಿಯ ಕೋಂ ವೈ.ಮುತ್ತು | 25X20 = 500 ಚ.ಅಡಿ | 3/- ರೂ.ಗಳು |

ಗುತ್ತಿಗೆಗೆ ನೀಡಲಾಗಿದ್ದ 08-ಜನರಲ್ಲಿ ಕ್ರಮ ಸಂಖ್ಯೆ:05, ತಿರುವೆಂಕಟಮ್ ರವರನ್ನು ಹೊರತುಪಡಿಸಿ, ಉಳಿದ 07-ಜನ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ಈ ತಹಲ್‌ವರೆವಿಗೂ ಪೂರ್ಣವಾಗಿ ಪಾವತಿಸಿರುತ್ತಾರೆಂದು ವರದಿ ಮಾಡಿರುತ್ತಾರೆ.

ಗುತ್ತಿಗೆ ಅವಧಿ ಪೂರ್ಣಗೊಂಡ ಕಾರಣ, ದಿನಾಂಕ:05-08-2010 ರಂದು ಕೆ.ಪಿ.ಪಿ ಕಾಯ್ದೆ-4(1)ರನ್ವಯ ನೋಟೀಸ್ ನೀಡಲಾಗಿದೆ. ಗುತ್ತಿಗೆ ನೀಡಿರುವ ಪ್ರದೇಶದಲ್ಲಿ ಫಲಾನುಭವಿಗಳು ಮನೆಗಳನ್ನು ನಿರ್ಮಿಸಿಕೊಂಡು ವಾಸವಿದ್ದು, ಅವರಿಗೆ ಹಕ್ಕುಪತ್ರಗಳನ್ನು ನೀಡುವಂತೆ ಶಾಂತಿನಗರ

ವಿಧಾನಸಭಾ ಕ್ಷೇತ್ರದ ಶಾಸಕರು ಪತ್ರ ನೀಡಿರುತ್ತಾರೆ. ಮೂಲ ಕಡತಗಳು ಲಭ್ಯವಿಲ್ಲವೆಂದು ವರದಿ ಮಾಡಿದ್ದ ಹಿನ್ನೆಲೆಯಲ್ಲಿ ಮೂಲ ದಾಖಲಾತಿಗಳೊಂದಿಗೆ ಪ್ರತ್ಯೇಕ ಕಡತಗಳನ್ನು ತಯಾರಿಸಿ, ಜೆರಾಕ್ಸ್ ಪ್ರತಿ ಲಭ್ಯವಿದ್ದಲ್ಲಿ, ಅಧಿಕೃತಗೊಳಿಸಿ ಗುತ್ತಿಗೆ ಅವಧಿ, ವಿಸ್ತೀರ್ಣ, ಗುತ್ತಿಗೆ ಬಾಕಿ ವಿವರಗಳೊಂದಿಗೆ, ಪ್ರತ್ಯೇಕ ಪ್ರತ್ಯೇಕವಾಗಿ ಮಂಡಿಸಲು ಸೂಚಿಸಿ ಕಡತ ಹಿಂದಿರುಗಿಸಲಾಗಿತ್ತು.

ಈ ಮೇರೆಗೆ 8-ಸ್ವತ್ತುಗಳ ಸಂಬಂಧ ಪ್ರತ್ಯೇಕ ಕಡತಗಳನ್ನು ತಯಾರಿಸಿ, ಲಭ್ಯವಿರುವ ದಾಖಲೆ ಹಾಗೂ ಭೂಮಾಪಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು ತಯಾರಿಸಿರುವ ನಕ್ಷೆಯನ್ನು ಕಡತದಲ್ಲಿ ಲಗತ್ತಿಸಿ ಗುತ್ತಿಗೆ ನೀಡಿರುವ 08-ಫಲಾನುಭವಿಗಳಲ್ಲಿ 07-ಜನರು ಸದರಿ ಸ್ವತ್ತಿನಲ್ಲಿ ಮನೆ ನಿರ್ಮಿಸಿಕೊಂಡು ವಾಸವಿದ್ದು, ಒಂದು ಖಾಲಿನಿವೇಶನ ಇರುವುದಾಗಿ ವರದಿಯಾಗಿದ್ದು, ಗುತ್ತಿಗೆಗೆ ನೀಡಿರುವ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಕೋರಿರುವುದರಿಂದ, ಗುತ್ತಿಗೆಗೆ ನೀಡಿರುವ 08-ಫಲಾನುಭವಿಗಳ ಪೈಕಿ, ಮನೆ ನಿರ್ಮಿಸಿಕೊಂಡು ವಾಸವಾಗಿರುವ 07-ಜನರಿಗೆ ಗುತ್ತಿಗೆ ಅವಧಿಯನ್ನು

ನವೀಕರಿಸಿ, ಗುತ್ತಿಗೆಗೆ ನೀಡಿದ್ದ ಸ್ಥಳದಲ್ಲಿ ವಾಸಿಸದೇ ಖಾಲಿ ನಿವೇಶನ ಬಿಟ್ಟಿರುವ ಕ್ರಮಸಂಖ್ಯೆ:05, ತಿರುವೆಂಕಟಮ್‌ರವರಿಗೆ ಗುತ್ತಿಗೆ ನವೀಕರಣ ತಿರಸ್ಕರಿಸಿ, ಸದರಿ ಸ್ವತ್ತನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳಬಹುದಾಗಿದೆ.

ಪ್ರಸ್ತಾಪಿತ ಸ್ವತ್ತಿನ ಮಾರುಕಟ್ಟೆ ಮೌಲ್ಯವು ಚದರ ಅಡಿ 1ಕ್ಕೆ 1600/- ರೂ.ಗಳಾಗಿದ್ದು, ಫಲಾನುಭವಿಗಳ ಹೆಸರಿಗೆ ಮುಂದೆ ಸ್ವತ್ತಿನ ಮೌಲ್ಯ, ವಾರ್ಷಿಕ ಮೌಲ್ಯ ಹಾಗೂ ಮಾಸಿಕ ಮೌಲ್ಯಗಳನ್ನು ಈ ಕೆಳಕಂಡಂತೆ ವಿವರಿಸಿದೆ.

| ಕ್ರ. ಸಂ | ಸ್ವತ್ತಿನ ಸಂಖ್ಯೆ | ಗುತ್ತಿಗೆ ನೀಡಿರುವ ಫಲಾನುಭವಿಗಳ ಹೆಸರು | ಹಾಲಿ ವಾಸಿಸುತ್ತಿರುವ ಫಲಾನುಭವಿಗಳ ವಾರಸುದಾರರ ಹೆಸರು | ವಿಸ್ತೀರ್ಣ | ಸ್ವತ್ತಿನ ಮೌಲ್ಯ ರೂ.ಗಳಲ್ಲಿ | ವಾರ್ಷಿಕ ಗುತ್ತಿಗೆ ಮೊತ್ತ ರೂ.ಗಳಲ್ಲಿ | ಮಾಸಿಕ ಗುತ್ತಿಗೆ ಮೊತ್ತ ರೂ.ಗಳಲ್ಲಿ |
|---|---|---|---|---|---|---|---|
| 1 | 1 | ಶ್ರೀ.ಎಂ.ನಟರಾಜನ್ | ಎಂ.ನಟರಾಜನ್ | 750 ಚ.ಅಡಿ | 12,00,000/- | 1,20,000/- | 10,000/- |
| 2 | 1/ಎ | ಸೀತಾರಾಮಮ್ಮ | ಸೀತಮ್ಮ | 360 ಚ.ಅಡಿ | 5,76,000/- | 57,600/- | 4,800/- |
| 3 | 2 | (ಲೇಟ್) ಎಸ್.ಟೇಕಾರಾಮ್ | ಶ್ರೀಮತಿ.ಮಾಯಾದೇವಿ ಕೋಂ.ಟೇಕಾರಾಮ್ ಎಸ್ | 750 ಚ.ಅಡಿ | 12,00,000/- | 1,20,000/- | 10,000/- |
| 4 | 2/ಎ | (ಲೇಟ್) ಕೆ.ಪೆರುಮಾಳ್ | ಶ್ರೀಮತಿ.ಅಲುಮೇಲು ಕೋಂ ಪೆರುಮಾಳ್ | 600 ಚ.ಅಡಿ | 9,60,000/- | 96,000/- | 8,000/- |
| 5 | 4 | ಬಿ.ಕೃಷ್ಣಸ್ವಾಮಿ | ಬಿ.ಕೃಷ್ಣಸ್ವಾಮಿ | 600 ಚ.ಅಡಿ | 9,60,000/- | 96,000/- | 8,000/- |
| 6 | 5 | (ಲೇಟ್) ಸೆಲ್ವರಾಜ್.ಸಿ | ಶ್ರೀಮತಿ.ಲೋಗಂಬಾಲ್ ಕೋಂ ಸೆಲ್ವರಾಜ್.ಸಿ | 600 ಚ.ಅಡಿ | 9,60,000/- | 96,000/- | 8,000/- |
| 7 | 6 | (ಲೇಟ್) ವೈ.ಮುತ್ತು | ಜಯಪ್ರಿಯ ಕೋಂ ವೈ.ಮುತ್ತು | 500 ಚ.ಅಡಿ | 8,00,000/- | 80,000/- | 6,667/- |

ದಿನಾಂಕ:01-03-2002ರ ಸುತ್ತೋಲೆ ಕ್ರಮ ಸಂಖ್ಯೆ:5ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಶೇ:100/-ರಷ್ಟು ಸಮಾಜ ಸೇವೆ ಸಲ್ಲಿಸುವ ಸಂಘ/ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಮೊತ್ತದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಬಹುದಾಗಿದೆ.

ಆದ್ದರಿಂದ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಹಳೆಯ ದರದಂತೆ, ಕರಾರು ನೊಂದಾಯಿಸುವ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ಸೂಕ್ತ ಗುತ್ತಿಗೆ ಮೊತ್ತ ನಿಗಧಿಪಡಿಸಿ, ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಗುತ್ತಿಗೆ ಮೊತ್ತವನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಅವಧಿ ನವೀಕರಿಸುವ ಮಾನ್ಯ ಆಯುಕ್ತರವರ ದಿನಾಂಕ 29-08-2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06-

09–2011ರ ನಿರ್ಣಯ. ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ಚದರಡಿ ಒಂದಕ್ಕೆ ಮಾಸಿಕ ರೂ.1/– (ಒಂದು) ರಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪುನರ್ ಪರಿಶೀಲಿಸಿ ಗುತ್ತಿಗೆ ದರವನ್ನು ಪರಿಷ್ಕರಿಸಿ, ಸಭೆಯ ಮುಂದೆ ಮರು ಮಂಡಿಸುವುದೆಂದು ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

***ನಿರ್ಣಯ : ದಿನಾಂಕ : 29–08–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಮಾಸಿಕ ಗುತ್ತಿಗೆ ಮೊತ್ತದಲ್ಲಿ ಶೇಕಡ 80% ರಷ್ಟು ರಿಯಾಯತಿ ನೀಡಿ ಮಾಸಿಕ ಗುತ್ತಿಗೆ ಮೊತ್ತವನ್ನು ನಿಗಧಿ ಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು***

## 31]. ವಿಷಯದ ಸಂಖ್ಯೆ :–ತೆಆಸ್ಥಾಸ/419/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ ಃಜ.ಆ(ಕ)ಪಿಎಸ್ಆರ್(4)63/11–12, ದಿನಾಂಕ ಃ 02–01–2012 ರಲ್ಲಿ ವಿವರಿಸಿರುವಂತೆ, ಪೂಜ್ಯಮಹಾಪೌರರು ಟಿಪ್ಪಣಿ ಬರೆದು ದಿ: ಐ.ಪಿ.ಡಿ. ಸಾಲಪ್ಪ ಸ್ಮಾರಕ ಸಮಿತಿ (ರಿ) ನಂ. 78, 1ನೇ ಮುಖ್ಯರಸ್ತೆ, 7ನೇ ಕ್ರಾಸ್, ಜಗಜೀವನರಾಂ, ನಗರ (ಉತ್ತರ) ಬೆಂಗಳೂರು – 560018 ರವರ ಪತ್ರವನ್ನು ಲಗತ್ತಿಸುತ್ತಾ ಸದರಿಯವರು ಮಹಾನಗರ ಪಾಲಿಕೆಯಲ್ಲಿ ದಿ: ಐ.ಪಿ.ಡಿ. ಸಾಲಪ್ಪರವರ ಪ್ರತಿಮೆ ಸ್ಥಾಪನೆಯಾದ ನಂತರ ಪ್ರತಿ ಸೆಪ್ಟೆಂಬರ್ 14 ರಂದು ಪ್ರತಿ ವರ್ಷ ಅವರ ಜನ್ಮದಿನ ಪರಿನಿರ್ಮಾಣ ದಿನ ಮತ್ತು ವಿಚಾರಧಾರೆಗಳ ಕಾರ್ಯಕ್ರಮಗಳನ್ನು ನಡೆಸುತ್ತಾ ಬರಲಾಗುತ್ತಿದ್ದು, ಈ ಕಾರ್ಯಕ್ರಮಕ್ಕೆ ಶೇ. 22.75 ರ ಅನುದಾನದಡಿಯಲ್ಲಿ ರೂ. 1.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, ಸದರಿಯವರ ಮನವಿಯನ್ನು ಪರಿಗಣಿಸಿ ದಿ: ಐ.ಪಿ.ಡಿ ಸಾಲಪ್ಪರವರ ಪರಿನಿರ್ಮಾಣ ಕಾರ್ಯಕ್ರಮಕ್ಕೆ ರೂ. 1.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಜರೂರು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ಅದರಂತೆ, ದಿ: ಐ.ಪಿ.ಡಿ. ಸಾಲಪ್ಪ ಸ್ಮಾರಕ ಸಮಿತಿ (ರಿ) ರವರಿಗೆ ದಿ: ಐ.ಪಿ.ಡಿ ಸಾಲಪ್ಪರವರ ಪರಿನಿರ್ಮಾಣ ಕಾರ್ಯಕ್ರಮವನ್ನು ಆಯೋಜಿಸುವ ಸಲುವಾಗಿ ಘಟನೋತ್ತರ ಅನುಮೋದನೆಗೆ ಕಾಯ್ದಿರಿಸಿ ಕೊಡುಗೆ ಮತ್ತು ಸಹಾಯಾನುಧಾನ ಲೆಕ್ಕ ಶೀರ್ಷಿಕೆ ಅಡಿ 2011–12 ನೇ ಸಾಲಿಗೆ ರೂ. 50,000/– ಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 02–01–2012 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## 32]. ವಿಷಯದ ಸಂಖ್ಯೆ :–ತೆಆಸ್ಥಾಸ/420/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್ಆರ್(4)37/11–12, ದಿನಾಂಕ ಃ 09–01–2012 ರಲ್ಲಿ ವಿವರಿಸಿರುವಂತೆ, ಪದ್ಮಶ್ರೀ ಡಾ॥ ಬಿ.ಎಲ್.ಎಸ್. ಮೂರ್ತಿ, ಅಧ್ಯಕ್ಷರು, ಅಶಕ್ತ ಪೋಷಕ ಸಭಾ, ಅಶಕ್ತ ಪೋಷಕ ಸಭಾ ರಸ್ತೆ, ವಿ.ವಿ. ಪುರಂ, ಬೆಂಗಳೂರು – 560 004. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ತಮ್ಮ ಸಂಸ್ಥೆಯು ಕಳೆದ 88 ವರ್ಷಗಳಿಂದ ಹಿರಿಯ ನಾಗರೀಕರಿಗೆ ಮತ್ತು ಅನಾಥ ಮಕ್ಕಳಿಗೆ ಉಚಿತ ಊಟ, ವಸತಿ, ಬಟ್ಟೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿದೆ. ಈಗ ತಮ್ಮ ಸಂಸ್ಥೆಯಲ್ಲಿ 169 ಹಿರಿಯ ನಾಗರೀಕರು ಮತ್ತು 50 ಅನಾಥ ಮಕ್ಕಳು ಆಶ್ರಯ ಪಡೆದಿದ್ದಾರೆಂದು, ತಮ್ಮ ಸಂಸ್ಥೆಯಲ್ಲಿರುವ ನಿವಾಸಿಗಳಿಗೆ ಉಪಹಾರ ಮತ್ತು ಕಾಫಿ, ಮಧ್ಯಾಹ್ನ ಭೋಜನ, ಸಂಜೆ ಕಾಪಿ ಮತ್ತು ಲಘು ಉಪಹಾರ ಮತ್ತು ರಾತ್ರಿ ಭೋಜನವನ್ನು ನೀಡಲಾಗುತ್ತದೆ. ಹಿರಿಯ ನಾಗರೀಕರಿಗೆ ಮತ್ತು ಅನಾಥ ಮಕ್ಕಳಿಗೆ ಪ್ರತಿ ವರ್ಷವೂ ಗೌರಿ ಗಣೇಶ ಹಬ್ಬ, ಯುಗಾದಿ ಮತ್ತು ದೀಪಾವಳಿ ಹಬ್ಬದಂದು ಹೊಸ ಬಟ್ಟೆಗಳನ್ನು ವಿತರಿಸಲಾಗುತ್ತದೆ. ನಿವಾಸಿಗಳನ್ನು ಪರಿಶೀಲಿಸಲು ವೈದ್ಯರನ್ನು ಮತ್ತು ದಾದಿಯನ್ನು ನೇಮಿಸಲಾಗಿದ್ದು, ಪ್ರತಿ ದಿವಸ ಎಲ್ಲಾ ನಿವಾಸಿಗಳನ್ನು ಪರಿಶೀಲಿಸಿ ಔಷಧಿಗಳನ್ನು ನೀಡಲಾಗುತ್ತದೆಯೆಂದು

ತಿಳಿಸಿ, 9 ಡಾರ್ಮಿಟರಿ, ಸ್ನಾನಗೃಹ, ಊಟದ ಮನೆ, ಅಡುಗೆ ಮನೆ, ಉಗ್ರಾಣ, ಅಭಯ ಆಂಜನೇಯಸ್ವಾಮಿ ದೇವಸ್ಥಾನ, ಸಭಾಂಗಣ ಮತ್ತು ಎಲ್ಲಾ ಮಹಡಿಗೆ ಹೋಗಿ ಬರಲು ಲಿಫ್ಟ್ ಸೌಲಭ್ಯ, ಸೋಲಾರ್ ವಾಟರ್ ಹೀಟರ್ ಮತ್ತು ಜನರೇಟರ್ ಗಳನ್ನು ಅಳವಡಿಸಲಾಗಿದೆ. ಪ್ರತಿ ನಿವಾಸಿಗೆ ಮಂಚ, ಲಾಕರ್ ಹಾಸಿಗೆ ದಿಂಬು ಬೆಡ್ ಶೀಟ್ ಗಳನ್ನು ನೀಡಲಾಗಿದೆ. ಪ್ರತಿಯೊಂದು ವಾರ್ಡ್ ಶೌಚಾಲಯ ಮತ್ತು ಸ್ನಾನ ಗೃಹಗಳನ್ನು ಒಳಗೊಂಡಿದ್ದು ನಿವಾಸಿಗಳ ಮನರಂಜನೆಗಾಗಿ ಟಿ.ವಿ.ಯನ್ನು ಅಳವಡಿಸಲಾಗಿದೆ. ಪ್ರತಿ ಶನಿವಾರ ಮತ್ತು ಭಾನುವಾರದಂದು ಸಭಾಂಗಣದಲ್ಲಿ ಪುರಾಣ ಪ್ರಸಿದ್ಧವಾದ ಸಿನಿಮಾಗಳನ್ನು ತೋರಿಸಲಾಗುತ್ತದೆ. ಪ್ರತಿ ಸೋಮವಾರ ಮತ್ತು ಬುಧವಾರದಂದು ಹರಿಕಥಾ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ ಮತ್ತು ಪ್ರತಿ ದಿವಸ ಬೆಳಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆಯೆಂದು ತಿಳಿಸುತ್ತಾ, ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಮನ್ನಿಸಿ ಬೆಂಗಳೂರು ಮಹಾನಗರ ಪಾಲಿಕೆಯಿಂದ 2010–11ನೇ ಸಾಲಿನಲ್ಲಿ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಈ ವರ್ಷವೂ ಅಂದೆ 2011–12ನೇ ಸಾಲಿಗೆ 10 ಲಕ್ಷ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ 2010–11 ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (10)** ರಲ್ಲಿ **"ಅಶಕ್ತ ಪೋಷಕ ಸಭಾ, ವಿ.ವಿ. ಪುರಂ"** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 5.00 ಲಕ್ಷಗಳ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 09–01–2012ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಅಶಕ್ತ ಪೋಷಕ ಸಭಾ, ವಿ.ವಿ.ಪುರಂ ರವರಿಗೆ ಸಂಘ ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯ (ಅನುಬಂಧ–2) ಕ್ರಮಸಂಖ್ಯೆ 10ರಲ್ಲಿ ನಿಗಧಿಪಡಿಸಿರುವ ರೂ.5.00 ಲಕ್ಷ (ಐದು ಲಕ್ಷ) ಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***33]. ವಿಷಯದ ಸಂಖ್ಯೆ :–ತೆಆಸ್ಥಾಸ/421/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)132/11–12, ದಿನಾಂಕ : 11–01–2012 ರಲ್ಲಿ ವಿವರಿಸಿರುವಂತೆ, ಶ್ರೀ ಸ್ವಾಮಿ ಸ್ವಾತ್ಮಾರಾಮಾನಂದ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮಂದಿರ, ಗವಿಪುರಂ, ಬೆಂಗಳೂರು – 560 019 ರವರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮಂದಿರದಲ್ಲಿ ಈಗಾಗಲೇ 120 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ವ್ಯಾಸಂಗ ಮಂದಿರದಲ್ಲಿ ನೆಲಸಿ ಊಟ, ವಸತಿ ಊಟ, ವಸತಿ ಸೌಕರ್ಯವನ್ನು ಪಡೆಯುತ್ತಿದ್ದಾರೆ. ಪಿ.ಯು.ಸಿ., ಇಂಜಿನಿಯರಿಂಗ್ ಮೆಡಿಕಲ್ ಮತ್ತು ಇತರೆ ಉದ್ಯೋಗ ಸಂಬಂಧಿತ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನ

ವಿದ್ಯಾರ್ಥಿಗಳು ವಿದ್ಯಾರ್ಥಿ ಮಂದಿರದಲ್ಲಿ ಪ್ರವೇಶವನ್ನು ಕೋರಿ ಮನವಿಗಳನ್ನು ಸಲ್ಲಿಸಿದ್ದಾರೆ. ವಸತಿ ಪ್ರವೇಶವನ್ನು ಕಲ್ಪಿಸಲು ಮೂಲಭೂತ ಸೌಕರ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ಉದ್ದೇಶದಿಂದ ಕೊಠಡಿಗಳ ಸಂಖ್ಯೆಯನ್ನು, ಸ್ನಾನದ ಕೊಠಡಿಗಳನ್ನು ಶೌಚಾಲಯಗಳನ್ನು ಅಡಿಗೆ ಕೋಣೆಗಳನ್ನು ಲೈಬ್ರರಿಯನ್ನು, ಆಟದ ಮೈದಾನವನ್ನು ಆಟದ ಸಾಮಾನುಗಳನ್ನು ಗ್ರಂಥಾಲಯಕ್ಕೆ ಹೊಸ ಪುಸ್ತಕಗಳನ್ನು, Gymnasim ಗಾಗಿ ಕೊಠಡಿಯನ್ನು ಮತ್ತು ಹೊಸ ಸಲಕರಣೆಗಳನ್ನು ಬ್ಯಾಸ್ಕಟ್ ಬಾಲ್ ಮೈದಾನಕ್ಕಾಗಿ, ಪ್ರಾರ್ಥನಾ ಮಂದಿರದ ಕಟ್ಟಡಕ್ಕಾಗಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ದೇಶಗಳಿಗಾಗಿ ಹಾಗೂ ಹಳೇ ಕಟ್ಟಡದ ನವೀಕರಣಕ್ಕಾಗಿ ಅವಶ್ಯಕತೆ ಇರುವ ಕನಿಷ್ಠ 25 ಲಕ್ಷ ರೂ.ಗಳ ಮೊತ್ತ ಅನುದಾನವನ್ನು ಬಿಡುಗಡೆ ಮಾಡಲು ಮನವಿ ಮಾಡಲಾಗಿತ್ತು. ಅದರಂತೆ, 20 ಲಕ್ಷ ರೂ. ಮೊತ್ತವನ್ನು ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ ಹಾಗೂ ಈ ಉದ್ದೇಶಗಳಿಗಾಗಿ ಕಾಯ್ದಿರಿಸಿರುವ ಮೊತ್ತವನ್ನು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮಂದಿರಂ ಗವಿ ಪುರಂ, ಬೆಂಗಳೂರು – 19 ರವರ ಹೆಸರಿನಲ್ಲಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (161) ರಲ್ಲಿ "ಶ್ರೀ ರಾಮಕೃಷ್ಣವಿದ್ಯಾರ್ಥಿ ಮಂದಿರಂ, ಗವಿಪುರಂ, ಬೆಂಗಳೂರು"** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 20.00 ಲಕ್ಷಗಳ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 11–01–2012ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಸಂಸ್ಥೆಗೆ, ಸಂಘ ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯ (ಅನುಬಂಧ–2) ಕ್ರಮಸಂಖ್ಯೆ 161ರಲ್ಲಿ ನಿಗಧಿಪಡಿಸಿರುವ ರೂ.20.00 ಲಕ್ಷ (ಇಪ್ಪತ್ತು ಲಕ್ಷ) ಗಳ ಸಹಾಯಧನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***34]. ವಿಷಯದ ಸಂಖ್ಯೆ :–ತೆಆಸ್ಥಾಸ/422/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)180/11–12, ದಿನಾಂಕ : 11–01–2012ರಲ್ಲಿ ವಿವರಿಸಿರುವಂತೆ, ಕರ್ನಲ್ ಮುಖೇಶ್ ರಾಸ್ಥೋಗಿ, ಕೋಲ್ –ಎ ಹೆಚ್. ಕ್ಯೂ ಕೆ & ಕೆ ಸಬ್ ಏರಿಯಾ, ಕಬ್ಬನ್ ರಸ್ತೆ ಬೆಂಗಳೂರು – 560 001 ರವರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, "ಸದರನ್ ಕಮಾಂಟ್ ಇನ್‌ವೆಸ್ಟಿಟ್ಯೂರ್ ಸೆರ್‌ಮನಿ" ಅನ್ನು ಜನವರಿ 15, 2012 ರಲ್ಲಿ ಇದೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವುದಾಗಿ ತಿಳಿಸಿ, ಈ ಕಾರ್ಯಕ್ರಮದ ಅಂಗವಾಗಿ ನಡೆಯಲಿರುವ ದಿನಾಂಕ 14–01–2012 ರಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿ, ಈ ಕಾರ್ಯಕ್ರಮದಲ್ಲಿ ಹಲವಾರು ಗಣ್ಯ ವ್ಯಕ್ತಿಗಳು ಮತ್ತು ಪ್ರಶಸ್ತಿ ಪುರಸ್ಕೃತರು (ಸೈನಿಕರು) ಭಾಗವಹಿಸುತ್ತಿರುವುದಾಗಿ ತಿಳಿಸಿ, ಈ ಕಾರ್ಯಕ್ರಮದ ಆಚರಣೆಗೆ ರೂ. 1.50,000/– ಗಳ ಸಹಾಯಧನದ ಪ್ರಾಯೋಜಕತ್ವ ವಹಿಸಿಕೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ– 2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪಾಲಿಕೆಯ ಸದ್ಯದ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

*ನಿರ್ಣಯ : ದಿನಾಂಕ : 11–01–2012ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕರ್ನಲ್ ಮುಖೇಶ್ ರವರು ಹಮ್ಮಿಕೊಂಡಿರುವ ಸದರನ್ ಕಮಾಂಟ್ ಇನ್‌ಸ್ಟಿಟ್ಯೂರ್ ಸೆರೆಮನಿ ಎಂಬ ಕಾರ್ಯಕ್ರಮಕ್ಕಾಗಿ ರೂ.1,50,000/– (ಒಂದು ಲಕ್ಷದ ಐವತ್ತು ಸಾವಿರ) ಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.*

## *35]. ವಿಷಯದ ಸಂಖ್ಯೆ :–ತೆಆಸ್ಥಾಸ/423/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)124/11–12, ದಿನಾಂಕ : 11–01–2012 ರಲ್ಲಿ ವಿವರಿಸಿರುವಂತೆ, ಶ್ರೀ ರಂಗಶ್ರೀ ರಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ರಂಗಶ್ರೀ ಕಲಾ ಸಂಸ್ಥೆ (ರಿ) ನಂ. 175, 14ನೇ ಮುಖ್ಯರಸ್ತೆ, 15 'ಇ' ಬಸ್ ನಿಲ್ದಾಣ, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು – 560 078. ರವರು ಮನವಿ ಸಲ್ಲಿಸಿ ರಂಗಶ್ರೀ ಕಲಾ ಸಂಸ್ಥೆಯು 2010–11 ನೇ ಸಾಲಿನಲ್ಲಿ ಈಗಾಗಲೇ "ದಯಾನಂದ ಸಾಗರ್ ಸ್ಮರಣಾರ್ಥ ರಾಜ್ಯ ಮಟ್ಟದ ಸಾಂಸ್ಕೃತಿಕ ರಂಗೋತ್ಸವ, ಸಾಗರ್ ಪ್ರಶಸ್ತಿ, ಡಾ: ಚಂದ್ರಮಮ್ಮ ಸಾಗರ್ ಸ್ತ್ರೀರತ್ನ ಪ್ರಶಸ್ತಿ ಪ್ರಧಾನ ಮತ್ತು ಬಹುಮಾನ ವಿತರಣೆ – ಸಮಾರೋಪ ಸಮಾರಂಭ"ವನ್ನು 15–07–2010 ರಿಂದ 24–07–2010 ರವರಿಗೂ ಅದ್ದೂರಿ ಹಾಗೂ ಯಶಸ್ವಿಯಾಗಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ವರದಿ, ಭಾವಚಿತ್ರ, ಪತ್ರಿಕಾ ವರದಿಗಳನ್ನು ಸಂಸ್ಥೆಯ ನೋಂದಣಿ ಪತ್ರ, ಲೆಕ್ಕ ಪರಿಶೋಧನಾ ವರದಿಗಳನ್ನು ಈಗಾಗಲೇ ಸಲ್ಲಿಸಲಾಗಿದ್ದು, ಸಂಸ್ಥೆಯು 2011–12 ನೇ ಸಾಲಿನಲ್ಲಿ ಇನ್ನೂ ಅನೇಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಉಲ್ಲೇಖಿತ ನಿರ್ಣಯದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಸಭೆಯು ದಿನಾಂಕ 03.09.2011 ರಂದು ವಿಷಯ ಸಂಖ್ಯೆ: 165 ಕ್ರಮ ಸಂಖ್ಯೆ 82 ರಲ್ಲಿ ಅನುಮೋದಿಸಿರುವ ರೂ. 5.00 ಲಕ್ಷ (ಐದು ಲಕ್ಷಗಳು) ಅನುದಾನವನ್ನು ಬಿಡುಗಡೆ ಮಾಡುವುದರ ಮೂಲಕ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ 2010–11 ನೇ ಸಾಲಿನಲ್ಲಿ ರೂ. 2.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ

ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (82) ರಲ್ಲಿ "ರಂಗಶ್ರೀ ಕಲಾ ಸಂಸ್ಥೆ (ರಿ)"** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 5.00 ಲಕ್ಷಗಳ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

*ನಿರ್ಣಯ : ದಿನಾಂಕ : 11–01–2012ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ರಂಗಶ್ರೀ ಕಲಾಸಂಸ್ಥೆ (ರಿ) ರವರಿಗೆ ಸಂಘ ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯದ ಅಂದಾಜುಪಟ್ಟಿ (ಅನುಬಂಧ–2) ಕ್ರಮಸಂಖ್ಯೆ : 82ರಲ್ಲಿ ನಿಗಧಿಪಡಿಸಿರುವ ರೂ.5.00 ಲಕ್ಷ (ಐದು ಲಕ್ಷ) ಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯುತೀರ್ಮಾನಿಸಿತು.*

## *36]. ವಿಷಯದ ಸಂಖ್ಯೆ :–ತೆಆಸ್ಥಾಸ/424/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(4)/ಪಿಆರ್/136/11-12, ದಿನಾಂಕ ಃ 12–01–2012ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಾರೇನಹಳ್ಳಿ ಕೆರೆ ಅಂಗಳ ಜಯನಗರ ನಿವೇಶನ ಸಂಖ್ಯೆ:8ಎ, 10X13 ಅಡಿಗಳ ಸ್ವತ್ತು ಶ್ರೀ ರೋಸಪ್ಪ ಬಿನ್ ಬೊಮ್ಮರಾಜುರವರಿಗೆ ಹಾಲಿ ಮಾರುಕಟ್ಟೆ ದರದಂತೆ ಕ್ರಯಕ್ಕೆ ನೀಡಲು ಆದೇಶವಾಗಿದ್ದು, ಕ್ರಯದ ಮೊತ್ತ ರಿಯಾಯಿತಿ ದರದಲ್ಲಿ ನಿಗಧಿಪಡಿಸುವ ವಿಷಯವಾಗಿರುತ್ತದೆ.

ಶ್ರೀ ರೋಸಪ್ಪ ಬಿನ್ ಬೊಮ್ಮರಾಜು ರವರು ಮನವಿ ಸಲ್ಲಿಸಿ, ಈ ಸ್ವತ್ತಿನಲ್ಲಿ ಸುಮಾರು 40 ವರ್ಷಗಳಿಂದ ವಾಸಿಸುತ್ತಿದ್ದು, ಈ ಸ್ವತ್ತಿಗೆ ಕ್ರಯಪತ್ರ ನೀಡಲು ಕೋರಲಾಗಿ, ಹಾಲಿ ಮಾರುಕಟ್ಟೆ ದರದಂತೆ, ಹಣ ಪಾವತಿಸಿ ಕ್ರಯಪತ್ರ ನೀಡಲು ಸರ್ಕಾರಿ ಆದೇಶವಾಗಿರುವುದಾಗಿ ತಿಳಿಸಿ, 2004ರ ಮಾರುಕಟ್ಟೆ ದರದಂತೆ ಚದರಡಿ 1ಕ್ಕೆ 800/–ರೂ.ರಂತೆ 1,04,000/–ರೂ. ಪಾವತಿಸುವಂತೆ ತಿಳಿಸಿರುತ್ತಾರೆ. ಆದರೆ, ನಾನು ವೃದ್ಧ ಹರಿಜನ ಆಗಿದ್ದು, ಈ ಪ್ರದೇಶದಲ್ಲಿ 1976ರಲ್ಲಿ ಆದೇಶವಾಗಿರುವಂತೆ 112/–ರೂ. ನಿಗಧಿಪಡಿಸಿ ನಿವೇಶನ ಸಕ್ರಮಗೊಳಿಸಲು ಕೋರಿರುತ್ತಾರೆ.

ವಲಯಾಧಿಕಾರಿಗಳು ಶ್ರೀ ರೋಸಪ್ಪರವರಿಗೆ ದಿನಾಂಕ:05–12–2003ರ ಸರ್ಕಾರಿ ಆದೇಶದಲ್ಲಿ ಹಾಲಿ ಮಾರುಕಟ್ಟೆ ದರದಲ್ಲಿ ನಿವೇಶನವನ್ನು ಕ್ರಯಕ್ಕೆ ನೀಡಲು ಆದೇಶವಾಗಿದ್ದು, ಅದರಂತೆ, 2004 ರಲ್ಲಿ 1,04,000/– ರೂ. ಹಣ ಪಾವತಿಸುವಂತೆ ಹಿಂಬರಹ ನೀಡಲಾಗಿದ್ದು, ಅರ್ಜಿದಾರರು ಹಣ ಪಾವತಿ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅರ್ಜಿದಾರರು ಪರಿಶಿಷ್ಟ ಜಾತಿಯವರಾಗಿರುವುದರಿಂದ, ರಿಯಾಯಿತಿ ದರದಲ್ಲಿ ಪರಿಗಣಿಸಲು ಸ್ಥಾಯಿಸಮಿತಿ ನಿರ್ಣಯಕ್ಕೆ ಟಿಪ್ಪಣಿ ಮಂಡಿಸಲು ಅಭಿಪ್ರಾಯಿಸಲಾಗಿರುತ್ತದೆ.

ಈ ಮೇಲ್ಕಂಡ ಹಿನ್ನೆಲೆಯಲ್ಲಿ ಶ್ರೀ ರೋಸಪ್ಪ ರವರಿಗೆ ಸ್ವತ್ತಿನ ಕ್ರಯದ ಮೊತ್ತ ಕಡಿಮೆ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಮುಂದೆ ಸಮಿತಿ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 12–01–2012ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಸ್ವತ್ತನ್ನು ಸರ್ಕಾರದ ಆದೇಶದಂತೆ 2004ರ ಮಾರುಕಟ್ಟೆ ದರದಲ್ಲಿ ಚದರಡಿ ಒಂದಕ್ಕೆ ರೂ.800/– ರಂತೆ ಕ್ರಯಕ್ಕೆ ನೀಡುವುದು ಸೂಕ್ತವಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು***

## *37]. ವಿಷಯದ ಸಂಖ್ಯೆ :–ತೆಆಸ್ಥಾಸ/425/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಉ.ಆ(ಮಾ)ಪಿಆರ್/854/11–12, ದಿನಾಂಕ ಃ 12–01.2012 ರಲ್ಲಿ ವಿವರಿಸಿರುವಂತೆ, ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದ (ಪಿ.ಯು.ಬಿ) 21ನೇ ಅಂತಸ್ತಿನಲ್ಲಿರುವ ಸಿಮ್ಯಾಕ್ ಸಂಸ್ಥೆಗೆ 1700 ಚದರ ಅಡಿಯುಳ್ಳ ಜಾಗವನ್ನು ತಿಂಗಳ ಪರವಾನಗಿ ಶುಲ್ಕದ ಆಧಾರದ ಮೇಲೆ ಚದರಡಿ 1ಕ್ಕೆ ರೂ.10/– ರಂತೆ ಹಂಚಿಕೆ ಮಾಡಲಾಗಿತ್ತು. ನಂತರ ಮಾನ್ಯ ಆಡಳಿತಗಾರರರ ನಿರ್ಣಯ ಸಂಖ್ಯೆ :23/07–08, ದಿನಾಂಕ : 02–07–2007 ರಂತೆ ಚದರಡಿ 01ಕ್ಕೆ ರೂ.15/– ರಂತೆ ಪರಿಷ್ಕರಿಸಿ ವಾರ್ಷಿಕ ಶೇ.15/– ರಂತೆ ನವೀಕರಿಸಿ ದರವನ್ನು 01–04–2006 ರಿಂದ ಜಾರಿಗೆ ಬರುವಂತೆ ನಿಗಧಿಪಡಿಸಲಾಗಿರುತ್ತದೆ. ಅದರಂತೆ ಸದರಿ ಸಂಸ್ಥೆಯವರು ಹೊಸ ದರದಲ್ಲಿ 2006–07 ರಿಂದ 2007–08 ರವರೆಗೆ ಪರವಾನಗಿ ಶುಲ್ಕವನ್ನು ಪಾವತಿಸಿದ್ದು, 2008–09 ರಿಂದ ಹೊಸ ದರದಲ್ಲಿ ಪಾವತಿಸಿರುವುದಿಲ್ಲ.

ಮುಂದುವರೆದಂತೆ, ಈ ಬಗ್ಗೆ ಸದರಿ ಸಂಸ್ಥೆಯವರು ಪತ್ರ ವ್ಯವಹಾರವನ್ನು ನಡೆಸಲಾಗಿ ಕಡತವನ್ನು ಪರಿಶೀಲಿಸಿ. ಬಾಕಿ ಮೊತ್ತವನ್ನು ಪಾವತಿಸಲು ಕಡತದ ಕಂಡಿಕೆ (30) ರಲ್ಲಿ ಅನುಮೋದಿಸಲಾಗಿರುತ್ತದೆ. ತದನಂತರ ಸ.ಕಂ.ಅ(ಪೂ) ಮಾರುಕಟ್ಟೆ ಕಛೇರಿಯಿಂದ ಸದರಿ ಸಂಸ್ಥೆಯವರಿಗೆ ಹಿಂಬರಹ ಜಾರಿಗೊಳಿಸಿ ಬಾಕಿ ಪರವಾನಗಿ ಶುಲ್ಕವನ್ನು 7 ದಿವಸಗಳೊಳಗಾಗಿ ಪಾವತಿಸಲು ಸೂಚಿಸಲಾಗಿರುತ್ತದೆ. ಅದರಂತೆ ಸದರಿಯವರು, ದಿನಾಂಕ : 29–07–2010 ರಂದು ಒಂದು ಪತ್ರವನ್ನು ನೀಡಲಾಗಿ, ಸದರಿ ಪತ್ರದೊಂದಿಗೆ ಮಹಾನಗರ ಪಾಲಿಕೆಯ "ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ದಿನಾಂಕ : 28–06–2010 ರಂದು ನಡೆದ ಸಭೆಯಲ್ಲಿ ಸದರಿ ಸಂಸ್ಥೆಯ ದಿನಾಂಕ : 01–04–2008 ರಿಂದ 31–05–2010 ರವರೆಗೆ ಬಾಕಿ ಇರುವ ಮೊತ್ತವನ್ನು ಪಾಲಿಕೆಯಿಂದ ಸಂಸ್ಥೆಗೆ ನೀಡಲಾದ ಒಂದು ಬಾರಿಯ ಅನುದಾನವೆಂದು ಪರಿಗಣಿಸಿ ದಿನಾಂಕ : 01–06–2010 ರಿಂದ ತಿಂಗಳ ಪರವಾನಗಿ ಶುಲ್ಕವನ್ನು ಪಾವತಿಸಬಹುದಾಗಿದೆಯೆಂದು ತೀರ್ಮಾನಿಸಲಾಗಿರುವ ನಡವಳಿಯ ಪ್ರತಿಯನ್ನು ನೀಡಿರುತ್ತಾರೆ. (ಪತ್ರವನ್ನು ಪುಟ ಸಂಖ್ಯೆ : 84 ರಿಂದ 90ರಲ್ಲಿ ಲಗತ್ತಿಸಿದೆ)" ಹಾಗೂ ದಿನಾಂಕ : 01–06–2010ರಿಂದ ಇಲ್ಲಿಯವರೆವಿಗೂ ಪರವಾನಗಿ ಶುಲ್ಕ ಪಾವತಿಸಿರುವುದಿಲ್ಲ.

ಆದ್ದರಿಂದ, ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಸಂಸ್ಥೆಯವರು ಕಡತದ ಪುಟ ಸಂಖ್ಯೆ : 93 ರಲ್ಲಿ ಲಗತ್ತಿಸಿರುವ ಬಾಕಿ ಪಟ್ಟಿಯಂತೆ ದಿ : 01–04–2008 ರಿಂದ 31–05–2010 ರವರೆಗೆ ಒಟ್ಟು ಬಾಕಿ ರೂ.12,94,485/– ಗಳ ಮೊತ್ತವನ್ನು ಪಾಲಿಕೆಯಿಂದ ಸಂಸ್ಥೆಗೆ ನೀಡಲಾದ ಒಂದು ಬಾರಿಯ ಅನುದಾನವೆಂದು ಪರಿಗಣಿಸಬೇಕೆ ಎಂಬುದರ ಬಗ್ಗೆ ಆದೇಶ ಕೋರಿ ತೆರಿಗೆ ಮತ್ತು ಆಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 12–01–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಯು ಬಾಕಿ ಉಳಿಸಿಕೊಂಡಿರುವ ಪರವಾನಿಗೆ ಶುಲ್ಕವನ್ನು ಪಾಲಿಕೆಯ ಆರ್ಥಿಕ ಪರಿಸ್ಥಿತಿಯ ಹಿತದೃಷ್ಟಿಯಿಂದ ವಸೂಲಿ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***38]. ವಿಷಯದ ಸಂಖ್ಯೆ :–ತೆಆಸ್ಥಾಸ/426/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/44/11–12, ದಿನಾಂಕ : 28–09–2011ರಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:109 (28), ನಗರ ಪಾಲಿಕೆಯ ಪ್ರೌಢಶಾಲೆ ಆವರಣದಲ್ಲಿ ಕಾಶಿವಿಶ್ವೇಶ್ವರ ದೇವಸ್ಥಾನದ ರಸ್ತೆ ಬಳಿ 6*10=60ಚ. ಅಡಿಗಳ ಜಾಗವನ್ನು ಶ್ರೀ. ಲೋಕೇಶ್ ಸಂಪಾದಕರು, ಸಿಟಿ ಪೋಲೀಸ್ ನ್ಯೂಸ್ ಪತ್ರಿಕೆಯವರಿಗೆ ರೂ.400–00ಗಳ ಮಾಸಿಕ ಗುತ್ತಿಗೆ ದರದ ಆಧಾರದ ಮೇಲೆ ದಿನಾಂಕ:17–09–1997 ರಿಂದ 3 ವರ್ಷಗಳ ಅವಧಿಗೆ ಗುತ್ತಿ ನೀಡಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ: 16–09–2000ರಂದು ಮುಗಿದಿರುತ್ತದೆ.

ಸದರಿ ಗುತ್ತಿಗೆದಾರರು ಬಾಕಿ ಇರುವ ಗುತ್ತಿಗೆ ಮೊಬಲಗನ್ನು ರೂ.29,200–00ಗಳ ರಸೀದಿ ಸಂಖ್ಯೆ:010607, ದಿನಾಂಕ 31–12–2003 ಹಾಗೂ 2,400–00 ರಸೀದಿ ಸಂಖ್ಯೆ:06–05–2004 ಏಪ್ರಿಲ್– 04 ರ ಮಾಹೆಯವರೆಗೂ ಪಾವತಿ ಮಾಡಿರುತ್ತಾರೆ. ಹಾಗೂ ದಿನಾಂಕ: 14–09–2011ರಂದು ಅಧ್ಯಕ್ಷರು ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಸದರಿ ಗುತ್ತಿಗೆ ಅವಧಿಯನ್ನು ಮತ್ತೆ 5 ವರ್ಷಗಳ ಅವಧಿಗೆ ನವೀಕರಿಸುವಂತೆ ಶಿಫಾರಸ್ಸು ಪತ್ರ ನೀಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 6X10=60 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ : 17–04–2007ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ. 2700/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 2700X60=1,62,000/– ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ. 16,200/–ಗಳಾಗಲಿದ್ದು, ಮಾಸಿಕ ಗುತ್ತಿಗೆ ರೂ. 1,350/– ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ, ಸಿಟಿ ಪೋಲೀಸ್ ನ್ಯೂಸ್ ಪತ್ರಿಕೆಯ ಸಂಪಾದಕರಾದ ಶ್ರಿ ಲೋಕೇಶ್ ರವರು ದಿನಾಂಕ: 28–04–2004ರಂದು ಮರಣ ಹೊಂದಿದ್ದು, ಇವರ ಮರಣಾನಂತರ ಸದರಿ ಪತ್ರಿಕೆಯನ್ನು ಗೌರವ ಸಂಪಾದಕರಾದ ಶ್ರೀ ಪಿ. ರಮೇಶ್ ರವರು ನಿರ್ವಹಿಸುತ್ತಿರುವುದರಿಂದ ಪ್ರಸ್ತಾವನೆಯಲ್ಲಿರುವ ಸ್ವತ್ತಿನ ಗುತ್ತಿಗೆ ಅವಧಿಯನ್ನು 5 ವರ್ಷಗಳ ಅವಧಿಗೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 08–11–2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 08–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಇಲ್ಲಿಯವರೆವಿಗೂ ಮಾಸಿಕ ಗುತ್ತಿಗೆ ಮೊತ್ತ ರೂ.400/– ಗಳಂತೆ ಹಾಗೂ ಇನ್ನೂ ಮುಂದೆ ಗುತ್ತಿಗೆ ಕರಾರು ನೊಂದಾಯಿಸಿದ ದಿನಾಂಕದಿಂದ ಮಾಸಿಕ ರೂ.650/– ಗಳಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***39]. ವಿಷಯದ ಸಂಖ್ಯೆ :–ತೆಆಸ್ಥಾಸ/427/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)126/11–12, ದಿನಾಂಕ : 19–01–2012 ರಲ್ಲಿ ವಿವರಿಸಿರುವಂತೆ, ಶ್ರೀ ಎಂ.ಬಿ. ನರಸಿಂಹನ್, ಟ್ರಸ್ಟಿ, ಸಂಗೀತ ಸಂಭ್ರಮ (ರಿ), ಎ–208, ಕಸ್ತೂರಿಧಾಮ ಅಪಾರ್ಟ್‌ಮೆಂಟ್, 8ನೇ ಮುಖ್ಯರಸ್ತೆ, 9ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 003. ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, “ಸಂಗೀತ ಸಂಭ್ರಮ” ಇದೊಂದು ಸಂಗೀತ ಹಾಗೂ ನೃತ್ಯ ಸಂಸ್ಥೆ, ಬೆಂಗಳೂರು. ಕಳೆದ 4 ದಶಕಗಳಿಂದ ಸಾಂಸ್ಕೃತಿಕ ಕಲೆ, ಸಂಗೀತ ಹಾಗೂ ನೃತ್ಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದು, ಕಾರ್ಯಕ್ರಮಗಳು, ಪ್ರಕಟಣೆಗಳು, ವಿಷಯಾಧಾರಿತ ನೃತ್ಯ ಹಾಗೂ ಸಂಗೀತದ

ಉಪನ್ಯಾಸಗಳು ಮತ್ತು ದೇಶದ ಪ್ರತಿಭಾವಂತ ಸಂಗೀತಗಾರರಿಗೆ ಮತ್ತು ನೃತ್ಯ ಪಟುಗಳಿಗೆ ಅವಕಾಶ ಕಲ್ಪಿಸುತ್ತಾ ಹಾಗೂ ಇತರೆ ಸಂಬಂಧಿತ ಕಾರ್ಯಕ್ರಮಗಳನ್ನು ನಿರಂತರವಾಗಿ ಬೆಂಗಳೂರು ನಗರದ್ಯಾಂತ ಸ್ವಂತ ವೆಚ್ಚದಲ್ಲಿ ಸಂಸ್ಥೆಯು ಆಯೋಜಿಸಿಕೊಂಡು ಬಂದಿರುತ್ತದೆಂದು ಇಷ್ಟಲ್ಲದೆ, ಬುದ್ಧಿಮಾಂದ್ಯ ಮತ್ತು ಅಂಗವಿಕಲರಿಗೆ ವಿಶೇಷ ವೇದಿಕೆಯನ್ನು ಏರ್ಪಡಿಸಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಸಂಗೀತ ಸಂಭ್ರಮ ದವರು ನಿರಂತರಮ್ ಎನ್ನುವ ಹೆಸರಿನಿಂದ ಸಂಗೀತ ಹಾಗೂ ನೃತ್ಯ ಕುರಿತಾದ ಕಾರ್ಯಕ್ರಮವನ್ನು ನಗರದಲ್ಲಿ ಪ್ರತಿ ವರ್ಷವು ಸಹಸ್ರಾರು ಜನರ ಮೆಚ್ಚುಗೆಗೆ ಪಾತ್ರರಾಗಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದು. ಹಾಗೂ ಅದರಂತೆಯೇ ಬರುವ ದಿನಾಂಕ 4 ರಿದ 10 ರವರೆಗೆ ಜನವರಿ 2012 ರಲ್ಲಿ ನಡೆಸಲು ಉದ್ದೇಶಿಸಿದ್ದು, ಈ ಸಮಾರಂಭವನ್ನು ಕಲಾಸಕ್ತರಿಗೆ ತಲುಪಿಸುತ್ತಿರುವ ಸಂಗೀತ ಸಂಭ್ರಮ ಸಂಸ್ಥೆಗೆ ಮತ್ತಷ್ಟು ಬಲಗೊಳ್ಳಲು ಆರ್ಥಿಕ ನೆರವಿನ ಅಗತ್ಯವಿರುತ್ತದೆ. ಕಾರ್ಯಕ್ರಮದ ವಿವರವನ್ನು ಲಗತ್ತಿಸಲಾತದೆ. ತಾವು ಈ ದಿಶೆಯಲ್ಲಿ ಕಲೆಯ ಯೋಜನೆಗಳಿಗೆ ರೂ. 14.00 ಲಕ್ಷಗಳ ಅನುದಾನವನ್ನು ಪಾಲಿಕೆ ವತಿಯಿಂದ ನೀಡಿ ಪ್ರೋತ್ಸಾಹಿಸಬೇಕೆಂದು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ಸದರಿಯವರಿಗೆ 2010-11 ನೇ ಸಾಲಿನಲ್ಲಿ ರೂ. 2.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಸದರಿ ಸಂಸ್ಥೆಗೆ 2010-11 ನೇ ಸಾಲಿನಲ್ಲಿ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12 ರಂತೆ 185 ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (184) ರಲ್ಲಿ "**ಸಂಗೀತ ಸಂಭ್ರಮ (ರಿ)", ರವರಿಗೆ ನಿಗಧಿ ಪಡಿಸಲಾಗಿರುವ **ರೂ. 2.00 ಲಕ್ಷಗಳ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 19-01-2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ, ಸಂಘ ಸಂಸ್ಥೆಗಳಿಗೆ 2011-12ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿಯ (ಅನುಬಂಧ-2) ಕ್ರಮಸಂಖ್ಯೆ : 184 ರಲ್ಲಿ ನಿಗಧಿಪಡಿಸಿರುವ ರೂ.2.00 ಲಕ್ಷ (ಎರಡು ಲಕ್ಷ) ಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***401. ವಿಷಯದ ಸಂಖ್ಯೆ :-ತೆಆಸ್ಥಾಸ/428/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)118/11-12, ದಿನಾಂಕ : 19-01-2012 ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ಎಂ. ಕೃಷ್ಣ ನಿರ್ಮಾಪಕ ಮತ್ತು ನಿರ್ದೇಶಕರು, ವರ್ಷಾ ಕ್ರಿಯೇಷನ್ಸ್ ನಂ. 2935, 2ನೇ 'ಎ' ಮುಖ್ಯರಸ್ತೆ, 1ನೇ ಮಹಡಿ ಕೆ.ಆರ್. ರಸ್ತೆ, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು – 560 070 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಡಾ॥ ವಿಷ್ಣುವರ್ಧನ್ ಚಲನಚಿತ್ರೋತ್ಸವವನ್ನು ಸೆಪ್ಟೆಂಬರ್ 18, 19, 20 ರಂದು 3 ದಿನಗಳ ಕಾಲ ಸುಚಿತ್ರ ಫಿಲಂ ಸೊಸೈಟಿಯಲ್ಲಿ ಡಾ॥ ವಿಷ್ಣುವರ್ಧನ್ ಚಲನಚಿತ್ರೋತ್ಸವವನ್ನು ನಮ್ಮ ನಾಡಿನ ಗಣ್ಯರ ಮುಖಂಡತ್ವದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಸೆಪ್ಟೆಂಬರ್ 18 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಅಮೋಘವಾಗಿ ವಿಷ್ಣು ಚಿತ್ರಹಬ್ಬದ ಉಧ್ಘಾಟನೆ ನಡೆದಿದ್ದು, ಇದೇ ಸಂದರ್ಭದಲ್ಲಿ ವಿಚಾರ ಸಂಕಿರಣ

ಹಾಗೂ ವಿಷ್ಣು ಅವರ ಸಾಕ್ಷ್ಯಚಿತ್ರವನ್ನ ಜೊತೆಗೆ ಅವರು ಅಭಿನಯಿಸಿದ ಉತ್ತಮ ಚಿತ್ರಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ಪ್ರದರ್ಶನ ಮಾಡಲಾಗಿದ್ದು, ಈ ಚಿತ್ರೋತ್ಸವಕ್ಕೆ ಈಗಾಗಲೇ ರೂ. 25.00 ಲಕ್ಷಗಳು ಖರ್ಚಾಗಿದ್ದು, ಮಾನ್ಯ ಸಚಿವರಾದ ಆರ್. ಅಶೋಕ್ ಗೃಹಮಂತ್ರಿಗಳು ಹಾಗೂ ಪೂಜ್ಯ ಮಹಾಪೌರರು ತಮಗೆ ಈ ಕಾರ್ಯಕ್ರಮಕ್ಕೆ ರೂ. 10.00 ಲಕ್ಷಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬಿಡುಗಡೆ ಮಾಡಲು ಸೂಚಿಸಿರುತ್ತಾರೆಂದು ತಿಳಿಸಿ, ದಯಮಾಡಿ ರೂ.. 5.00 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಶ್ರೀ ಆರ್. ಅಶೋಕ, ಮಾನ್ಯ ಗೃಹ ಮಂತ್ರಿಗಳು ಟಿಪ್ಪಣಿ ಬರೆದು ಸದರಿಯವರಿಗೆ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲು ಸೂಚಿಸಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (162) ರಲ್ಲಿ "ವರ್ಷಾ ಕ್ರಿಯೇಷನ್ಸ್, ಬೆಂಗಳೂರು"** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 5.00 ಲಕ್ಷಗಳ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 19–01–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ, ಸಂಘ ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿಯ (ಅನುಬಂಧ–2) ಕ್ರಮಸಂಖ್ಯೆ : 162 ರಲ್ಲಿ ನಿಗಧಿಪಡಿಸಿರುವ ರೂ.5.00 ಲಕ್ಷ (ಐದು ಲಕ್ಷ) ಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *41]. ವಿಷಯದ ಸಂಖ್ಯೆ :–ತೆಆಸ್ಥಾಸ/429/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)163/11–12, ದಿನಾಂಕ : 19–01–2012ರಲ್ಲಿ ವಿವರಿಸಿರುವಂತೆ, ಶ್ರೀ ವೈ.ಕೆ. ಮುದ್ದುಕೃಷ್ಣ, ಅಧ್ಯಕ್ಷರು, ಕರ್ನಾಟಕ ಸುಗಮ ಸಂಗೀತ ಪರಿಷತ್ತು (ರಿ), ನಂ. 10, 37 ನೇ ಅಡ್ಡರಸ್ತೆ, 8ನೇ ಬಡಾವಣೆ, ಬೆಂಗಳೂರು – 560 070 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಸುಗಮ ಸಂಗೀತವು ಕಾವ್ಯಗಾಯನದ ಒಂದು ಪದ್ಧತಿಯಾಗಿದ್ದು, ಏಳು ದಶಕಗಳ ಇತಿಹಾಸವನ್ನು ಹೊಂದಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಮಾದರಿಯಲ್ಲಿಯೆ ಸುಗಮ ಸಂಗೀತವೂ ಕೂಡ ಕಾವ್ಯ ಪ್ರಚಾರಕ್ಕೆ ತನ್ನದೆ ಆದ ಪಾತ್ರವನ್ನು ವಹಿಸುವುದರ ಮೂಲಕ ಪ್ರಸ್ತುತ ಅತ್ಯಂತ ಜನಪ್ರಿಯತೆಯನ್ನು ಗಳಿಸಿಕೊಂಡಿದೆ. ಸುಗಮ ಸಂಗೀತ ಪರಿಷತ್ತು ಸ್ಥಾಪನೆಯಾಗಿದೆ. ಕಾವ್ಯ ಗಾಯನದ ಬಗ್ಗೆ ವಿಚಾರ ಸಂಕಿರಣಗಳು, ಕವಿ ಗೋಷ್ಟಿಗಳು, ಗೀತ ಗಾಯನ ಕಾರ್ಯಕ್ರಮಗಳು, ತರಬೇತಿ ಶಿಬಿರಗಳು, ಹಾಗೂ ಸಾಹಿತ್ಯ ಸಮ್ಮೇಳನಗಳ ಮಾದರಿಯಲ್ಲಿಯೆ ರಾಜ್ಯ ಮಟ್ಟದ ಸುಗಮ ಸಂಗೀತ ಸಮ್ಮೇಳನಗಳನ್ನು ಹಮ್ಮಿಕೊಳ್ಳುವುದು ಪರಿಷತ್ತಿನ ಮುಖ್ಯ ಉದ್ದೇಶಗಳೆಂದು, ಈಗಾಗಲೇ 2003 ರಲ್ಲಿ ಮಂಡ್ಯ, 2004 ರಲ್ಲಿ ಶಿವಮೊಗ್ಗ, 2005 ರಲ್ಲಿ ಚಿಕ್ಕಮಗಳೂರು, 2006 ರಲ್ಲಿ ಬಳ್ಳಾರಿಯಲ್ಲಿ, 2007 ರಲ್ಲಿ ಹಾಸನದಲ್ಲಿ, 2008 ರಲ್ಲಿ ಮಂಗಳೂರಿನಲ್ಲಿಯೂ, 2009 ರಲ್ಲಿ ತುಮಕೂರಿನಲ್ಲಿಯೂ ಹಾಗೂ 2011 ರಲ್ಲಿ ಮೈಸೂರಿನಲ್ಲಿಯೂ ಸುಗಮ ಸಂಗೀತ ಸಮ್ಮೇಳನಗಳನ್ನು ನಡೆಸಲಾಗಿದೆ. ಇದುವರೆಗೂ ಹಮ್ಮಿಕೊಂಡಿರುವ ಪ್ರತಿಯೊಂದು ಸಮ್ಮೇಳನಕ್ಕೂ ತಲಾ 10 ರಿಂದ 15 ಲಕ್ಷ ರೂ.ಗಳ ವೆಚ್ಚ ಬಂದಿದೆ. ಪರಿಷತ್ತಿಗೆ ಯಾವುದೇ ಆದಾಯದ ಮೂಲಗಳಿರುವುದಿಲ್ಲ. ಕರ್ನಾಟಕ ಸರ್ಕಾರ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದಿಂದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಕಳೆದ ಐದು ವರ್ಷಗಳಿಂದಲೂ ಮಹಾನಗರ ಪಾಲಿಕೆಯು ಧನ ಸಹಾಯ ನೀಡುವುದರ ಮೂಲಕ ಪರಿಷತ್ತಿನ ಚಟುವಟಿಕೆಗಳಿಗೆ ಕೈ ಜೋಡಿಸಿದೆ. 2010 ನೇ ಸಾಲಿನಲ್ಲಿ ಮಹಾನಗರ ಪಾಲಿಕೆ ವತಿಯಿಂದ 2.00 ಲಕ್ಷ ರೂ. ಗಳ ಧನ ಸಹಾಯ ಪಡೆದುಕೊಳ್ಳಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಹಲವಾರು ಮಹತ್ವದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಆದುದರಿಂದ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ

ಅನುಕೂಲವಾಗುವಂತೆ ಈ ಸಾಲಿನಲ್ಲಿ ಕನಿಷ್ಠ 10.00 ಲಕ್ಷ ರೂ.ಗಳನ್ನು ಧನ ಸಹಾಯದ ರೂಪದಲ್ಲಿ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿನಲ್ಲಿ ರೂ. 2.00 ಲಕ್ಷಗಳ ಸಹಾಯಧನ / ಅನುದಾನ ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ– 2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪಾಲಿಕೆಯ ಸದ್ಯದ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 19–01–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.5,00,000/– (ಐದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## *421. ವಿಷಯದ ಸಂಖ್ಯೆ :–ತೆಆಸ್ಥಾಸ/430/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ದಿನಾಂಕ 12–01–2012ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಟ್ಟು 8 ವಲಯಗಳನ್ನಾಗಿ ವಿಂಗಡಿಸಿದ್ದು, ಇದರ ವ್ಯಾಪ್ತಿಯು ಈ ಹಿಂದೆ ಇದ್ದ ಸುಮಾರು 225 ಚ.ಕಿ.ಮೀ. ನಿಂದ 800 ಚ.ಕಿ.ಮೀ. ನಷ್ಟು ವ್ಯಾಪ್ತಿಗೆ ವಿಸ್ತರಿಸಲಾಗಿದೆ. ನಗರದ ಜನಸಂಖ್ಯೆಯು ಸಹ ಅಧಿಕವಾಗಿದ್ದು, ವಾಹನಗಳು ಸಹ ಹೆಚ್ಚಿರುತ್ತವೆ. ಇತ್ತೀಚಿನ ವರ್ಷಗಳಲ್ಲಿ ನಗರವು ನಿರಂತರವಾಗಿ ಬೆಳೆಯುತ್ತಿದ್ದು, ನಗರದ ಹೊರವಲಯದಲ್ಲಿ ಅನೇಕ ಕೈಗಾರಿಕೆ, ವಾಣಿಜ್ಯ ಹಾಗೂ ಮಾಹಿತಿ ತಂತ್ರಜ್ಞಾನದ ಕೇಂದ್ರಗಳು ನಿರ್ಮಾಣಗೊಂಡಿರುತ್ತವೆ. ಇವುಗಳಿಂದ ನಗರದ ವಾಹನ ಸಂಖ್ಯೆಯು ಕೂಡಾ ಸತತವಾಗಿ ಹೆಚ್ಚುತ್ತಿದ್ದು, ಈ ವಾಹನಗಳ ಪೈಕಿ ದ್ವಿಚಕ್ರವಾಹನಗಳು ಹೆಚ್ಚಾಗಿದ್ದು ಇತ್ತೀಚೆಗೆ ಕಾರುಗಳು ಹಾಗೂ ಇತರೆ ವಾಹನಗಳ ಸಂಖ್ಯೆಯೂ ಸಹ ಅತೀ ವೇಗವಾಗಿ ಹೆಚ್ಚುತ್ತಿದೆ. ಹಾಲಿ ಇರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳ ಹತ್ತಿರ ವಾಹನ ದಟ್ಟಣೆ ಹೆಚ್ಚಾಗುತಿದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ. ಆದ್ದರಿಂದ ವಾಹನಗಳು ಸರಾಗವಾಗಿ ಸಂಚರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಕೆಲವು ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳ ಹತ್ತಿರ ರಸ್ತೆ ಮೇಲುಸೇತುವೆ/ರಸ್ತೆ ಕೆಳಸೇತುವೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ರಸ್ತೆ ಕೆಳಸೇತುವೆ/ರಸ್ತೆ ಮೇಲು ಸೇತುವೆ ಕಾಮಗಾರಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗು ನೈರುತ್ಯ ರೈಲ್ವೆ ಇಲಾಖೆ ವತಿಯಿಂದ ಜಂಟಿಯಾಗಿ ನಿರ್ಮಾಣ ಮಾಡಲಾಗುತ್ತಿದ್ದು, ನೈರುತ್ಯ ರೈಲ್ವೆ ಇಲಾಖೆಯವರು ಕಾಮಗಾರಿಗಳನ್ನು ಪ್ರಾರಂಭಿಸಲು ಪಾಲಿಕೆವತಿಯಿಂದ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಈಗ ಪ್ರಸ್ತಾವನೆಯಲ್ಲಿರುವ ಕಾಮಗಾರಿಗಳಿಗೆ ಅವಶ್ಯಕವಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ. ಉದ್ದೇಶಿಸಲಾಗಿರುವ ಆರ್.ಓ.ಬಿ/ಆರ್.ಯು.ಬಿಗಳ ವಿವರ ಮತ್ತು ಪ್ರತಿ ಯೋಜನೆಗೆ ಬೇಕಾಗುವ ಸ್ವತ್ತುಗಳ ವಿವರ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಕಾಮಗಾರಿಯ ಸ್ಥಳ | ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವ ಸ್ವತ್ತುಗಳ ಒಟ್ಟು ವಿಸ್ತೀರ್ಣ(ಚ.ಮೀ.ಗಳಲ್ಲಿ) |
|---|---|---|---|
| 1 | Construction of RUB in lieu of L.C No 134B at Railway Km 343/000-100 at K.R .Puram near FCI Godown. | off K.R.Puram cable stayed bridge,adj to FCI Godown,Vijinapura village. | 997.00 |
| 2 | Construction of ROB at L.C No 136A at Railway Km 345/800-900 at Baippanahalli. | off Old madras road,adj to old Bayappanahalli and Jeevanahalli main road | 4396.00 |
| 3 | Yeshwanthpura- Yelahanka section-Constructing Road Under Bridge in lieu of LC No. 11 at km 15/700-800 between Yeshwanthpur-Yelahanka stations near Allalasandra | at intersection of Railway gate and B.I.A.L.Road and yelahanka road.and judicial layout. | 1716.61 |
| 4 | Construction of ROB in lieu of LC NO11A at Km13/300-400 at Jakkur between chennasandra-yelahanka station on bangalore city -Darmavaram section | Jakkur village main road towards yelahanka | 2990.00 |
| 5 | Construction of ROB near L.C No. 133 at Hoodi gate at Railway km 337/300-400 between white field and K.R.Puram Railway line | Hoodi village and K.R.Puram road. | 4455.00 |
| 6 | Construction of RUB at Dubasipalya at LC No10 Ch 11/100-200 | Bangalore mysore road,valgerhalli layout. | 5300.00 |
| 7 | Construction of pedestrain subway near ITC factory on wheelers road at LC NO:138 at km 348/300-400 between Baiyappanahalli and Bangalore east station | Pottery road and Banaswadi road intersection. | 300.00 |
| 8 | Construction of RUB at Railway crossing LC NO 10B near Kodigehalli ,Bangalore between Yeshwanthpur-Yelahanka station. | Kodigehalli village main road and virupakshpura road. | 7155.64 |
| 9 | Construction of ROB in lieu of LC No 131 Sarjapur road, bangalore at km 192/600-700 between heelalige and carmelam railway stations. | Sarjapura main road . | 272.00 |
| 10 | Construction of RUB at Singaihnapalya. | Devasandra Main Road and Whitefield Main Road. | 2966.03 |
| 11 | Construction of light vehicular and pedestrian crossing (RUB) at lingarajapuram Railway crossing (Approach road) | Lingarajapura below ROB Hennur Road | 272.00 |

| | | | |
|---|---|---|---|
| 12 | Construction of RUB near Kengeri Railway station near Kengeri old town. | Service Road parallel to ORR and Kengeri village | 75.00 |
| 13 | Construction of RUB near yelehanka old town(M.E.S circle), Bangalore at Rly. Km 15/900-16/000 between thanisandra and Yelehanka stations. | MES Road, Yelahanka Old town | 1659.91 |
| 14 | Construction of RUB at LC.No: 140B, Kadugondanahalli, Bangalore at Rly .km. 211/900-212/000 between Banasavadi and Hebbal railway stations. | K.G. Halli Main Road. | 5132.25 |
| 15 | Construction of RUB at Narasimhaih compound(Goriplaya) Bangalore at KM 2/800-900 B/W bangalore city and Nayandahalli railway station | Telecom Layout adjacent to Goripalya main road | 3849.78 |
| 16 | Construction of RUB near LC No.9 SPLR.K. Hegdenagar, Bangalore at Rly Km 11/300-400 between Thanisandra and yelehanka station | At Jodidar Gowda Road, adj to Shivaram Karanth Layout | 3800.93 |
| 17 | Construction of ROB at **Karmalaram** in BBMP limits in lieu of **LC No 132** at railway km 193/400 between salem Bangalore city section | Gunjur Main Road from Sarjapura Main road | 4834.36 |
| 18 | Construction of ROB at C**hinnappanahalli** in BBMP limits in lieu of **LC No 134** at railway km 199/800-900 between salem Bangalore city section. | Near Marathahalli Brigade service Road | 4925.57 |
| 19 | Construction of RUB at **Munikolalu** in BBMP limits in lieu of **LC No 133** at railway km 198/800-900 between salem Bangalore city section. | Munikolalu Main Road | 5563.56 |
| 20 | Construction of RUB at **Doddakannahalli** in BBMP limits in lieu of **LC.NO .130** @railway km 191/600-700 between Salem Bangalore city section (kodthi gate) | Kodthi Colony gate on Mallur Road | 6075.78 |
| 21 | Construction of RUB at Kaggadasapura | DRDO complex, Main road | 9031.48 |
| 22 | Construction of RUB in lieu of LC No 6A,agara gate, Bangalore at Rly Km 5/800-900 between channasandra and thanisandra railway stations | Agara village Main road | 5133.37 |
| 23 | Constrcution of RUB at LC No5A at Horamavu village Railway Km 4/800-900 between channasandra and Thanisandra Railway station | Horamavu village main road | 4670.75 |

| | | | |
|---|---|---|---|
| 24 | Construction of RUB Near Nirmala Rani School (Milk colony), Bangalore at Rly Km. 3/700-800 between Malleshwaram and Yeshwanthpura Railway stations. | 18th Cross Malleshwaram adj to Nirmala Rani School. | 2704.90 |
| 25 | Construction of RUB at LC No.144 A/A at Nagenahalli at Rly Km 214/400-500 b/w banaswadi and Hebbal Railway station | Nagenahalli Road, Hebbal | 4757.28 |
| 26 | Construction of RUB near Binny mill tank bund Road, bangalore at railway km 0/800-900 between Bangalore city and nayandahalli Rly stations | Tank Bund Road, at Kempapura Agrahara, Magadi Road. | 1207.38 |
| 27 | Construction of RUB at 18th cross kanakanagara at railway km 214/800-900 between bangalore -Salem railway lines within BBMP limits | Hebbal | 6408.71 |
| 28 | Construcion of ROB in lieu of LC NO :2A near brigade gate way(Mysore lamps), Bangalore at Rly km 4/100-200 between malleshwaram and Yeshwanthpura Railway stations. | Adj to Mysore lamp property, Yeshwanthpura circle. | 2812.23 |
| 29 | Construction of RUB at LC No. 5 at Bapujnagar Bangalore Mysore Railway line. | Bapujinagar Main Road. | 2253.105 |

ಮೇಲ್ಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಥಮ ಆದ್ಯತೆ ಮೇಲೆ ಟಿ.ಡಿ.ಆರ್. ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿ ಅಧಿಸೂಚನೆಗಳನ್ನು ಹೊರಡಿಸಲಾಗುವುದು. ಆದರೆ ಸಾರ್ವಜನಿಕರು ಟಿ.ಡಿ.ಆರ್ ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅನೇಕ ಸ್ವತ್ತಿನ ಮಾಲೀಕರು ವಿರೋಧವನ್ನು ವ್ಯಕ್ತಪಡಿಸುವ ಸಂಭವವಿದೆ. ಅಲ್ಲದೆ ಟಿ.ಡಿ.ಆರ್ ನಿಯಮಾವಳಿ ಅನ್ವಯ ಭೂಸ್ವಾದೀನಪಡಿಸಿಕೊಳ್ಳಲು ಕಾನೂನಿನ ಅಡಿಯಲ್ಲಿ ಯಾವುದೇ ವ್ಯಕ್ತಿಯನ್ನು ಒತ್ತಾಯಿಸುವಂತಿರುವುದಿಲ್ಲ. ಟಿ.ಡಿ.ಆರ್ ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಿ, ಸಾರ್ವಜನಿಕರು ಟಿ.ಡಿ.ಆರ್ ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಮುಂದೆ ಬರಲು ನಿಗಧಿತ ಕಾಲಾವಕಾಶವನ್ನು ನೀಡಿ, ತದನಂತರ ಸಾರ್ವಜನಿಕರಿಂದ ಸಾಕಷ್ಟು ಉತ್ತೇಜನ ದೊರಕದಿದ್ದಲ್ಲಿ ಭೂಸ್ವಾಧೀನ ಕಾಯ್ದೆ 1894 ರ ಸೆಕ್ಷನ್ 23 ರಲ್ಲಿ ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ Guidance value ಯಲ್ಲಿ ನಿಗಧಿಪಡಿಸಲಾದ ದರಗಳ ಅನ್ವಯ ಪರಿಹಾರ ನೀಡಿ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ.

ಮೇಲ್ಕಂಡ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಮೇಲ್ಕಂಡ ಸ್ವತ್ತುಗಳನ್ನು 1894 ರ ಭೂಸ್ವಾಧೀನ ಕಾಯ್ದೆ ಸೆಕ್ಷನ್ 23 ರ ಅನ್ವಯ ಭೂಸ್ವಾಧೀನವನ್ನು ಪ್ರಾಮುಖ್ಯತೆಯ ಮೇರೆಗೆ ಹಂತ–ಹಂತವಾಗಿ ಸ್ವತ್ತುಗಳನ್ನು ವಶಪಡಿಸಿಕೊಂಡು ಹಾಗೂ ಅದಕ್ಕೆ ತಗಲುವ ಭೂ ಪರಿಹಾರ ಹಾಗೂ ಇತರೆ ವೆಚ್ಚಗಳಿಗೆ ಪಾಲಿಕೆಯ ಆಯವ್ಯಯಗಳಲ್ಲಿ ಮೀಸಲಿಡುವ ಅನುದಾನದಿಂದ ಭರಿಸುವ ಬಗ್ಗೆ ಆಯುಕ್ತರಿಗೆ ಅಧಿಕಾರ ನೀಡಲು ಅನುಮೋದನೆಯನ್ನು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**_ನಿರ್ಣಯ :_ ದಿನಾಂಕ : 12–01–2012 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## _43]. ವಿಷಯದ ಸಂಖ್ಯೆ :–ತೆಆಸ್ಥಾಸ/431/2011–12_

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಉಆ(ಕಂ)ಪಿ.ಆರ್/ 1507/11–12, ದಿನಾಂಕ ಃ 19–01–2012ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಾಯ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಆಸ್ತಿ ತೆರಿಗೆ ಸ್ವೀಕರಿಸಲು ಪ್ರತಿಯೊಂದು ವಾರ್ಡ್‌ನಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಸದರಿ ಕೇಂದ್ರಗಳಲ್ಲಿ ಆಸ್ತಿ ತೆರಿಗೆ ಸ್ವೀಕರಿಸುವಲ್ಲಿ ಕರ್ನಾಟಕ ಸರ್ಕಾರದ

ಅಂಗ ಸಂಸ್ಥೆಯಾದ ಕಿಯೋನಿಕ್ಸ್ ಸಂಸ್ಥೆಯ ಜೊತೆಯಲ್ಲಿ Memorandum of Understanding ಅನುಸಾರ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿ ಕಾರ್ಯನಿರ್ವಹಿಸತ್ತಿದ್ದು ಸದರಿಯವರುಗಳನ್ನು ಕಾಲಕಾಲಕ್ಕೆ ನವೀಕರಿಸುತ್ತಾ ಬಂದಿರುತ್ತದೆ.

ಮುಂದುವರೆದಂತೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ದಿನಾಂಕ : 1–10–2011 ರಿಂದ ನಾಲ್ಕು ತಿಂಗಳ ಅವಧಿಗೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು ದಿನಾಂಕ : 15–9–2011 ರಂದು ನಡೆದ ಸಭೆಯ ವಿಷಯದ ಸಂಖ್ಯೆ : ತೆಆಸ್ಥಾಸ : 286 : 2011–12 ರಲ್ಲಿ ದಿನಾಂಕ : 15–9–2011 ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಸಮಗ್ರ ಸರ್ವೆ ಕಾರ್ಯವು ಪೂರ್ಣಗೊಡಿಂದ್ದು ಸದರಿ ಸರ್ವೆ ಕಾರ್ಯದಲ್ಲಿ ಗುರುತಿಸಲಾಗಿರುವ ಎಲ್ಲಾ ಸ್ವತ್ತುಗಳನ್ನು ಜಿ.ಐ.ಎಸ್ ಮಾಹಿತಿಯೊಂದಿಗೆ ತಾಳೆಮಾಡಿ, ಪ್ರತಿಯೊಂದು ಸ್ವತ್ತಿಗೂ ಹೊಸದಾಗಿ ಪಿ.ಐ.ಡಿ ಸಂಖ್ಯೆಯನ್ನು ನೀಡುವ ಕಾರ್ಯವು ಶೇಕಡ 70 ರಷ್ಟು ಪೂರ್ಣಗೊಂಡಿರುತ್ತದೆ. ಸದರಿ ಕಾರ್ಯವು ಪೂರ್ಣಗೊಳಿಸಲು ಇನ್ನೂ ಸುಮಾರು 3 ರಿಂದ 4 ತಿಂಗಳ ಕಾಲಾವಕಾಶ ಅವಶ್ಯಕತೆ ಇರುತ್ತದೆ. ತದನಂತರ ಆಸ್ತಿ ತೆರಿಗೆ, ಬೇಡಿಕೆ, ಬಾಕಿ ಇತ್ಯಾದಿ ವಿವರಗಳನ್ನು ಸಿದ್ಧಪಡಿಸಿ ಪ್ರತಿಯೊಂದು ಸ್ವತ್ತಿನ ಮಾಲೀಕರಿಗೆ ಸೂಚನಾ ಪತ್ರವನ್ನು ಜಾರಿ ಮಾಡಿ ಅವುಗಳಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ ಸ್ವತ್ತಿನ ಮಾಲೀಕರಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ಗಣಕಯಂತ್ರದಲ್ಲಿ ದಾಖಲಿಸಿಕೊಳ್ಳಬೇಕಾಗಿರುತ್ತದೆ. ಹಾಗೂ ಕಂದಾಯ ಇಲಾಖೆಯ ಕಾರ್ಯನಿರ್ವಾಹಕ ಸಿಬ್ಬಂದಿಯು ಸದರಿ ಕಾರ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ.

ಮುಂದುವರೆದಂತೆ 2012–2013ನೇ ಸಾಲಿಗೆ ಸಂಬಂಧಪಟ್ಟಂತೆ ಆಸ್ತಿ ತೆರಿಗೆ ಸ್ವೀಕೃತಿಯು ದಿನಾಂಕ : 1–04–2012 ರಿಂದ ಪ್ರಾರಂಭಗೊಂಡು ದಿನಾಂಕ : 30–05–2012 ರಂದು ಮುಕ್ತಾಯಗೊಳ್ಳುತ್ತದೆ. ಕೆ.ಎಂ.ಸಿ ಕಾಯ್ದೆ ಪ್ರಕಾರ ಹಣಕಾಸು ವರ್ಷದ ಪ್ರಾರಂಭದಿಂದ 30 ದಿನಗಳ ಒಳಗಾಗಿ ಪೂರ್ಣ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇಕಡ 5 ರಷ್ಟು ರಿಯಾಯಿತಿ ನೀಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಅವಧಿಯಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಆಸ್ತಿ ತೆರಿಗೆ ಮಾಲೀಕರು ತೆರಿಗೆ ಪಾವತಿಸಲು ಬರುತ್ತಾರೆ. ಹೊಸದಾಗಿ ನೀಡಲಾಗಿರುವ ಪಿ.ಐ.ಡಿ ಸಂಖ್ಯೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ : 1–4–2012 ರಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ. ಈ ಸಂಬಂಧ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳ ಸೇವೆಯು ಅತ್ಯವಶ್ಯಕವಾಗಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಕಂದಾಯ ಇಲಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಈಗಾಗಲೇ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳನ್ನೆ ದಿನಾಂಕ : 1–02–2012 ರಿಂದ ಆರು ತಿಂಗಳ ಅವಧಿಗೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಿದೆ.

***<u>ನಿರ್ಣಯ :</u>*** **ದಿನಾಂಕ : 19–01–2012 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## <u>*44]. ವಿಷಯದ ಸಂಖ್ಯೆ :–ತೆಆಸ್ಥಾಸ/432/2011–12*</u>

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)179/11–12, ದಿನಾಂಕ : 20–01–2012 ರಲ್ಲಿ ವಿವರಿಸಿರುವಂತೆ, ಶ್ರೀ ರಾ.ಪ. ರವಿಶಂಕರ್, ಕಾರ್ಯದರ್ಶಿ ಹೊಂಗಿರಣ ಟ್ರಸ್ಟ್ (ರಿ) ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಆವರಣ, 8ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 003 ರವರು ಮನವಿ ಸಲ್ಲಿಸಿ, ತಮ್ಮ ಸಂಘದ ಆಶ್ರಯದಲ್ಲಿ ಇದೇ ಬೆಂಗಳೂರು ಸಿಟಿ ಪ್ಯಾಲೆಸ್ ಗುಟ್ಟಹಳ್ಳಿ ವೃತ್ತದ ಬಳಿಯಿರುವ ಮಹಾನಗರ ಪಾಲಿಕೆಯ ಉಣ್ಣಾಮಲೈ ಹೆರಿಗೆ ಆಸ್ಪತ್ರೆ ಸೇವಾ ಕೇಂದ್ರ (ಕಿಡ್ನಿ ಡಯಾಲಿಸಿಸ್, ಡಯಾಬಿಟಿಕ್ಸ್, ಸಾಮಾನ್ಯ ರೋಗಗಳಿಗೆ ಎಕ್ಸರೇ, ಇ.ಸಿ.ಜಿ, ಕ್ಲಿನಿಕಲ್ ಲ್ಯಾಬ್) ವನ್ನು ಸ್ಥಾಪಿಸಲು ಕಾರ್ಯ ನಿರತರಾಗಿರುತ್ತಾರೆ. ಸುಮಾರು ರೂ. 250 ಲಕ್ಷಗಳ ವೆಚ್ಚದಲ್ಲಿ ಪ್ರಾರಂಭವಾಗುತ್ತಿರುವ ವಾಸವಿ ಹೆಲ್ತ್ ಕೇರ್ ಸಂಸ್ಥೆಯ ವತಿಯಿಂದ ಪ್ರತಿ ವರ್ಷವೂ ಸಾವಿರಾರು ರೋಗಿಗಳಿಗೆ ಕಡಿಮೆ ವೆಚ್ಚದಲ್ಲಿ ಉತ್ತಮ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ. ಇಂತಹ ಮಾನವೀಯತೆ ಮೆರೆಯುವ ಕಾರ್ಯದ ಯೋಜನಾ ವರದಿಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿರುವುದಾಗಿ ತಿಳಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ತಮ್ಮ ಆರೋಗ್ಯ ಕೇಂದ್ರದ ಡಯಾಲಿಸಿಸ್ ಯಂತ್ರೋಪಕರಣಗಳಿಗಾಗಿ ರೂ. 130 ಲಕ್ಷಗಳ ಸಹಾಯ ಧನ ನೀಡಿ ಸುಸಜ್ಜಿತವಾದ ಆರೋಗ್ಯ ಕೇಂದ್ರವನ್ನು ನಡೆಸುವುದರ ಮೂಲಕ ಬೆಂಗಳೂರು ಜನತೆಯ ಆರೋಗ್ಯ ಸುಧಾರಣೆಗೆ ಸಹಕರಿಸಲು ವಿನಂತಿಸಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ– 2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು. ಆದರೆ, ಪಾಲಿಕೆಯ ಸದ್ಯದ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ತಿರಸ್ಕರಿಸುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** **ದಿನಾಂಕ : 20–01–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಹೊಂಗಿರಣ ಟ್ರಸ್ಟ್ (ರಿ) ಸಂಘದ ಆಶ್ರಯದಲ್ಲಿ ಆರೋಗ್ಯ ಕೇಂದ್ರ ನಡೆಸಲು, 2011–12ನೇ ಸಾಲಿನ ಆಯವ್ಯಯದ ಲೆಕ್ಕಶಿರ್ಷಿಕೆ 17–ಕಾಮಗಾರಿ–ಸಾರ್ವಜನಿಕ ಕಾಮಗಾರಿಗಳು (ವಲಯವಾರು) – ವಲಯ ಕಟ್ಟಡಗಳು– ವಾರ್ಡ್ ಸಂಖ್ಯೆ : 64ರಲ್ಲಿ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿಗೆ ಮೀಸಲಿರಿಸಿರುವ ಮೊತ್ತದಲ್ಲಿ (ಪುಟ ಸಂಖ್ಯೆ : 104) ಫೆಬ್ರವರಿ–2012 ರಲ್ಲಿ ರೂ.35.00 (ಮೂವತ್ತೈದು ಐದು ಲಕ್ಷ) ಮಾರ್ಚ್–2012 ರಲ್ಲಿ ರೂ.35.00 (ಮೂವತ್ತೈದು ಐದು ಲಕ್ಷ) ಅನುದಾನವನ್ನು ಸದರಿ ಸಂಸ್ಥೆಗೆ ಒದಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***–: ಹೆಚ್ಚುವರಿ ವಿಷಯ :–***

### ***01]. ವಿಷಯದ ಸಂಖ್ಯೆ :–ತೆಆಸ್ಥಾಸ/433/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(1)/ಪಿಆರ್/161/11–12, ದಿನಾಂಕ ಃ 07–01–2012ರಲ್ಲಿ ವಿವರಿಸಿರುವಂತೆ, ಡಾ॥.ಅಶ್ವತ್‌ನಾರಾಯಣ್ ಸಿ.ಎನ್. ಶಾಸಕರು, ಮಲ್ಲೇಶ್ವರಂ ಕ್ಷೇತ್ರ, ರವರು ದಿನಾಂಕ:20–08–2011 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದು, ಸದರಿ ಮನವಿಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ತೆರೆಯಲು ಅನುಮತಿ ಕೋರಿರುತ್ತಾರೆ.

1. ವಾರ್ಡ್ ನಂ.65 ಹಾಗೂ ವಾರ್ಡ್ ನಂ.76, ಮೊದಲನೇ ಮಹಡಿ, 7ನೇ ಅಡ್ಡರಸ್ತೆ, 13ನೇ ಮುಖ್ಯರಸ್ತೆ, ಗಾಯಿತ್ರಿನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಮೊದಲನೇ ಮಹಡಿಯಲ್ಲಿ ಖಾಲಿ ಇರುವ ಸ್ಥಳವನ್ನು ಹಾಗೂ ರಾಜಾಜಿನಗರ, 2ನೇ ಹಂತ, 13ನೇ ಮುಖ್ಯರಸ್ತೆ ಹಾಗೂ 7ನೇ ಅಡ್ಡರಸ್ತೆಯಲ್ಲಿರುವ ಅಂಚೆ ಕಛೇರಿ ಕಟ್ಟಡದ ಮೊದಲನೇ ಮಹಡಿಯಲ್ಲಿ ಖಾಲಿ ಇರುವ ಸ್ಥಳಗಳು ಲಭ್ಯವಿರುವುದು.
2. ವಾರ್ಡ್ ನಂ.36, ಮತ್ತಿಕೆರೆಯ ವಾರ್ಡ್ ಕಛೇರಿ, ನೇತಾಜಿ ಸರ್ಕಲ್, ಮತ್ತಿಕೆರೆಯಲ್ಲಿ ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸುವ ಬಗ್ಗೆ ಸೂಕ್ತ ಸ್ಥಳಾವಕಾಶ ನೀಡಲು ಕೋರಿರುವ ಸಂಬಂಧ ಸ.ಕಾ.ನಿ.ಅ (ಮತ್ತಿಕೆರೆ) ರವರು ಮತ್ತಿಕೆರೆ ಪಾಲಿಕೆ ಕಛೇರಿ ಕಟ್ಟಡದಲ್ಲಿನ 2ನೇ ಅಂತಸ್ತಿನಲ್ಲಿ ಸುಮಾರು 750 ಚದರ ಅಡಿ ವಿಸ್ತೀರ್ಣ ಲಭ್ಯವಿರುವುದಾಗಿ ವರದಿ ನೀಡಿರುತ್ತಾರೆ.

ಸರ್ಕಾರದ ಆದೇಶ ಸಂ:ನಅಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ:02–06–2003 ನಡುವಳಿಗಳಲ್ಲಿ ತಿಳಿಸಿರುವಂತೆ

i ) ಉಚಿತ ಜಮೀನು ಮಂಜೂರಾತಿ,

ಅ) ಸರ್ಕಾರದಿಂದ ನಡೆಸಲಾಗುತ್ತಿರುವ ಶಾಲೆಗಳು/ಕಾಲೇಜುಗಳು/ಹಾಸ್ಟೆಲ್‌ಗಳು/ಅಂಗನವಾಡಿಗಳು/ ಸಾರ್ವಜನಿಕ ಲೈಬ್ರರಿಗಳು/ಸ್ತ್ರೀ ಸ್ವೀಕಾರ ಕೇಂದ್ರಗಳು ಮತ್ತು ಪೋಲೀಸ್ ಠಾಣೆಗಳು ಎಂಬುದಾಗಿರುತ್ತವೆ.

ಮೇಲೆ ತಿಳಿಸಿರುವ ಸ್ಥಳಗಳಲ್ಲಿ ಸಾರ್ವಜನಿಕ ಗ್ರಂಥಾಲಯ ತೆರೆಯಲು ಉಚಿತವಾಗಿ ಅನುಮತಿ ನೀಡುವ ಮಾನ್ಯ ಆಯುಕ್ತರ ದಿನಾಂಕ : 07.01.2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ :24.01.2012ರ ನಿರ್ಣಯ.

***ನಿರ್ಣಯ :*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24.01.2012ರ ನಿರ್ಣಯವನ್ನು ಒಪ್ಪಿದೆ.**

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**